ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 10 ಭಾನುವಾರ 2023

ಸಂಪುಟ: 44 | ಸಂಚಿಕೆ: 233 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.cor..

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಆರೂವರೆ ತಿಂಗಳಲ್ಲಿ ಅಭಿವೃದ್ಧಿಗೆ

73,928 ಕೋಟಿ ವೆಚ್ಚ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿವರಣೆ



ಬೆಂಗಳೂರು: ಅಧಿಕಾರಕ್ಕೆ ಬಂದ ಆರೂವರೆ ತಿಂಗಳುಗಳ ಆಡಳಿತಾವಧಿಯಲ್ಲಿ ರೂ. 73,928 ಕೋಟಿ ಅನುದಾನವನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ವೆಚ್ಚ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಸರಣಿ ಟ್ವೀಟ್ ಮೂಲಕ ಮಾಹಿತಿ ಹಂಚಿಕೊಂಡಿರುವ ಮುಖ್ಯಮಂತ್ರಿ, ಗ್ಯಾರಂಟಿ ಯೋಜನೆಗಳ ಮೂಲಕ ಜನರ ಜೀವನ ಮಟ್ಟ ಸುಧಾರಣೆ ಮತ್ತು ರಾಜ್ಯದ ಅಭಿವೃದ್ಧಿ ಕಾರ್ಯಗಳೆರಡನ್ನೂ ಸಮಾನವಾಗಿ ಮುನ್ನಡೆಸುವ ಮೂಲಕ 'ಕರ್ನಾಟಕ ಮಾದರಿ ಆಡಳಿತ'ವೆಂಬ ಹೊಸ ಕಲ್ಪನೆಗೆ ನಾಂದಿಯಾಡಿರುವುದಾಗಿ ಹೇಳಿದ್ದಾರೆ.

ಹುಬ್ಬಳ್ಳಿಯಲ್ಲಿ ನಡೆದ ಹೂಡಿಕೆದಾರರ ಸಮಾವೇಶದಲ್ಲಿ 16 ಕಂಪನಿಗಳೊಂದಿಗೆ ರೂ. 1,275 ಕೋಟಿ ಬಂಡವಾಳ ಹೂಡಿಕೆಯ ವಿವಿಧ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಮಾದರಿಯಲ್ಲೇ ಕಾರ್ಮಿಕ ಸಾರಿಗೆ ವಲಯವನ್ನು ಸ್ಥಾಪಿಸಲಾಗುವುದು. ಚಾಲಕರು, ಕ್ಲೀನರ್, ಮೆಕ್ಯಾನಿಕ್‌ಗಳು, ಪಂಕ್ಚರ್ ಅಂಗಡಿಗಳಲ್ಲಿ ಕೆಲಸ ಮಾಡುವವರು ಮತ್ತಿತರರು ಇದರ ಲಾಭ ಪಡೆಯಲಿದ್ದಾರೆ ಎಂದು ಅವರು ತಿಳಿಸಿದ್ದಾರೆ. ಕೈಗಾರಿಕಾ ನೀತಿಯಡಿ ಸರ್ಕಾರದ ಪ್ರೋತ್ಸಾಹ, ರಿಯಾಯಿತಿ ಪಡೆದಿರುವ ಕೈಗಾರಿಕೆಗಳು 'ಡಿ' ಗ್ರೂಪ್‌ನಲ್ಲೇ 100ರಷ್ಟು ಹಾಗೂ ಒಟ್ಟಾರೆ ಶೇ 70ರಷ್ಟು ಉದ್ಯೋಗಗಳನ್ನು ಕನ್ನಡಿಗರಿಗೆ ನೀಡಬೇಕೆಂಬ ಷರತ್ತು ವಿಧಿಸಲಾಗಿದೆ. ರಾಜ್ಯದ ಎಲ್ಲ ಸ್ಥಳೀಯ ನಗರಾಭಿವೃದ್ಧಿ ಸಂಸ್ಥೆಗಳಲ್ಲಿ ಸ್ವಚ್ಛ ಭಾರತ್ ಮಿಷನ್ ಅನುಷ್ಠಾನ ಮಾಡಲು ಪ್ರತ್ಯೇಕ ಐಎಎಸ್ ಅಧಿಕಾರಿ ನೇಮಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ. ಎಲ್ಲ ಮಹಾನಗರ ಪಾಲಿಕೆಗಳಲ್ಲಿ ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ಮತ್ತು ವಿಲೇವಾರಿಗೆ ಅಗತ್ಯವಿರುವ ಯಂತ್ರೋಪಕರಣಗಳನ್ನು ಮತ್ತು ಸಿವಿಲ್ ಕಾಮಗಾರಿ ಕೈಗೊಳ್ಳಲು ವಿಸ್ತೃತ ಯೋಜನೆಗೆ ಅನುಮತಿ ನೀಡಿದ್ದು 370 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಅಂಕಿ–ಅಂಶ ಸಮೇತ ಮಾಹಿತಿ ನೀಡಿದ್ದಾರೆ.

ಮಣ್ಣಲ್ಲಿ ಮಣ್ಣಾದ ಕನ್ನಡದ 'ಕುಲವಧು'

ನೆಲಮಂಗಲದ ತೋಟದ ಮನೆಯಲ್ಲಿ ಲೀಲಾವತಿ ಅಂತ್ಯಕ್ರಿಯೆ





ಬೆಂಗಳೂರು, ಡಿ.9– ವಯೋಸಹಜ ಕಾಯಿಲೆಯಿಂದ ಶುಕ್ರವಾರ ವಿಧಿವಶರಾದ ಕನ್ನಡ ಚಿತ್ರರಂಗದ ಹಿರಿಯ ನಟಿ ಡಾ. ಲೀಲಾವತಿ ಅವರ ಅಂತ್ಯಕ್ರಿಯೆ ಶನಿವಾರ ಸಂಜೆ ನೆಲಮಂಗಲ ಸಮೀಪವಿರುವ ಸೋಲದೇವನಹಳ್ಳಿ ಗ್ರಾಮದ ಅವರ ತೋಟದ ಮನೆಯಲ್ಲಿ ಬಂಟರ ಸಮುದಾಯದ ವಿಧಿ–ವಿಧಾನದಂತೆ ನಡೆಯಿತು. ಇದೇ ವೇಳೆ ಸಕಲ ಸರ್ಕಾರಿ ಗೌರವ ಸಲ್ಲಿಸಲಾಯಿತು. ಲೀಲಾವತಿ ಅವರ ಪುತ್ರ ವಿನೋದ್ ರಾಜ್ ಅಂತಿಮ ವಿಧಿ–ವಿಧಾನಗಳನ್ನು ನೆರವೇರಿಸಿದರು.

ಕರ್ನಾಟಕ ಸರ್ಕಾರದ ಪರವಾಗಿ ಮೂರು ಸುತ್ತು ಕುಶಾಲುತೋಪು ಸಿಡಿಸಿ, ಸರ್ಕಾರಿ ಗೌರವ ಸಲ್ಲಿಸಲಾಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಹೆಚ್.ಮುನಿಯಪ್ಪ ಸೇರಿದಂತೆ ಹಲವು ನಾಯಕರು, ಚಿತ್ರರಂಗದ ಗಣ್ಯರು, ಕುಟುಂಬಸ್ಥರು ಹಿರಿಯ ನಟಿಗೆ ಅಂತಿಮ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಡಾ.ಶಿವಶಂಕರ ಎನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ಅನುರಾಧ ಕೆ.ಎನ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪುರುಷೋತ್ತಮ್, ಉಪ ವಿಭಾಗಾಧಿಕಾರಿ ಶ್ರೀನಿವಾಸ್, ತಹಶೀಲ್ದಾರ್ ಅರುಂಧತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಅಂತಿಮ ದರ್ಶನ ಪಡೆದ ಗಣ್ಯರು: ಇಂದು ಬೆಳಗ್ಗೆ ನೆಲಮಂಗಲದ ಅಂಬೇಡ್ಕರ್ ಮೈದಾನದಲ್ಲಿ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಬಳಿಕ ಲೀಲಾವತಿಯವರ ಕಲಾಸೇವೆಯನ್ನು ಗೌರವಿಸುವ ಉದ್ದೇಶದಿಂದ ಅಂಬೇಡ್ಕರ್ ಮೈದಾನದಿಂದ ಲೀಲಾವತಿ ಅವರ ಪಾರ್ಥಿವ ಶರೀರವನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ, ನಟಿಯರಾದ ಸುಧಾರಾಣಿ, ಮಾಳವಿಕಾ ಅವಿನಾಶ್, ತಾರಾ, ರಮೇಶ್ ಅರವಿಂದ್, ಟಿ.ಎಸ್.ನಾಗಾಭರಣ, ▶ 9ನೇ ಪುಟಕ್ಕೆ


ಜೆಡಿಎಸ್‌ನಿಂದ ಸಿ.ಎಂ.ಇಬ್ರಾಹಿಂ, ಸಿ.ಕೆ.ನಾಣು ಉಚ್ಚಾಟನೆ

● ಪಕ್ಷದ ರಾಷ್ಟ್ರೀಯ ಅಧ್ಯಕ್ಷ ದೇವೇಗೌಡರ ನೇತೃತ್ವದಲ್ಲಿ ನಡೆದ ಕಾರ್ಯಕಾರಿಣಿ ಸಭೆಯಲ್ಲಿ ನಿರ್ಧಾರ

● ಈ ಇಬ್ಬರು ನಾಯಕರು ಪಕ್ಷ ವಿಭಜಿಸಿ ಕಾಂಗ್ರೆಸ್ ಜೊತೆ ಕೈಜೋಡಿಸಲು ಮುಂದಾಗಿದ್ದರು



ಸಿ.ಎಂ.ಇಬ್ರಾಹಿಂ



ಸಿ.ಕೆ.ನಾಣು

ಬೆಂಗಳೂರು, ಡಿ. 9(ಕೆಎಂಶಿ)– ಪಕ್ಷ ವಿರೋಧಿ ಚಟುವಟಿಕೆ ನಡೆಸುತ್ತಿರುವ ಆರೋಪದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಉಪಾಧ್ಯಕ್ಷ ಸಿ.ಕೆ.ನಾಣು ಹಾಗೂ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರನ್ನು ಜೆಡಿಎಸ್‌ನಿಂದ ಇಂದು ಉಚ್ಚಾಟಿಸಲಾಗಿದೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ. ದೇವೇಗೌಡ ಅವರ ನೇತೃತ್ವದಲ್ಲಿ ನಡೆದ ಕಾರ್ಯಕಾರಿಣಿ ಸಭೆಯಲ್ಲಿ ಉಚ್ಚಾಟಿಸುವ ಎರಡು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ಎನ್‌ಡಿಎ ಮೈತ್ರಿಕೂಟದೊಂದಿಗೆ ಕೈಜೋಡಿಸಿರುವುದನ್ನು ವಿರೋಧಿಸಿ ಕೇರಳ ಘಟಕದ ಒಂದು ತಂಡ, ಉಪಾಧ್ಯಕ್ಷ ನಾಣು, ಇಬ್ರಾಹಿಂ ಸೇರಿದಂತೆ ಕೆಲವು ಮುಖಂಡರು ಪ್ರತ್ಯೇಕ ಸಭೆ ನಡೆಸಿ ರಾಷ್ಟ್ರೀಯ ಅಧ್ಯಕ್ಷರನ್ನೇ ಉಚ್ಚಾಟಿಸಿ ಪಕ್ಷವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಮುಂದಾಗಿದ್ದರು.

ಈ ಗುಂಪಿಗೆ ಕಾಂಗ್ರೆಸ್ ಪರೋಕ್ಷ ಬೆಂಬಲ ನೀಡುತ್ತಿದೆ ಎಂಬ ಮಾಹಿತಿ ಅರಿಯುತ್ತಿದ್ದಂತೆ ಗೌಡರು ತುರ್ತು ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನಡೆಸಿ, ಪಕ್ಷ ವಿರೋಧಿ ಚಟುವಟಿಕೆ ನಡೆಸುವವರನ್ನು ಉಚ್ಚಾಟಿಸಿದರು. ನಾಣು ಮತ್ತು ಇಬ್ರಾಹಿಂ ಪಕ್ಷವನ್ನು ವಿಭಜಿಸಿ ಕಾಂಗ್ರೆಸ್ ಜೊತೆ ಕೈಜೋಡಿಸಲು ಮುಂದಾಗಿದ್ದರು ಎಂಬ ಆರೋಪದ ಹಿನ್ನೆಲೆಯಲ್ಲಿ ತುರ್ತು ಕಾರ್ಯಕಾರಿಣಿ ನಡೆಸಿದ ಗೌಡರು ಸಭೆಯಲ್ಲೇ ಈ ಮಹತ್ವದ ತೀರ್ಮಾನ ಕೈಗೊಂಡಿದ್ದಾರೆ. ಸಭೆ ನಿರ್ಣಯ ಮಾಡುತ್ತಿದ್ದಂತೆ ರಾಷ್ಟ್ರೀಯ ಅಧ್ಯಕ್ಷರು ಆದೇಶ ಕೂಡ ಹೊರಡಿಸಿದ್ದಾರೆ.

ಇಬ್ರಾಹಿಂ ಅವರನ್ನು ಕಳೆದ ಕೆಲವು ದಿನಗಳ ಹಿಂದಷ್ಟೇ ರಾಜ್ಯಾಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿ, ಅಮಾನತು ಮಾಡಿದ್ದರು, ಇದೀಗ ಉಚ್ಚಾಟನೆ ಮಾಡಿದ್ದಾರೆ.

ಇಂದಿನ ಸಭೆಯಲ್ಲಿ ಪಕ್ಷ ವಿರೋಧಿಗಳ ವಿರುದ್ಧ ಕ್ರಮಕೈಗೊಳ್ಳುವ ಜೊತೆಗೆ ಎನ್‌ಡಿಎ ಮೈತ್ರಿಕೂಟ ಸೇರಿದ ನಂತರದಲ್ಲಿ ಪಕ್ಷದ ನಿಲುವುಗಳು, ಮುಂಬರುವ ಲೋಕಸಭಾ ▶ 9ನೇ ಪುಟಕ್ಕೆ

ಬೆಂಗಳೂರಲ್ಲಿ ಎನ್‌ಐಎಯಿಂದ ಶಂಕಿತ ಭಯೋತ್ಪಾದಕನ ಬಂಧನ

ಬೆಂಗಳೂರು, ಡಿ. 9(ಕೆಎಂಶಿ)– ರಾಷ್ಟ್ರದಲ್ಲಿ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸುತ್ತಿದ್ದ ಶಂಕಿತ ಭಯೋತ್ಪಾದಕನನ್ನು ಇಂದು ನಗರದಲ್ಲಿ ರಾಷ್ಟ್ರೀಯ ಭದ್ರತಾ ಸಂಸ್ಥೆ (ಎನ್‌ಐಎ) ಹಾಗೂ ಸ್ಥಳೀಯ ಪೊಲೀಸರು ಬಂಧಿಸಿದ್ದಾರೆ.

ಇಸ್ಲಾಮಿಕ್ ಸ್ಟೇಟ್ (ಐಸಿಸ್) ಭಯೋತ್ಪಾದನಾ ಸಂಘಟನೆಯೊಂದಿಗೆ ಸಂಪರ್ಕ ಹೊಂದಿದ್ದ ಆರೋಪದ ಮೇಲೆ ಎನ್‌ಐಎ ಇಂದು ರಾಷ್ಟ್ರಾದ್ಯಂತ 44 ಕಡೆ ಏಕಕಾಲದಲ್ಲಿ ದಾಳಿ ನಡೆಸಿ 13 ಮಂದಿ ಭಯೋತ್ಪಾದಕರನ್ನು ಬಂಧಿಸಿದೆ. ಮುಂಬೈ ಮೂಲದ ಶಂಕಿತ ವ್ಯಕ್ತಿ ಹಲವು ವರ್ಷಗಳ ಹಿಂದೆ ನಗರಕ್ಕೆ ಆಗಮಿಸಿ, ಟ್ಯಾನರಿ ರಸ್ತೆಯಲ್ಲಿ ಶಾಲೆ ನಡೆಸುತ್ತಿದ್ದ, ಈತನ ಪತ್ನಿ ವೈದ್ಯೆಯಾಗಿದ್ದು, ಚಿಕಿತ್ಸಾಲಯ ಹೊಂದಿದ್ದಳು. ಆರೋಪಿ ಐಸಿಸ್ ಜೊತೆ ಸಂಪರ್ಕ ಇರಿಸಿಕೊಂಡಿದ್ದಲ್ಲದೆ, ಒಂದು ಸಮುದಾಯಕ್ಕೆ ಸೇರಿದ ಯುವಕರನ್ನು ಪ್ರಚೋದನಕಾರಿ ಭಾಷಣಗಳ ಮೂಲಕ ಸಂಘಟನೆಗೆ ಸೆಳೆಯುತ್ತಿದ್ದ ಎಂದು ಆರೋಪಿಸಲಾಗಿದೆ.

ಅಲ್–ಖೈದಾ ಮತ್ತು ಐಸಿಸ್ ಸೇರಿದಂತೆ ನಿಷೇಧಿತ ಭಯೋತ್ಪಾದನಾ ಸಂಘಟನೆಗಳ ಜೊತೆ ಸಂಪರ್ಕ ಹೊಂದಿ ಇದರೊಂದಿಗೆ ಸೇರುವಂತೆ ಪ್ರಚೋದಿಸುತ್ತಿದ್ದ. ಆರೋಪಿಯನ್ನು ಅಲಿ ಅಬ್ಬಾಸ್ ಎಂದು ಗುರುತಿಸಲಾಗಿದ್ದು, ಉರ್ದು ಶಾಲೆ ನಡೆಸುವ ▶ 9ನೇ ಪುಟಕ್ಕೆ

ಪೊನ್ನಂಪೇಟೆ ಬಳಿ ರಸ್ತೆ ದರೋಡೆ

ಕಾರಿನೊಂದಿಗೆ ಕೇರಳದ ಉದ್ಯಮಿ ಅಪಹರಿಸಿ 50 ಲಕ್ಷ ರೂ ಸುಲಿಗೆ

15 ಜನರಿದ್ದ ತಂಡದಿಂದ ದುಷ್ಕೃತ್ಯ; ವಿರಾಜಪೇಟೆ ಬಳಿ ಜಖಂಗೊಂಡ ಕಾರು ಪತ್ತೆ



ಮಡಿಕೇರಿ, ಗೋಣಿಕೊಪ್ಪ, ಡಿ.9– ಚಿನ್ನಾಭರಣ ಮಾರಿ ಹಣದೊಂದಿಗೆ ಕೇರಳಕ್ಕೆ ಮರಳುತ್ತಿದ್ದ ಇಬ್ಬರನ್ನು ಮಾರ್ಗಮಧ್ಯೆ 15ಕ್ಕೂ ಅಧಿಕ ಮಂದಿ ಇದ್ದ ತಂಡ ತಡೆದು, ಅವರಿಬ್ಬರನ್ನು ಕಾರಿನ ಸಮೇತ ಅಪಹರಿಸಿ, ಹಲ್ಲೆ ನಡೆಸಿ ಕೊನೆಗೆ ಕಾರಿನಿಂದ ತಳ್ಳಿ, 50 ಲಕ್ಷ ನಗದು ಮತ್ತು ಕಾರಿನೊಂದಿಗೆ ಪರಾರಿಯಾಗಿದ್ದು, ನಂತರ ಅಪಹರಿಸಿದ ಕಾರನ್ನು ಜಖಂಗೊಳಿಸಿ ವಿರಾಜಪೇಟೆ ಬಳಿ ಬಿಟ್ಟು ಪರಾರಿಯಾಗಿದ್ದಾರೆ. ಈ ಘಟನೆ ಪೊನ್ನಂಪೇಟೆ ತಾಲೂಕಿನ ದೇವರಪುರದ ಬಳಿ ನಿನ್ನೆ ಮುಂಜಾನೆ ನಡೆದಿದೆ.

ಕೇರಳದ ಮಲಪ್ಪುರಂ ಜಿಲ್ಲೆಯ ತಿರುವರಾಂಗದಿ ತಾಲೂಕಿನ ಕೊಡಕಾಡ್ ನಿವಾಸಿ, ಗುತ್ತಿಗೆದಾರ ಶಮ್ಷದ್.ಕೆ (38) ಹಣ ಕಳೆದುಕೊಂಡವರಾಗಿದ್ದಾರೆ. ಶಮ್ಷದ್ ಅವರು ಕೇರಳದ ಕೋಯಿಕೋಡ್‌ನ ಅಡರೂರು ಪಂಚಾಯತ್ ವ್ಯಾಪ್ತಿಯ ವಿದ್ಯಾರ್ಥಿ ಅಫ್ನು(22) ಅವರೊಂದಿಗೆ ಡಿ.8 ರಂದು ತಮ್ಮ ಕಾರಿನಲ್ಲಿ ಮೈಸೂರಿಗೆ ಬಂದು, ಚಿನ್ನಾಭರಣಗಳನ್ನು ಇಲ್ಲಿನ ಅಶೋಕ ರಸ್ತೆಯ ಚಿನ್ನಾಭರಣ ಅಂಗಡಿಯಲ್ಲಿ ಮಾರಾಟ ಮಾಡಿ, ಕೇರಳಕ್ಕೆ ಹಿಂತಿರುಗುತ್ತಿದ್ದಾಗ ಮುಂಜಾನೆ ಸುಮಾರು 3 ಗಂಟೆ ವೇಳೆಯಲ್ಲಿ ದೇವರಪುರ ಬಳಿ ಲಾರಿಯೊಂದು ಕೆಟ್ಟು ನಿಂತಿತ್ತು. ಅಲ್ಲಿ ಕಾರು ವೇಗ ತಗ್ಗಿಸಿದಾಗ ಮೂರು ವಾಹನಗಳಲ್ಲಿ ಬಂದ 10 ರಿಂದ 15 ಮಂದಿ ಇದ್ದ ತಂಡ, ಕಾರು ತಡೆದು ಹಣ ನೀಡುವಂತೆ ಬೆದರಿಕೆ ಹಾಕಿದೆ. ನಮ್ಮ ಬಳಿ ಹಣವಿಲ್ಲವೆಂದು ಹೇಳಿದಾಗ ಹಲ್ಲೆ ನಡೆಸಿದ್ದಾರೆ. ನಂತರ ಇವರಿಬ್ಬರನ್ನು ಅವರ ಕಾರಿನಲ್ಲೇ ಅಪಹರಿಸಿದ್ದಾರೆ. ಅರ್ಧ ದಾರಿಯಲ್ಲಿ ಅವರಿಬ್ಬರ ಮೇಲೆ ಹಲ್ಲೆ ನಡೆಸಿ ಕಾರಿನಿಂದ ತಳ್ಳಿ, ▶ 9ನೇ ಪುಟಕ್ಕೆ

ಪುತ್ರಿ ಕೊಂದು ಕೇರಳ ದಂಪತಿ ಆತ್ಮಹತ್ಯೆ

ಮಡಿಕೇರಿ ಸಮೀಪದ ಹೋಂಸ್ಟೇನಲ್ಲಿ ದುರಂತ

ಮಡಿಕೇರಿ, ಡಿ.9–ಪ್ರವಾಸಕ್ಕೆ ಬಂದಿದ್ದ ಕೇರಳದ ದಂಪತಿ, ಪುತ್ರಿಯನ್ನು ಕೊಂದು ತಾವು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಡಿಕೇರಿ ತಾಲೂಕಿನ ಕಗ್ಗೋಡ್ಲು ಗ್ರಾಮದ ಹೋಂಸ್ಟೇನಲ್ಲಿ ಸಂಭವಿಸಿದೆ. ಕೇರಳದ ಕೊಲ್ಲಂ ಮೂಲದ ನಿವಾಸಿ ವಿನೋದ್ ಬಾಬು(40) ಆತನ ಪತ್ನಿ ಜಿಬಿ ಅಬ್ರಾಹಂ(35) ಮತ್ತು ಅವರ 10 ವರ್ಷದ ಪುತ್ರಿ ದುರಂತ ಅಂತ್ಯ ಕಂಡಿದ್ದಾರೆ.

ತಮಿಳುನಾಡಿನಿಂದ ಆನ್‌ಲೈನ್ ಮೂಲಕ ಹೋಂಸ್ಟೇ ಬುಕ್ ಮಾಡಿದ್ದ ವಿನೋದ್ ಬಾಬು ನಿನ್ನೆ ಸಂಜೆ ಹೋಂಸ್ಟೇಗೆ ಪತ್ನಿ ಹಾಗೂ ಮಗಳ ಜೊತೆ ಐಷಾರಾಮಿ ಕಾರಿನಲ್ಲಿ(ಕೆಎಲ್–28,ಎಫ್–0093) ಆಗಮಿಸಿದ್ದರು. ಪೂರ್ವ ನಿಗದಿಯಂತೆ ವಿನೋದ್ ಬಾಬು ಕುಟುಂಬ ಶನಿವಾರ ಬೆಳಗ್ಗೆ 10 ಗಂಟೆಯ ವೇಳೆಗೆ ಹೋಂಸ್ಟೇ ಖಾಲಿ ಮಾಡಬೇಕಿತ್ತು. ಆದರೆ ಸಮಯ ಮೀರಿದರೂ ಕೊಠಡಿಯ ಬಾಗಿಲು ತೆರೆಯದ ಹಿನ್ನೆಲೆಯಲ್ಲಿ ಹೋಂಸ್ಟೇ ಮ್ಯಾನೇಜರ್ ಆನಂದ್,

> **ನಮ್ಮ ಸಾವಿಗೆ ನಾವೇ ಕಾರಣ**
>
> **ಹೋಂ ಸ್ಟೇನಲ್ಲಿ ಮಗಳನ್ನು ಕೊಂದು ಆತ್ಮಹತ್ಯೆಗೆ ಶರಣಾಗಿರುವ ದಂಪತಿ, ಡೆತ್‌ನೋಟ್ ಬರೆದಿಟ್ಟಿದ್ದು 'ನಮ್ಮ ಸಾವಿಗೆ ನಾವೇ ಕಾರಣ... ಆರ್ಥಿಕ ಮುಗ್ಗಟ್ಟಿನಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇವೆ' ಎಂದು ತಿಳಿಸಿದ್ದಾರೆ. ಮಲೆಯಾಳಂ ಭಾಷೆಯಲ್ಲಿ ಪತ್ರ ಬರೆಯಲಾಗಿದ್ದು, ಅದರಲ್ಲಿ ಸಂಬಂಧಿಕರ ಕೆಲವರ ಮೊಬೈಲ್ ಸಂಖ್ಯೆ ಬರೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.**


ಕೊಠಡಿ ಬಾಗಿಲು ಬಡಿದಿದ್ದಾರೆ. ಒಳಗಿಂದ ಪ್ರತಿಕ್ರಿಯೆ ಬಾರದ ಹಿನ್ನೆಲೆಯಲ್ಲಿ ಕಿಟಕಿಯಿಂದ ನೋಡಿದಾಗ ದಂಪತಿ ನೇಣು ಬಿಗಿದುಕೊಂಡಿರುವ ಸ್ಥಿತಿಯಲ್ಲಿ, ಮಗಳು ಮಂಚದ ಮೇಲೆ ಮಲಗಿದ ಸ್ಥಿತಿಯಲ್ಲಿರುವುದು ಕಂಡು ಬಂದಿದೆ. ಬಳಿಕ ಮ್ಯಾನೇಜರ್ ಆನಂದ್, ಮಡಿಕೇರಿ ಗ್ರಾಮಾಂತರ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ ಪೊಲೀಸರು ಸ್ಥಳ ಮಹಜರು ನಡೆಸಿ, ಮೃತರ ಕುಟುಂಬಸ್ಥರನ್ನು ಸಂಪರ್ಕಿಸಿ ಆತ್ಮಹತ್ಯೆಯ ಮಾಹಿತಿ ನೀಡಿದ್ದಾರೆ. ಮೊದಲಿಗೆ ಪುತ್ರಿಯನ್ನು ಕೊಂದು ಬಳಿಕ ದಂಪತಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಒಂದು ಕೊಲೆ ಮತ್ತು ಎರಡು ಆತ್ಮಹತ್ಯೆ ಪ್ರಕರಣ ದಾಖಲಾಗಿದೆ ಘಟನಾ ಸ್ಥಳಕ್ಕೆ ಶ್ವಾನದಳ, ಬೆರಳಚ್ಚು ತಜ್ಞರ ತಂಡ ಆಗಮಿಸಿ ಪರಿಶೀಲನೆ ನಡೆಸಿ, ಮಾಹಿತಿ ಸಂಗ್ರಹಿಸಿತು. ಭಾನುವಾರ ಮಧ್ಯಾಹ್ನದ ವೇಳೆಗೆ ಮೃತರ ಕುಟುಂಬಸ್ಥರು ಮಡಿಕೇರಿ ತಲುಪುವ ಸಾಧ್ಯತೆಗಳಿದ್ದು, ಬಳಿಕ ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಗುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲರಿಂದ

ಇಂದು 'ಬ್ರ್ಯಾಂಡ್ ಮೈಸೂರು' ಲೋಗೋ, ಟ್ಯಾಗ್‌ಲೈನ್ ಬಿಡುಗಡೆ



ಮೈಸೂರು ಜಿಲ್ಲೆಯ ಪ್ರವಾಸೋದ್ಯಮ, ಕಲೆ, ಸಂಸ್ಕೃತಿ, ಪರಂಪರೆ ಬಿಂಬಿಸಲೆಂದು ವಿನ್ಯಾಸಗೊಂಡ ವಿಶೇಷ ಲಾಂಛನವಿದು



ಹೆಚ್.ಕೆ.ಪಾಟೀಲ್

ಮೈಸೂರು, ಡಿ. 9(ಆರ್‌ಕೆ)– ಪ್ರವಾಸೋದ್ಯಮ ಇಲಾಖೆಯು ವಿನ್ಯಾಸಗೊಳಿಸಿರುವ 'ಬ್ರ್ಯಾಂಡ್ ಮೈಸೂರು' ಲೋಗೋ ಮತ್ತು ಟ್ಯಾಗ್‌ಲೈನ್ ಅನ್ನು ನಾಳೆ (ಡಿ.10) ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್ ಬಿಡುಗಡೆ ಮಾಡುವರು.

ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಭಾನುವಾರ ಮಧ್ಯಾಹ್ನ 3.30 ಗಂಟೆಗೆ ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸಲಿದ್ದು, ಶಾಸಕರು, ವಿಧಾನಪರಿಷತ್ ಸದಸ್ಯರು, ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ಭಾಗವಹಿಸುವರು. ಮೈಸೂರಿನ ಕಲೆ, ಸಂಸ್ಕೃತಿ, ಪರಂಪರೆಯನ್ನು ಗುರುತಿಸಿ ವಿಶ್ವದ ಬೇರೆ ಬೇರೆ ರಾಷ್ಟ್ರಗಳಿಗೆ ಪರಿಚಯಿಸುವುದು, ಸ್ಥಳೀಯ ಮಾರುಕಟ್ಟೆ ಉತ್ತೇಜಿಸುವ ಮೂಲಕ ಇಲ್ಲಿನ ಪ್ರವಾಸೋದ್ಯಮ ಅಭಿವೃದ್ಧಿಗೊಳಿಸುವುದು 'ಬ್ರ್ಯಾಂಡ್ ಮೈಸೂರು' ಲಾಂಛನ ಮತ್ತು ಟ್ಯಾಗ್‌ಲೈನ್ ವಿನ್ಯಾಸಗೊಳಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ತಿಳಿಸಿದ್ದಾರೆ.

ಆಗಸ್ಟ್ 14ರಿಂದ ಸೆಪ್ಟೆಂಬರ್ 14ರವರೆಗೆ ಪ್ರವಾಸೋದ್ಯಮ ಇಲಾಖೆಯಿಂದ ಆನ್‌ಲೈನ್‌ನಲ್ಲಿ ಬ್ರ್ಯಾಂಡಿಂಗ್ ಮೈಸೂರು ಸ್ಪರ್ಧೆ ಏರ್ಪಡಿಸಲಾಗಿತ್ತು. ಸುಮಾರು 150 ಮಂದಿ ಸ್ಪರ್ಧೆಯಲ್ಲಿ ಭಾಗವಹಿಸಿ ಲೋಗೋ–ಟ್ಯಾಗ್‌ಲೈನ್, ಮೊಸ್ಕಾಟ್, ಸುಂದರ ಶುಭಕರ ಸ್ಮರಣಿಕೆ ಹಾಗೂ ಬ್ಲಾಗ್‌ಗಳನ್ನು ವಿನ್ಯಾಸ ಮಾಡಿ ಕಳುಹಿಸಿದ್ದರು.

ಅವುಗಳಲ್ಲಿ ಟಾಪ್–10 ಒಳಗಿನ ವಿನ್ಯಾಸಗಳನ್ನು ಆಯ್ಕೆ ಮಾಡಿ ಎಲ್ಲವನ್ನೂ ಒಳಗೊಂಡಂತೆ ವಿಶಿಷ್ಟ ಲೋಗೋ ಮತ್ತು ಟ್ಯಾಗ್‌ಲೈನ್ ಅನ್ನು ಪ್ರವಾಸೋದ್ಯಮ ಇಲಾಖೆ ವಿನ್ಯಾಸಗೊಳಿಸಿದೆ. ಮೈಸೂರು ಅರಮನೆ, ಆನೆ ಮೇಲಿನ ಅಂಬಾರಿ, ಜಾನಪದ ಕಲೆ, ಮೈಸೂರು ವೀಳ್ಯೆದೆಲೆ, ಮೈಸೂರು ಕರಕುಶಲ ವಸ್ತುಗಳನ್ನು ಬಿಂಬಿಸುವ ಲೋಗೋ ಮತ್ತು ಟ್ಯಾಗ್‌ಲೈನ್ ಬಳಸಿಕೊಂಡು ಸ್ಥಳೀಯ ಮಾರುಕಟ್ಟೆ ಅಭಿವೃದ್ಧಿಗೆ ಬಳಸಿಕೊಳ್ಳಬಹುದು ಎಂದರು.

ಹೊರಗಿನವರು ಮೈಸೂರಿಗೆ ಭೇಟಿ ನೀಡಿದ ನೆನಪಿಗಾಗಿ ಬ್ರ್ಯಾಂಡ್ ಮೈಸೂರು ಸ್ಮರಣಿಕೆ ಇರುವ ವಸ್ತುವನ್ನು ಕೊಂಡೊಯ್ದು ಮನೆಯಲ್ಲಿರಿಸಿಕೊಳ್ಳುವಂತೆ ಉತ್ತೇಜನ ನೀಡುವುದು ಇದರ ಉದ್ದೇಶವಾಗಿದೆ. ಮುಂದಿನ ವರ್ಷದ ಜನವರಿ 2 ಅಥವಾ 3ನೇ ವಾರದಲ್ಲಿ 'ಬ್ರ್ಯಾಂಡ್ ಮೈಸೂರು ಉತ್ಸವ' ಎಂಬ ಕಾರ್ಯಕ್ರಮ ಆಯೋಜಿಸಿ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯುವಂತೆ ಪ್ರಯತ್ನಿಸುತ್ತೇವೆ ಹಾಗೂ ಪ್ರತೀ ತಿಂಗಳೂ ಉತ್ಸವ ಏರ್ಪಡಿಸಿ ಎಲ್ಲಾ ಖಾಸಗಿ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಈ ಲೋಗೋ ಬಳಸುವಂತೆ ಉತ್ತೇಜಿಸಲಾಗುವುದು ಎಂದು ತಿಳಿಸಿದರು.

ಕೆನರಾ ಬ್ಯಾಂಕ್‌ನಿಂದ ಬೀದಿಬದಿ ವ್ಯಾಪಾರಿಗಳಿಗೆ ಛತ್ರಿ ವಿತರಣೆ



ಮೈಸೂರು, ಡಿ. 9(ಆರ್‌ಕೆ)– ಕೆನರಾ ಬ್ಯಾಂಕ್ ವತಿಯಿಂದ ಮೈಸೂರಿನ ಕೆಆರ್ ಸರ್ಕಲ್ ಸುತ್ತ ಬಿಸಿಲಿನಲ್ಲಿ ರಸ್ತೆ ಬದಿ ವ್ಯಾಪಾರ ಮಾಡುವವರಿಗೆ ದೊಡ್ಡ ದೊಡ್ಡ ಛತ್ರಿಗಳನ್ನು ಶನಿವಾರ ವಿತರಿಸಲಾಯಿತು. ಎ1 ಆ್ಯಪ್, ಕೆನರಾ ಬ್ಯಾಂಕ್ ಲಾಂಛನವಿರುವ 100 ಛತ್ರಿಗಳನ್ನು ನೀಡಿರುವ ಅಧಿಕಾರಿಗಳು, ಸಾಲ ಸೌಲಭ್ಯ, ಸರ್ಕಾರದ ಸಾಮಾಜಿಕ ಭದ್ರತಾ ಯೋಜನೆಯಡಿ ಬ್ಯಾಂಕ್ ಮೂಲಕ ಲಭ್ಯವಾಗುವ ಸೌಲಭ್ಯಗಳ ಬಗ್ಗೆ ಬೀದಿಬದಿ ವ್ಯಾಪಾರಿಗಳಿಗೆ ಮಾಹಿತಿ ನೀಡಲಾಯಿತು.

ಕೆನರಾ ಬ್ಯಾಂಕ್ ಬ್ರ್ಯಾಂಡೆಡ್ ಛತ್ರಿಗಳಲ್ಲೂ ಸೌಲಭ್ಯಗಳ ಬಗ್ಗೆ ಮಾಹಿತಿ ಮುದ್ರಿಸಲಾಗಿದ್ದು, ಗ್ರಾಹಕ ಸ್ನೇಹಿ ಬ್ಯಾಂಕ್ ಸೇವೆಗಳ ಅರಿವು ಮೂಡಿಸಲಾಗುತ್ತಿದೆ. ಸಹಾಯಕ ಪ್ರಧಾನ ವ್ಯವಸ್ಥಾಪಕ ಎಸ್.ರಾಜಶೇಖರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಭಾಗೀಯ ವ್ಯವಸ್ಥಾಪಕ ಕೆ.ಗೋಪಾಲ, ಅವಿನಾಶ ಪಾಂಡೆ, ಎಂ.ಪಿ.ನಂದನ್, ಸಂದೀಪ್ ಸಿಂಘ್ವಿ, ಚೀಫ್ ಮ್ಯಾನೇಜರ್‌ಗಳಾದ ಅನಿತಾ ಕುಮಾರ್ ಮಿಶ್ರಾ, ಸುಶಾಂತ್ ಚೌಧರಿ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ 2024ನೇ ವರ್ಷದ ಕ್ಯಾಲೆಂಡರ್ ಅನ್ನು ಬ್ಯಾಂಕ್ ಅಧ್ಯಕ್ಷೆ ರಾಜೇಶ್ವರಿ ಬಿಡುಗಡೆ ಮಾಡಿದರು. ಉಪಾಧ್ಯಕ್ಷ ಹರೀಶ್‌ಕುಮಾರ್, ಸೋಮಣ್ಣ, ಉಮಾಶಂಕರ್, ಯೋಗೇಶ್, ರಾಜಕೀಯ ರವಿಕುಮಾರ್, ಅರವಿಂದ, ಮಂಚಪ್ಪ, ಪಡುವಾರಹಳ್ಳಿ ಎಂ.ರಾಮಕೃಷ್ಣ, ಕಾರ್ಯನಿರ್ವಾಹಕ ಅಧಿಕಾರಿ ಹರ್ಷಿತ್‌ಗೌಡ ಇನ್ನಿತರರು ಉಪಸ್ಥಿತರಿದ್ದರು.

ಪ್ರತಿಭಾ ಕಾರಂಜಿಯಿಂದ ವಿದ್ಯಾರ್ಥಿಗಳ ಬೌದ್ಧಿಕ ಪ್ರತಿಭೆ ಬೆಳವಣಿಗೆ ಸಾಧ್ಯ

ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಉದ್ಘಾಟಿಸಿ ಎಂಎಲ್‌ಸಿ ಸಿ.ಎನ್.ಮಂಜೇಗೌಡ ಅಭಿಮತ



ಮೈಸೂರು,ಡಿ.9(ಬಿಎಲ್‌ಯು)–ವಿದ್ಯಾರ್ಥಿಗಳು ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸುವುದರಿಂದ ಬೌದ್ಧಿಕ ಪ್ರತಿಭೆ ಬೆಳೆಯಲು ಅವಕಾಶವಿರುತ್ತದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಹಾರಾಜ ಪದವಿ ಪೂರ್ವ ಕಾಲೇಜಿನಲ್ಲಿ ಶನಿವಾರ ನಡೆದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಒಬ್ಬೊಬ್ಬ ವಿದ್ಯಾರ್ಥಿಯಲ್ಲಿ ಒಂದೊಂದು ರೀತಿಯ ಪ್ರತಿಭೆ ಇರುತ್ತದೆ. ಇಂತಹ ಕಾರ್ಯಕ್ರಮಗಳಿಂದ ಆ ಪ್ರತಿಭೆ ಹೊರಬರಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಇಂದು ನಡೆಯುವ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವದಲ್ಲಿ ಭಾಗವಹಿಸುವ ಮಕ್ಕಳು ವಿಜೇತರಾಗಿ ರಾಜ್ಯ ಮಟ್ಟದಲ್ಲಿ ಪ್ರತಿನಿಧಿಸಿ ಮೈಸೂರು ಜಿಲ್ಲೆಗೆ ಒಳ್ಳೆಯ ಹೆಸರು ತನ್ನಿ ಎಂದು ಸಲಹೆ ನೀಡಿದರು.

ಸ್ಪರ್ಧೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬ ವಿದ್ಯಾರ್ಥಿಗೂ ಬಹುಮಾನ ಸಿಗುವುದಿಲ್ಲ. ಆದರೆ ಸೋಲನ್ನು ಕ್ರೀಡಾ ಮನೋಭಾವದಿಂದ ಸ್ವೀಕಾರ ಮಾಡಬೇಕು. ಮುಂದೆ ಸಿಗುವ ಅವಕಾಶದಲ್ಲಿ ವಿಜೇತರಾಗಲು ಶ್ರಮಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಈ ವೇಳೆ ಮಾತನಾಡಿದ ಡಿಡಿಪಿಐ ಹೆಚ್.ಕೆ.ಪಾಂಡು, ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರತೆಗೆಯಲು ಶಿಕ್ಷಕರು ಮುಂದಾಗಬೇಕು. ಅದರಲ್ಲೂ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಶಿಕ್ಷಕರು ಹೆಚ್ಚಿನ ಉತ್ತೇಜನ ನೀಡಬೇಕು. ಕಲಿಕೆಯ ಜೊತೆಗೆ ಇಂತಹ ಚಟುವಟಿಕೆಯಲ್ಲಿ ತೊಡಗಲು ಅವಕಾಶ ಕಲ್ಪಿಸಬೇಕು ಎಂದು ಹೇಳಿದರು.

ರಾಜ್ಯ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಮೈಸೂರು ಜಿಲ್ಲೆ ಕಳೆದ ವರ್ಷ 4ನೇ ಸ್ಥಾನ ಪಡೆದಿತ್ತು. ಆದರೆ ಈ ಬಾರಿ ಮೊದಲ ಸ್ಥಾನ ಪಡೆಯಬೇಕು ಎಂದು ಪಾಂಡು ವಿದ್ಯಾರ್ಥಿಗಳನ್ನು ಉತ್ತೇಜಿಸಿದರು.

ಮೈಸೂರು ಜಿಲ್ಲೆಯ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ 475 ವಿದ್ಯಾರ್ಥಿಗಳು ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವದಲ್ಲಿ ಭಾಗವಹಿಸಿದ್ದರು. ತಾಲೂಕು ಮಟ್ಟದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಈ ಕಾರ್ಯಕ್ರಮದಲ್ಲಿ ಭಾಗಿಯಾಗಲು ಅವಕಾಶ ಕಲ್ಪಿಸಲಾಗಿತ್ತು. ಈ ಬಾರಿಯ ಪ್ರತಿಭಾ ಕಾರಂಜಿಯಲ್ಲಿ ಭಾಷಣ ಸ್ಪರ್ಧೆಯಲ್ಲಿ ಚಂದ್ರಯಾನದ ಬಗ್ಗೆ ಮಾತನಾಡುವ ವಿಷಯ ನಿಗದಿ ಮಾಡಲಾಗಿತ್ತು. ಜೊತೆಗೆ ಸುವರ್ಣ ಕರ್ನಾಟಕದ ಹಿನ್ನೆಲೆ ಪ್ರಾಥಮಿಕ ಶಾಲಾ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವ ಕುರಿತು ಪರ ಹಾಗೂ ವಿರೋಧ ಚರ್ಚೆ ಮಾಡುವ ವಿಷಯ ಕೂಡ ನಿಗದಿ ಮಾಡಲಾಗಿತ್ತು.

ಇದಲ್ಲದೆ ಜಾನಪದ ಗೀತೆ, ಛದ್ಮವೇಷ, ಚಿತ್ರಕಲೆ, ಕಂಠಪಾಠ, ಭಾವಗೀತೆ, ಕವನ ಹಾಗೂ ಪದ್ಯ ವಾಚನ ಸೇರಿದಂತೆ ಹಲವು ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಡಯಟ್ ಪ್ರಿನ್ಸಿಪಾಲ್ ಸಿ.ಆರ್.ನಾಗರಾಜಯ್ಯ, ಸರ್ಕಾರಿ ನೌಕರರ ಸಂಘದ ಮೈಸೂರು ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಕೆ.ಬಿ.ಸೋಮೇಗೌಡ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಸಿ.ಬಿ.ಅರುಣಕುಮಾರ್, ಕರ್ನಾಟಕ ರಾಜ್ಯ ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಕೃಷ್ಣ, ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರ ಸಂಘದ ಅಧ್ಯಕ್ಷ ಪಿ.ಮಹದೇವಯ್ಯ, ಲಿಪಿಕ ನೌಕರರ ಸಂಘದ ಪ್ರತಿನಿಧಿ ಜಯಕಾಂತು, ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಸಿ.ನಾಗೇಶ್, ರಾಜೇಂದ್ರ, ಬಡ್ತಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ದುಂಡಯ್ಯ, ಎಸ್‌ಸಿ, ಎಸ್‌ಟಿ ಪ್ರಾಥಮಿಕ, ಮಾಧ್ಯಮಿಕ ಶಾಲಾ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಟಿ.ಸಿ.ಕೃಷ್ಣಮೂರ್ತಿ, ಬಿಇಒಗಳಾದ ರೇವಣ್ಣ, ರಾಜು, ಶೋಭಾ, ಕೃಷ್ಣಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ನಡೆದ ಪ್ರತಿಭಾ ಕಾರಂಜಿಯಲ್ಲಿ ಕುಮಾರಿ ಎಸ್.ನಿಸರ್ಗ ಭರತನಾಟ್ಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಈಕೆ ಶ್ರೀ ದುರ್ಗಾ ನೃತ್ಯ ಅಕಾಡೆಮಿಯ ಶ್ರೀಮತಿ ವಿದ್ಯಾ ಶಶಿಧರ್ ಅವರ ಶಿಷ್ಯೆ. ಕು. ನಿಸರ್ಗ ಆದರ್ಶ ವಿದ್ಯಾಲಯದ 10ನೇ ತರಗತಿ ವಿದ್ಯಾರ್ಥಿ ಹಾಗೂ ಚಾಮುಂಡಿಪುರಂ ನಿವಾಸಿ ಶ್ರೀಮತಿ ಲಾವಣ್ಯ ಮತ್ತು ಎಸ್.ಶಿವಣ್ಣ ದಂಪತಿ ಪುತ್ರಿ.

ಕಾವೇರಿ ಹೋರಾಟಕ್ಕೆ ಮಾಜಿ ಶಾಸಕ ಎಲ್.ನಾಗೇಂದ್ರ ಸಾಥ್



ಮೈಸೂರು, ಡಿ.9(ಜಿಎ)––ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ನಗರದ ಪುರಭವನದ ಮುಂಭಾಗ ಕಾವೇರಿ ಕ್ರಿಯಾ ಸಮಿತಿ ನಡೆಸುತ್ತಿರುವ ಧರಣಿಗೆ ಶುಕ್ರವಾರ ಮಾಜಿ ಶಾಸಕ ಎಲ್.ನಾಗೇಂದ್ರ ಮತ್ತು ವಿನಾಯಕನಗರದ ನಿವಾಸಿಗಳು ಬೆಂಬಲ ನೀಡಿದರು.

ಈ ವೇಳೆ ಮಾಜಿ ಶಾಸಕ ನಾಗೇಂದ್ರ ಮಾತನಾಡಿ, ಮುಂದಿನ ದಿನಗಳಲ್ಲಿ ಮೈಸೂರು ಭಾಗದ ಜನ ಕಾವೇರಿ ನೀರಿಗಾಗಿ ದಂಗೆ ಏಳಲಿದ್ದಾರೆ. ಇಂಡಿಯಾ ಒಕ್ಕೂಟದ ಅಂಗ ಪಕ್ಷ ಡಿಎಂಕೆ ನಾಯಕರನ್ನು ಮೆಚ್ಚಿಸಲು ಕಾವೇರಿ ವಿಚಾರವಾಗಿ ರಾಜ್ಯದ ಯಾವೊಬ್ಬ ಕಾಂಗ್ರೆಸ್ ನಾಯಕರು ತುಟಿ ಬಿಚ್ಚುತ್ತಿಲ್ಲ. ಕೆಆರ್‌ಎಸ್‌ನಿಂದ ನೀರು ಹರಿದು ತಮಿಳುನಾಡಿಗೆ ಸೇರುತ್ತಿದ್ದು ಮೈಸೂರು ಭಾಗದ ರೈತರು ಕಂಗಾಲಾಗಿದ್ದು ಈಗಾಗಲೇ ಅಣೆಕಟ್ಟೆಯಲ್ಲಿ 89 ಅಡಿಗಳಿಗೆ ನೀರು ಕುಸಿದಿದ್ದು ಇದರಲ್ಲಿ ಹಲವು ಅಡಿಗಳು ಹೂಳಿನಿಂದ ಕೂಡಿದೆ. ಮುಂದಿನ ದಿನಗಳಲ್ಲಿ ಮೈಸೂರು, ಬೆಂಗಳೂರು ಜನತೆಗೆ ಕುಡಿಯುವ ನೀರು ಸಿಗುವುದಿಲ್ಲ. ಮೇಕೆದಾಟು ವಿಚಾರವಾಗಿ ಪಾದಯಾತ್ರೆ ಮಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಏನು ಗೊತ್ತಿಲ್ಲದ ರೀತಿ ಇದ್ದು, ಕಾಂಗ್ರೆಸ್ ನಾಯಕರು ಮುಖ್ಯಮಂತ್ರಿ ಕುರ್ಚಿಗಾಗಿ ಗುದ್ದಾಟದಲ್ಲಿ ತೊಡಗಿದ್ದಾರೆ. ಜನರು ಮುಂದಿನ ದಿನಗಳಲ್ಲಿ ಈ ವಿಚಾರವಾಗಿ ಕಾಂಗ್ರೆಸ್ ಸರ್ಕಾರಕ್ಕೆ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಧರಣಿಯಲ್ಲಿ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್, ಮೆಲ್ಲಹಳ್ಳಿ ಮಹದೇವಸ್ವಾಮಿ, ಸುರೇಶ್‌ಗೌಡ, ರೈತ ಮುಖಂಡ ವರಕೋಡು ಕೃಷ್ಣೆಗೌಡ, ಪಾಲಿಕೆ ಮಾಜಿ ಸದಸ್ಯ ಚಿಕ್ಕವೆಂಕಟು, ಬಿಜೆಪಿ ಮುಖಂಡ ಬಾಬು ಆಚಾರ್, ರಾಘವ ಎಂ.ಗೌಡ, ಮಂಜು, ಬಸವರಾಜು, ಸುರೇಶ್, ಜೆಸಿಬಿ ರವಿ, ಪುಷ್ಪ, ವೇಣು, ಗೋಪಾಲ, ಸ್ವಾಮಿ, ಪಡುವಾರಳ್ಳಿ ಗ್ರಾಮೋದ್ಯೋಯ ಟ್ರಸ್ಟ್‌ನ ಸದಸ್ಯರು, ಮತ್ತಿತರರು ಭಾಗಿಯಾಗಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ತೀವ್ರ ತಲೆನೋವು, ಮೈಗ್ರೇನ್ ತಲೆನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ಅನಾಥಾಲಯ:** ಸಾಹಿತ್ಯ ಸಂಘದ ವಾರ್ಷಿಕೋತ್ಸವ, ಲೋಕಸೇವಾ ನಿರತ ವಿ.ನಾರಾಯಣರಾವ್ ಸ್ಮಾರಕ 19ನೇ ಕನ್ನಡ ಪ್ರಬಂಧ ಸ್ಪರ್ಧೆ, ಸಂಗೀತ ವಾದ್ಯ ಸ್ಪರ್ಧೆ, ಸ್ಥಳ: ಸದ್ವಿದ್ಯಾ ಶಿಕ್ಷಣ ಸಂಸ್ಥೆ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ಗಂಟೆವರೆಗೆ

■ **ಶ್ರೀಕಾಂತ ವಿದ್ಯಾಸಂಸ್ಥೆಗಳು, ಶ್ರೀಕಾಂತ ಸಂಸ್ಕೃತ ಪಾಠಶಾಲೆ:** ಗೀತಾ ಜಯಂತಿ, ಅಧ್ಯಕ್ಷತೆ: ಕೆ.ಎನ್.ವರದರಾಜ ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್ ಅಧ್ಯಕ್ಷ ಆರ್.ಜಿ.ನರಸಿಂಹ ಅಯ್ಯಂಗಾರ್, ಮುಖ್ಯ ಅತಿಥಿಗಳು: ವಿದ್ವಾನ್ ಚಂದ್ರಶೇಖರ್, ಸ್ಥಳ: ವಿದ್ಯಾಸಂಸ್ಥೆಯ ಸಭಾಭವನ, ಬೆಳಗ್ಗೆ 10ಕ್ಕೆ

■ **ನೀಲಗಂಗಾ ಮಹಿಳಾ ಬಳಗ :** ವಾರ್ಷಿಕೋತ್ಸವ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ದಾವಣಗೆರೆ ವಿವಿ ವಿಶ್ರಾಂತ ಕುಲಪತಿ ಡಾ. ಇಂದುಮತಿ ಮಾದಯ್ಯ, ಮುಖ್ಯ ಅತಿಥಿಗಳು : ಡಾ. ಬಿ. ಶಿವರಾಜು, ಸನ್ಮಾನಿತರು : ಶ್ರೀಮತಿ ಆರ್. ಐಶ್ವರ್ಯ, ಮಾದೇಶ್, ಶ್ರೀಮತಿ ಸಿ.ಎಂ. ವಸಂತಲಕ್ಷ್ಮಿ, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಭಾರತ ಜ್ಞಾನ ವಿಜ್ಞಾನ ಸಮಿತಿ, ಪೀಪಲ್ಸ್ ಲೀಗಲ್ ಫೋರಂ :** ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಅಂಗವಾಗಿ ಸಂವಿಧಾನದ ದೃಷ್ಟಿಯಲ್ಲಿ ಮಾನವ ಹಕ್ಕುಗಳು ಕುರಿತು ಉಪನ್ಯಾಸ, ಉದ್ಘಾಟನೆ: ಡಾ.ಡಿ. ಮಹೇಶ್, ಉಪನ್ಯಾಸ: ವಕೀಲ ಬಾಬುರಾಜ್ ಪಲ್ಲದನ್, ಅಧ್ಯಕ್ಷತೆ: ನಿವೃತ್ತ ಮೇಜರ್ ಜನರಲ್ ಎಸ್.ಜಿ.ಒಂಬತ್ಕೆರೆ, ಅತಿಥಿಗಳು: ಡಾ.ಎನ್. ಮಾಯಾದೇವಿ, ಉಪಸ್ಥಿತರು: ಡಾ.ಆರ್.ಶ್ರೀನೆ ನಾಯಕ್, ಬಿ.ಬೇಬಿ ಪ್ರೇಮಲತಾ, ಸ್ಥಳ: ಮಹಾರಾಜ ಪ್ರೌಢಶಾಲಾ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಒಕಿನವಾ ಶೋರಿನ್ ರಿಯೋ ಕರಾಟೆ:** 30ನೇ ರಾಷ್ಟ್ರ ಮಟ್ಟದ ಕರಾಟೆ ಚಾಂಪಿಯನ್‌ಶಿಪ್, ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಕೆ.ಆರ್.ಮೋಹನ್ ಕುಮಾರ್, ಸಿ.ಎಸ್. ಅರುಣ್ ಮಾಚಯ್ಯ, ರೆ. ಫೆ. ವಿಜಯ್‌ಕುಮಾರ್, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ವೆಂಕಟೇಶ್, ಭಾಸ್ಕರ್ ನಾಯಕ್, ಡಾ.ಪಿ.ಕೃಷ್ಣಯ್ಯ, ಸ್ಥಳ: ಸೇಂಟ್ ಫಿಲೋಮಿನಾ ಕಾಲೇಜು, ಬನ್ನಿಮಂಟಪ, ಬೆಳಗ್ಗೆ 11ಕ್ಕೆ.

■ **ಕಾನ್ಷಿ ಫೌಂಡೇಷನ್:** ಶ್ರೀಮತಿ ವಿಜಯಾ ಮಹೇಶ್‌ರವರ ಜನ್ಮದಿನದ ಪ್ರಯುಕ್ತ ರಾಜ್ಯಮಟ್ಟದ ವಿಜಯ ಪ್ರಶಸ್ತಿ ಪ್ರದಾನ, ವಿಜಯಾ ಮಹೇಶ್ ಅವರ ಸಂಸ್ಮರಣೆ ಪುಸ್ತಕ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ: ಮುಡಕನಪುರ ಹಲವಾರ ಮಠದ ಶ್ರೀ ಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ, ಪೂಜ್ಯ ಬೋಧಿರತ್ನ ಭಂತೇಜಿ, ಉದ್ಘಾಟನೆ: ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ.ಸಿ.ನಾಗಣ್ಣ, ವಿಜಯ ಪ್ರಶಸ್ತಿ ಪ್ರದಾನ: ಶಾಸಕ ಟಿ.ಎಸ್.ಶ್ರೀವತ್ಸ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ್, ಅಧ್ಯಕ್ಷತೆ: ಮಾಜಿ ಸಚಿವ ಎನ್.ಮಹೇಶ್, ಮುಖ್ಯ ಅತಿಥಿಗಳು: ಪ್ರಾಧ್ಯಾಪಕ ಡಾ.ಆನಂದ್, ಮುಖ್ಯ ಭಾಷಣ: ಡಾ.ಜಿ.ಶ್ರೀನಿವಾಸ್, ಉಪಸ್ಥಿತರು: ಕಾನ್ಷಿ ಫೌಂಡೇಷನ್ ಅಧ್ಯಕ್ಷೆ ಜಯಮ್ಮ, ಪ್ರಾಸ್ತಾವಿಕ ನುಡಿ: ಟ್ರಸ್ಟಿ ಶ್ರೀಮತಿ ರಚನಾ ಅರ್ಜುನ್, ಸ್ಥಳ: ನಿತ್ಯೋತ್ಸವ ಫಂಕ್ಷನ್ ಹಾಲ್, ಬಲ್ಲಾಳ ಸರ್ಕಲ್ ಹತ್ತಿರ, ಮಧ್ಯಾಹ್ನ 12ಕ್ಕೆ.



ಇಂದಿನ ಪಂಚಾಂಗ

10.12.2023 ಭಾನುವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2023 ರಿಂದ 15.12.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತೀಕ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಸ್ವಾತಿ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಎಂ.ಬಿ. ಅನಂತಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಟ್ರಸ್ಟ್ :** ವಾರ್ಷಿಕೋತ್ಸವ, ಆಸ್ಥಾನ ವಿದ್ವಾನ್, ಕರ್ನಾಟಕ ಕಲಾತಿಲಕ ವಿದ್ವಾನ್ ಎಂ.ಬಿ.ಅನಂತಸ್ವಾಮಿ ರವರ ಜನ್ಮ ಶತಮಾನೋತ್ಸವ, ವಿದ್ವಾನ್ ಗುರುರಾಜ್ ಜಿ. ಮತ್ತು ವೃಂದದವರಿಂದ ಮಂಗಳವಾದ್ಯ, ವಿದ್ವಾನ್ ಆರ್.ಮೋಹನ್ ಮತ್ತು ತಂಡದವರಿಂದ ಕ್ಲಾರಿಯೋನೆಟ್ ವಾದನ, ಮಧ್ಯಾಹ್ನ 12.30ಕ್ಕೆ ನಂದಿನಿ ನೃತ್ಯಾಲಯ ಮತ್ತು ಶಿಷ್ಯ ವೃಂದದವರಿಂದ ಭರತನಾಟ್ಯ, ಮಧ್ಯಾಹ್ನ 3ಕ್ಕೆ ಎಂ ಕಾಂತರಾಜ್ ಮತ್ತು ವೃಂದದವರಿಂದ ಸುಗಮ ಸಂಗೀತ, ಸಂಜೆ 4ಕ್ಕೆ ವಿದ್ವಾನ್ ಕಿರಗಸೂರು ರಾಜಪ್ಪ ಮತ್ತು ತಂಡದಿಂದ ರಂಗಗೀತೆಗಳು, ಸಂಜೆ 5ಕ್ಕೆ ವಿದ್ವಾನ್ ಹೆಚ್.ಎಸ್. ತಾಂಡವಮೂರ್ತಿ ಮತ್ತು ಶಿಷ್ಯ ವೃಂದದವರಿಂದ ಪಿಟೀಲು ವಾದನ, ಸಂಜೆ 6ಕ್ಕೆ ವಿದ್ವಾನ್ ಎಂ.ಎಸ್.ಜಯರಾಮ್ ಮತ್ತು ಗಾನಕಲಾ ಕಸ್ತೂರಿ ವಿದ್ವಾನ್ ಎಂ.ಆರ್. ಮಂಜುನಾಥ್ ಮತ್ತು ಸಹೋದರರಿಂದ ತಾಳವಾದ್ಯ ಕಛೇರಿ, ಮುಖ್ಯ ಅತಿಥಿಗಳು: ಡಾ.ಭಾಷ್ಯಂ ಸ್ವಾಮೀಜಿ, ಸಂಸದ ಪ್ರತಾಪ್ ಸಿಂಹ, ಶಾಸಕ ಕೆ.ಹರೀಶ್‌ಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ವಿ.ಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್, ಮಾಜಿ ಮೇಯರ್ ಶಿವಕುಮಾರ್, ಅಂಧ ಮಕ್ಕಳ ಸರ್ಕಾರಿ ಪಾಠಶಾಲೆ ಮುಖ್ಯಸ್ಥ ಸತೀಶ್, ಸ್ಥಳ: ಪುರಭವನ.

■ **ಸಮೃದ್ಧಿ ಟ್ರಸ್ಟ್ :** ಪ್ರಶಸ್ತಿ ಪತ್ರ ವಿತರಣಾ ಕಾರ್ಯಕ್ರಮ, ಅಧ್ಯಕ್ಷತೆ: ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು: ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ಮುಖ್ಯಸ್ಥ ಡಾ.ವಿ.ಶುಶ್ರುತ್‌ಗೌಡ, ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಪ್ರಧಾನ ಕಾರ್ಯದರ್ಶಿ ಡಿ.ಈಶ್ವರ್ ಚಕ್ಕಡಿ, ಸಮಾಜ ಸೇವಕರಾದ ಸುಶೀಲ ಮರಿಗೌಡ, ಹೆಚ್.ಎಸ್. ಕೋಳಾಲಗೌಡ, ಪಿ.ಕೆ.ಹೇಮಂತ್, ಜೆ.ಕುಶಾಲ್, ಸ್ಥಳ: ಸಮೃದ್ಧಿ ಟ್ರಸ್ಟ್ ಆವರಣ, ಗೋಕುಲಂ 3ನೇ ಹಂತ, ಮಧ್ಯಾಹ್ನ 2ಕ್ಕೆ.

■ **ಅಸೋಸಿಯೇಷನ್ ಆಫ್ ಫುಡ್ ಸೈಂಟಿಸ್ಟ್ ಮತ್ತು ಟೆಕ್ನಾಲಜಿಸ್ಟ್ (ಇಂಡಿಯಾ):** 9ನೇ ಅಂತರಾಷ್ಟ್ರೀಯ ಆಹಾರ ಮೇಳದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ: ಪದ್ಮಶ್ರೀ ಪುರಸ್ಕೃತರಾದ ಪ್ರೊ. ಎಸ್.ಅಯ್ಯಪ್ಪನ್, ಉಪಸ್ಥಿತರು: ಪ್ರೊ.ಅಶೋಕ್ ಪಾಂಡೆ, ಪ್ರೊ.ವಿ. ಪಳನಿ ಮುತ್ತು, ಡಾ.ಪಿ.ಗಿರಿಧರ್, ಡಾ.ಸೀನ್ ಮೇಯ್ಸ್, ಸ್ಥಳ: ಐಎಫ್‌ಟಿಟಿಸಿ ಸಭಾಂಗಣ, ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಆವರಣ, ಮಧ್ಯಾಹ್ನ 3.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸೈಬರ್ ಮಿತ್ರ–ಸೈಬರ್ ಸುರಕ್ಷೆ ವಾರದ ಮಾತು, ಪ್ರಸ್ತುತಿ–ಸತೀಶ್ ವಿ.ಪ್ರಾಯೋಜಕರು cybermitra.in ಮೈಸೂರು, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 9.40 ನಮ್ಮ ಆರೋಗ್ಯ–ಮಕ್ಕಳಲ್ಲಿ ಕಂಡು ಬರುವ ದಂತದ ಸಾಮಾನ್ಯ ಸಮಸ್ಯೆಗಳು ಮತ್ತು ಚಿಕಿತ್ಸೆ ಕುರಿತು ಡಾ.ರೋಹಿಣಿ ವಿ. ಅವರೊಂದಿಗೆ ಮಾತುಕತೆ, 10.00ಕೇಳಿ ಗಿಳಿಗಳೇ–ಕಥೆ ಕೇಳು ಪುಟ್ಟಾ–ಕಥೆ ಹೇಳುತ್ತಾರೆ ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ–ಮುಖಾಮುಖಿ ಮಕ್ಕಳಿಗೆ ಗ್ರಂಥಾಲಯ ಬಳಕೆ, ಕಲಿಕೆ–ಭಾಗವಹಿಸುವವರು–ಜೆ.ರಜನಿ, ಮಕ್ಕಳು–ಮೈತ್ರಿ ಹಾಗೂ ಶಾನ್‌ಗೌಡ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ** : 12.30 ದೇವರನಾಮ–ರಾಜಗೋಪಾಲ ಭಾಗವತ್, ಎಸ್.ಶಂಕರ್, 12.45 ಜನಪದ ಸಂಗೀತ–ಶಿವಮ್ಮ ಮತ್ತು ಸಂಗಡಿಗರು, 1.20 ಭಾವಗೀತೆ–ಆರ್. ಮಹೇಶ್, 4.00 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಭೀಷ್ಮ ವಿಜಯ, ಪ್ರಸ್ತುತಿ–ಬಿ.ಭುಜಬಲಿ ಮತ್ತು ತಂಡ, ಧರ್ಮಸ್ಥಳ, 6.50 ಕೃಷಿರಂಗ–ಕಡಸುಗಳ ನಿರ್ವಹಣೆ ಕುರಿತು ರುದ್ರಪ್ಪ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್. ಕೇಶವಮೂರ್ತಿ, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಬಾನುಲಿ ಸರಣಿ, ಭಾಗವಹಿಸುವವರು–ಮೈಸೂರಿನ ಬೆಳಕು ವಾತ್ಸಲ್ಯಧಾಮದ ಪ್ರದೀಪ್ ಆರ್. ನಡೆಸಿಕೊಡುತ್ತಾರೆ–ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ ಮಂದ ಅನಂತಕೃಷ್ಣ–ವೇಣುವಾದನ

■ **ಪ್ರವಾಸೋದ್ಯಮ ಇಲಾಖೆ:** ಸಂಸ್ಕೃತಿ ಕಲೆ, ಪರಂಪರೆ ಬಿಂಬಿಸುವ ಬ್ರ್ಯಾಂಡ್ ಮೈಸೂರು ಸ್ಪರ್ಧೆಯಲ್ಲಿ ವಿನ್ಯಾಸಗೊಂಡ ಲೋಗೋ, ಟ್ಯಾಗ್‌ಲೈನ್ ಬಿಡುಗಡೆ ಸಮಾರಂಭ, ಉಪಸ್ಥಿತರು: ಪ್ರವಾಸೋದ್ಯಮ ಇಲಾಖೆ ಸಚಿವ ಎಚ್.ಕೆ.ಪಾಟೀಲ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಸ್ಥಳ: ಜಿಪಂ ಸಭಾಂಗಣ, ಮಧ್ಯಾಹ್ನ 3.30ಕ್ಕೆ.

■ **ಶ್ರೀ ಸೋಮೇಶ್ವರಸ್ವಾಮಿ ದೇವಸ್ಥಾನ ಅಭಿವೃದ್ಧಿ ಸಮಿತಿ:** 24ನೇ ವಾರ್ಷಿಕೋತ್ಸವ, ಬೆಳಗ್ಗೆ 6ರಿಂದ ಗಂಗಾಪೂಜೆ, ಮಹಾಗಣಪತಿ ಪೂಜೆ, ಪುಣ್ಯಾಹಕಲಶ ಸ್ಥಾಪನೆ, ನವಗ್ರಹ ಮಹಾಮೃತ್ಯುಂಜಯ, ರುದ್ರತಿಶತಿ ಕಲಾ ಹೋಮ, ಬೆಳಗ್ಗೆ 11ಕ್ಕೆ ಪೂರ್ಣಾಹುತಿ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ಸ್ಥಳ: ಶ್ರೀ ಸೋಮೇಶ್ವರಸ್ವಾಮಿ ದೇವಸ್ಥಾನ, ಬನ್ನಿಮಂಟಪ.

■ **ದಿನೇಶ್ ಕೋಚಿಂಗ್ ಸೆಂಟರ್:** ಪ್ರತಿಭಾ ಪುರಸ್ಕಾರ ಸಮಾರಂಭ, ಮುಖ್ಯ ಅತಿಥಿಗಳು: ಶ್ರೀ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಮುಖ್ಯಸ್ಥ ಶ್ರೀಮತ್ ಸ್ವಾಮಿ ಮಹಾಮೇಧಾನಂದ, ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್, ಸ್ಥಳ: ಕಲಾಮಂದಿರ, ಸಂಜೆ 4ಕ್ಕೆ.

■ **ಸುರಭಿ ಗಾನ ಕಲಾಮಂದಿರ ಚಾರಿಟೆಬಲ್ ಟ್ರಸ್ಟ್ :** ಅರಳು ಪ್ರತಿಭೆ, ಪ್ರತಿಭಾಂಕುರ– ನೂತನ ಸಂಗೀತ ಮಾಲಿಕೆ–ಸಪ್ತಮ ಸುಮ, ವಿದುಷಿ ಅಕ್ಷತಾ ಭಟ್ ಅವರಿಂದ ಗಾಯನ, ವಿದ್ವಾನ್ ಅಮೋಘ ನಡದೂರ್–ವಯೋಲಿನ್, ವಿದ್ವಾನ್ ಪಿ.ಎಸ್. ಶ್ರೀಧರ್–ಮೃದಂಗ, ಸ್ಥಳ: 510, 13ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 4.30ಕ್ಕೆ.

■ **ಪ್ರದೋಷ ಸಂಘ, ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆ :** ಸಂಜೆ 4ಕ್ಕೆ ವಾಗ್ಮಿ, ಸಂಸ್ಕೃತಿ ಚಿಂತಕರಾದ ಡಾ. ವಿ.ಬಿ. ಆರತಿ ಅವರಿಂದ ಭಾರತೀಯ ಸಂಸ್ಕೃತಿ ಮತ್ತು ವೈಜ್ಞಾನಿಕ ದೃಷ್ಟಿಕೋನ ಕುರಿತು ಉಪನ್ಯಾಸ, ಅಧ್ಯಕ್ಷತೆ : ಶ್ರೀಮನ್ಮಹಾರಾಜ ಸಂಸ್ಕೃತ ಮಹಾ ಪಾಠಶಾಲೆ ಪ್ರಾಂಶುಪಾಲ ಡಾ. ಪಿ. ಸತ್ಯನಾರಾಯಣ, ಸ್ಥಳ: ಸರಸ್ವತೀಪ್ರಸಾದ, ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆ, ನ್ಯೂ ಸಯ್ಯಾಜಿರಾವ್ ರಸ್ತೆ; ಸಂಜೆ 6 ರಿಂದ ಶ್ರೀ ವಿದ್ಯಾಗಣಪತಿಯ ಸನ್ನಿಧಿಯಲ್ಲಿ ಮಹಾಪ್ರದೋಷ ಪೂಜೆ.

■ **ಕೆ.ಹೆಚ್. ರಾಮಯ್ಯ ವಿದ್ಯಾರ್ಥಿ ನಿಲಯದ ಹಿರಿಯ ವಿದ್ಯಾರ್ಥಿ ಸಂಘ:** ಸಾಹುಕಾರ್ ಎಸ್.ಚನ್ನಯ್ಯ ಮಹಲ್ ಉದ್ಘಾಟನೆ: ಕೆಹೆಚ್‌ಆರ್‌ವಿ ಟ್ರಸ್ಟ್ ಅಧ್ಯಕ್ಷ ಚಂದ್ರಪ್ರಕಾಶ್, ಲೈಬ್ರರಿ ಉದ್ಘಾಟನೆ: ಸಂಘದ ಗೌರವಾಧ್ಯಕ್ಷ ಎಂ.ಕೆ.ಶಂಕರಲಿಂಗೇಗೌಡ, ಮುಖ್ಯ ಅತಿಥಿಗಳು: ಸಂಘದ ಮಹಾಪೋಷಕ ಡಾ.ಅಪ್ಪಾಜಿಗೌಡ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಡಾ.ಪಿ.ಬೋರೇಗೌಡ, ಸ್ಥಳ: ಕೆ.ಹೆಚ್.ರಾಮಯ್ಯ ಹಾಸ್ಟೆಲ್, ವಿ.ವಿ.ಮೊಹಲ್ಲಾ, ಸಂಜೆ 5.30ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಅಘಹರಾನಂದ ಅವರಿಂದ ಸೋದರ ಸಂನ್ಯಾಸಿಗಳೊಂದಿಗೆ ಸ್ವಾಮಿ ವಿವೇಕಾನಂದರು ಕುರಿತು ಉಪನ್ಯಾಸ, ಸ್ಥಳ: ಆಶ್ರಮ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ರಂಗಾಯಣ :** ರಂಗಾಯಣ ರೆಪರ್ಟರಿ ಕಲಾವಿದರಿಂದ ಕಸಾಂದ್ರ ಮತ್ತು ಸತಿ ನಾಟಕ ಪ್ರದರ್ಶನ, ರಚನೆ : ಹೆಚ್.ಎಸ್. ಶಿವಪ್ರಕಾಶ್, ನಿರ್ದೇಶನ : ಬಿ.ಆರ್. ವೆಂಕಟರಮಣ ಐತಾಳ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

■ **ವ್ಯವಸ್ಥಾಪಕರು:** 'ಕಪ್ಪು ಹಂಸ, ಕಿರುಚಿತ್ರದ ಪ್ರದರ್ಶನ, ಸ್ಥಳ: ಕಲ್ಪ ಕ್ಷೇತ್ರ ಸಭಾಂಗಣ, ನಂ. 581/1, 1ನೇ ಹಂತ, ವಿಜಯನಗರ, 4ನೇ ಹಂತ, ಮೈಸೂರು, ಸಂಜೆ 5.15ಕ್ಕೆ ಮತ್ತು ಎರಡನೇ ಪ್ರದರ್ಶನ ಸಂಜೆ 6.45ಕ್ಕೆ

■ **ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್ :** ಶ್ರೀಮತಿ ಕೆ.ವನಜಾಕ್ಷಮ್ಮ ಸಂಸ್ಮರಣಾ ನೃತ್ಯ ಆರಾಧನಾ ಕಾರ್ಯಕ್ರಮ, ನೂಪುರಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ, ಉಪಸ್ಥಿತರು: ಕೇಂದ್ರ ಸರ್ಕಾರದ ಕಾರ್ಮಿಕ ಸಚಿವಾಲಯದ ವಿಶ್ರಾಂತ ನಿರ್ದೇಶಕ ಕೆ.ಕೃಷ್ಣಮೂರ್ತಿ, ಹಾಸನ ಎವಿಕೆ ಕಾಲೇಜು ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಶಾರದಾ ಅಶೋಕರಾವ್, ಉಡುಪಿ ವೈಕುಂಠ ಬಾಳಿಗ ಕಾನೂನು ಕಾಲೇಜು ನಿರ್ದೇಶಕರಾದ ಡಾ.ನಿರ್ಮಲ ಹರಿಕೃಷ್ಣ, ಕಲಾಪೋಷಕ ಕೆ.ರಮೇಶರಾವ್, ಸಂಜೆ 7.15ರಿಂದ ನಾಟ್ಯಾಚಾರ್ಯ ಪ್ರೊ.ಕೆ.ರಾಮಮೂರ್ತಿರಾವ್ ಅವರ ಪುತ್ರ ಹಾಗೂ ಶಿಷ್ಯ ವಿದ್ವಾನ್ ಕೆ.ಆರ್. ವಿಶ್ವದೀಪ, ಉಡುಪಿಯ ರಾಧಾಕೃಷ್ಣ ನೃತ್ಯನಿಕೇತನದ ಶ್ರೀ ರಾಧಾಕೃಷ್ಣ ತಂತ್ರಿ ಹಾಗೂ ವಿದುಷಿ ವೀಣಾಸಾಮಗ ಅವರ ಶಿಷ್ಯೆ ವಿದುಷಿ ರಮ್ಯಾ ಕಿರಣ್, ಬೆಂಗಳೂರಿನ ವಿದುಷಿ ಸಂಧ್ಯಾ ಕೇಶವರಾಜ್ ಅವರ ಶಿಷ್ಯೆ ಮಂಜುಶ್ರೀ ಕಡಬ ಅವರಿಂದ ಭರತನಾಟ್ಯ ಪ್ರದರ್ಶನ, ಸ್ಥಳ: ಗಾನಭಾರತೀ ರಮಾಗೋವಿಂದ ಕಲಾವೇದಿಕೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ಅಭಿಯಂತರರು:** 30ನೇ ವಾರ್ಷಿಕೋತ್ಸವ ರಂಗ ಸಂಭ್ರಮ, ಪೂರ್ಣಚಂದ್ರ ತೇಜಸ್ವಿ ಅವರ ಚಿದಂಬರ ರಹಸ್ಯ ನಾಟಕ ಪ್ರದರ್ಶನ, ರಂಗರೂಪ: ಸಿ.ಬಸವಲಿಂಗಯ್ಯ, ನಿರ್ದೇಶನ: ಹೆಚ್.ಎಸ್. ಸುರೇಶ್‌ಬಾಬು, ಸ್ಥಳ: ಕಿರುರಂಗ ಮಂದಿರ, ಸಂಜೆ 7ಕ್ಕೆ.

ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥಕ್ಕೆ ಮಾಜಿ ಶಾಸಕ ಎಲ್.ನಾಗೇಂದ್ರ ಸಲಹೆ



ಮೈಸೂರು, ಡಿ.9–ಶಿವರಾತ್ರಿ ರಾಜೇಂದ್ರ ಶ್ರೀಗಳ ಪ್ರತಿಮೆ ಸ್ಥಾಪನೆ ವಿಚಾರವಾಗಿ ಎರಡೂ ಸಮುದಾಯಗಳು ಕುಳಿತು ಸಮಸ್ಯೆ ಬಗೆಹರಿಸಬೇಕೇ ಹೊರತು ಬೀದಿಗಿಳಿಯಬಾರದು ಎಂದು ಮಾಜಿ ಶಾಸಕ ಎಲ್.ನಾಗೇಂದ್ರ ಅಭಿಪ್ರಾಯಪಟ್ಟರು. ಕಾವೇರಿ ಕ್ರಿಯಾ ಸಮಿತಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಅವರು, ಸುದ್ದಿಗಾರರಿಗೆ ಪ್ರತಿಕ್ರಿಯಿಸಿ, ರಾಜೇಂದ್ರ ಶ್ರೀಗಳ ಕೊಡುಗೆ ಸಮಾಜಕ್ಕೆ ಅಪಾರ. ಶ್ರೀಗಳು ತ್ರಿವಿಧ ದಾಸೋಹಿಗಳು. ಆರೋಗ್ಯ ಕ್ಷೇತ್ರದಲ್ಲಿ ಶ್ರೀಗಳ ಕೊಡುಗೆ ಅತ್ಯಮೂಲ್ಯ. ಇದೇ ರೀತಿ ಮೈಸೂರು ದೊರೆಗಳ ಕೊಡುಗೆ ಕೂಡ ಅಪಾರವಾದದ್ದು. ಮೈಸೂರು ಭಾಗದ ಅಭಿವೃದ್ಧಿಗೆ ಮಹಾರಾಜರು ಹಗಲಿರುಳು ಶ್ರಮಿಸಿದ್ದಾರೆ. ಹೀಗಾಗಿ ಎರಡೂ ಸಮುದಾಯಗಳು ಪರಸ್ಪರ ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥಪಡಿಸಿಕೊಳ್ಳಬೇಕು ಎಂದರು.

ಕೃಷಿ ಕ್ಷೇತ್ರದಲ್ಲಿ ಆದಾಯ ದ್ವಿಗುಣಕ್ಕೆ ವಿಜ್ಞಾನಿಗಳು ಚಿಂತನೆ ನಡೆಸಬೇಕಿದೆ

ಸಿಎಫ್‌ಟಿಆರ್‌ಐ ನಿವೃತ್ತ ನಿರ್ದೇಶಕ ಡಾ.ಪ್ರಕಾಶ್ ಸಲಹೆ



ಮೈಸೂರು, ಡಿ.9 (ಎಸ್‌ಬಿಡಿ)– ಕೃಷಿ ಕ್ಷೇತ್ರದಲ್ಲಿ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಆಹಾರ ವಿಜ್ಞಾನಿಗಳು ಗಂಭೀರವಾಗಿ ಚಿಂತನೆ ನಡೆಸುವ ಅವಶ್ಯಕತೆ ಇದೆ ಎಂದು ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾ ಸಂಸ್ಥೆ(ಸಿಎಫ್‌ಟಿಆರ್‌ಐ) ನಿವೃತ್ತ ನಿರ್ದೇಶಕ ಡಾ.ವಿ.ಪ್ರಕಾಶ್ ಹೇಳಿದರು.


ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಆಯೋಜಿಸಲಾಗಿರುವ 9ನೇ ಅಂತಾರಾಷ್ಟ್ರೀಯ ಆಹಾರ ಸಮ್ಮೇಳನ (ಇಫ್‌ಕಾನ್–2023)ದ ಮೂರನೇ ದಿನವಾದ ಶನಿವಾರ ಇಲ್ಲಿನ ಐಎಫ್‌ಎಫ್‌ಟಿಟಿಸಿ ಸಭಾಂಗಣದಲ್ಲಿ ನಡೆದ ಡಾ.ಸ್ವಾಮಿನಾಥನ್ ಉಪನ್ಯಾಸ ಸರಣಿ ಹಾಗೂ ಡಾ.ಪರ್ಪಿಯಾ ಸ್ಮಾರಕ ಉಪನ್ಯಾಸದಲ್ಲಿ 'ಸುಸ್ಥಿರ ಹಾಗೂ ಭವಿಷ್ಯದ ಆಹಾರಗಳು, ಪೌಷ್ಟಿಕಾಂಶ ಭದ್ರತೆಯಲ್ಲಿ ಭಾರತದ ನಾಯಕತ್ವಕ್ಕಾಗಿ ಕೃಷಿ, ಆಹಾರ ವಿಜ್ಞಾನ ಹಾಗೂ ಉದ್ಯಮಗಳೊಂದಿಗಿನ ನಾವೀನ್ಯತೆಗಳ ಸಮ್ಮಿಲನ' ಕುರಿತು ಅವರು ಮಾತನಾಡಿದರು.

ಭಾರತ ಜಾಗತಿಕ ನಾಯಕನಾಗುವ ಪ್ರಯತ್ನದಲ್ಲಿ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿ ಮುಖ್ಯವಾಗುತ್ತದೆ. ಹಾಗೆಯೇ ಕೃಷಿ ನಂಬಿರುವ ರೈತರ ಆದಾಯ ಹಾಗೂ ಅದರಲ್ಲಿ ಅವರಿಗೆ ಉಳಿಯುವಂತಹ ಲಾಭಾಂಶ ದ್ವಿಗುಣವಾಗಬೇಕು. ಈ ನಿಟ್ಟಿನಲ್ಲಿ ಗಂಭೀರ ಚಿಂತನೆ ನಡೆಸಬೇಕು. ಆರೋಗ್ಯವಂತ ನಾಗರಿಕರೊಂದಿಗೆ ಉತ್ತಮ ಸಮಾಜ ಸೃಷ್ಟಿಸುವ ಮೂಲಕ ಭಾರತವನ್ನು ಜಾಗತಿಕ ನಾಯಕ ಸ್ಥಾನಕ್ಕೆ ಕೊಂಡೊಯ್ಯಬೇಕಿದೆ. ಕೃಷಿ ಉತ್ಪಾದನೆಯಲ್ಲಿ ಭಾರತವನ್ನು ಸುಸ್ಥಿರ ದೇಶವನ್ನಾಗಿಸಲು ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕಿದೆ. ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲೂ ಹೆಚ್ಚಿನ ಆವಿಷ್ಕಾರಗಳಾಗುವ ಅಗತ್ಯವಿದೆ ಎಂದು ಡಾ.ಪ್ರಕಾಶ್ ಅಭಿಪ್ರಾಯಿಸಿದರು.

ಭಾರತವು ಅಭಿವೃದ್ಧಿ ಹೊಂದಿದ ದೇಶವಾಗಿ ಪರಿವರ್ತನೆಯಾಗುವ ಪಯಣಕ್ಕೆ ಹವಾಮಾನ ಬದಲಾವಣೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು. ಇಂಗಾಲದ ಡೈಆಕ್ಸೈಡ್ ವಿಪರೀತ ಹೊರಸೂಸುವಿಕೆಯಿಂದ ನಿಯಂತ್ರಣ ಮೀರಿದ ಹವಾಮಾನ ಬದಲಾವಣೆ ಮತ್ತು ಜಾಗತಿಕ ತಾಪಮಾನ ಏರಿಕೆಯಾಗುತ್ತಿದ್ದು, ಇದರ ವಿರುದ್ಧ ಹೋರಾಡಬೇಕಿದೆ. ಹೀಗಾಗಿ ವಾತಾವರಣದಲ್ಲಿ ಇಂಗಾಲದ ಪ್ರಮಾಣ ಕಡಿಮೆಗೊಳಿಸುವುದರ ಜೊತೆಗೆ ಭವಿಷ್ಯಕ್ಕಾಗಿ ನೀರು ಸಂರಕ್ಷಣೆ ಮಾಡಬೇಕು. ವಿಜ್ಞಾನ ಮತ್ತು ತಂತ್ರಜ್ಞಾನ ಬಳಕೆಯೊಂದಿಗೆ ಈ ಬಗ್ಗೆ ನಿಗಾ ವಹಿಸಬೇಕು ಎಂದರು.

ಈ ನೆಲದ ಸಾಂಪ್ರದಾಯಿಕ ಬೆಳೆಗಳು ಸುಮಾರು 500 ವರ್ಷಗಳಿಂದ ಉಳಿದುಕೊಂಡು ಬಂದಿದ್ದು, ಕೃಷಿಯಲ್ಲಿ ಸಾಂಪ್ರದಾಯಿಕ ಜ್ಞಾನವನ್ನು ಮುಂದುವರಿಸಿಕೊಂಡು ಹೋಗುವ ನಿಟ್ಟಿನಲ್ಲಿ ತುರ್ತು ಗಮನಹರಿಸಬೇಕಿದೆ. ಯುವಕರು ಕೃಷಿಯನ್ನು ವೃತ್ತಿಯಾಗಿ ಪರಿಗಣಿಸಿ, ಗ್ರಾಮೀಣಾಭಿವೃದ್ಧಿ ಮತ್ತು ಉದ್ಯಮಶೀಲತೆ ಕಡೆ ಒಲವು ತೋರಬೇಕಿದೆ. ಭಾರತವನ್ನು ಮಧುಮೇಹದ ರಾಜಧಾನಿ ಎನ್ನಲಾಗುತ್ತಿದೆ. ಭಾರತದ ಪಶ್ಚಿಮ ರಾಜ್ಯಗಳಲ್ಲಿ ಸುಮಾರು ಶೇ.50ರಷ್ಟು ಜನ ಬೊಜ್ಜು ಹೊಂದಿದ್ದಾರೆ. ಹೀಗಾಗಿ ಈ ಭಾಗವು ಬಿಪಿ, ಕಾರ್ಡಿಯಾಕ್ ಮತ್ತು ಡಯಾಬಿಟಿಸ್‌ನಂತಹ ಕಾಯಿಲೆಗಳ ರಾಜಧಾನಿಯಾಗಬಹುದು ಎಂದು ಎಚ್ಚರಿಸಿದರು.

> 2004ರ ಸುನಾಮಿ ಸಂದರ್ಭದಲ್ಲಿ ಸಿಎಫ್‌ಟಿಆರ್‌ಐ ದೇಶಕ್ಕೆ ನೀಡಿದ ಸೇವೆ ಸದಾ ಸ್ಮರಣೀಯ. 2030ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ತಲುಪಬೇಕಿದೆ. ಈ ನಿಟ್ಟಿನಲ್ಲಿ ಸಿಎಫ್‌ಟಿಆರ್‌ಐ ಸೇರಿದಂತೆ ಎಲ್ಲಾ ಕ್ಷೇತ್ರವು ತನ್ನ ಭರವಸೆಯನ್ನು ಈಡೇರಿಸಬೇಕಾಗಿದೆ. **–ಡಾ.ವಿ.ಪ್ರಕಾಶ್**




ಬೆಂಗಳೂರಿನ ವಿಧಾನಸಭೆ ಸಭಾಂಗಣದಲ್ಲಿ 2024ನೇ ಸಾಲಿನ 'ಕಾಂಗ್ರೆಸ್ ಸರ್ಕಾರದ ಪ್ರಗತಿಪರ ಯೋಜನೆಗಳ ಗ್ಯಾರಂಟಿ' ಕ್ಯಾಲೆಂಡರ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಮುಖಂಡರಾದ ಎಂ.ಶ್ರೀನಿವಾಸಕುಮಾರ್, ಕೊಪ್ಪಲು ರಾಜಣ್ಣ ಇನ್ನಿತರರು ಉಪಸ್ಥಿತರಿದ್ದರು.

ಹೈಕೋರ್ಟ್ ಆದೇಶದಂತೆ ರಚಿತವಾದ ಜಿಲ್ಲಾ ಸಮಿತಿ ಸಮ್ಮತಿಯಂತೆಯೇ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಪ್ರತಿಮೆ ಪ್ರತಿಷ್ಠಾಪನೆ

ಪ್ರತಿಮೆ ಸ್ಥಾಪನೆಯಲ್ಲಿ ಯಾವುದೇ ರೀತಿಯಲ್ಲೂ ಕಾನೂನು ಉಲ್ಲಂಘನೆ ಆಗಿಲ್ಲ: ಸಮಿತಿ ಪ್ರತಿಪಾದನೆ







ಮೈಸೂರು, ಡಿ.9–ಹೈಕೋರ್ಟ್ ಆದೇಶದಂತೆ ರಚಿಸಲ್ಪಟ್ಟ ಜಿಲ್ಲಾ ಸಮಿತಿ ಸಮ್ಮತಿಯ ಮೇರೆಗೆ ಮೈಸೂರಿನ ಗನ್‌ಹೌಸ್ ಬಳಿ ಇರುವ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತದಲ್ಲಿ ಶುಕ್ರವಾರ ರಾತ್ರಿ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ.

ಜಗದ್ಗುರು ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತಮಾನೋತ್ಸವ ಸಮಿತಿ ಹಾಗೂ ಸೇವಾ ಟ್ರಸ್ಟ್ ಈ ಪ್ರತಿಮೆಯನ್ನು ಪ್ರತಿಷ್ಠಾಪಿಸಿದ್ದು, ಈ ಪ್ರತಿಷ್ಠಾಪನೆಯಲ್ಲಿ ಯಾವುದೇ ರೀತಿಯ ಕಾನೂನು ಉಲ್ಲಂಘನೆಯಾಗಿಲ್ಲ ಎಂದು ಸಮಿತಿ ಪ್ರತಿಪಾದಿಸಿದೆ.

ವಿವರ: ಗನ್‌ಹೌಸ್ ಸಮೀಪ 6 ರಸ್ತೆಗಳು ಸೇರುವ ವೃತ್ತಕ್ಕೆ ಹೊಂದಿಕೊಂಡಂತೆಯೇ ಜೆಎಸ್‌ಎಸ್ ಮಹಾವಿದ್ಯಾಪೀಠ ಇದ್ದ ಕಾರಣ ಬಹಳ ವರ್ಷಗಳ ಹಿಂದೆಯೇ ಮೈಸೂರು ನಗರಪಾಲಿಕೆ ಈ ವೃತ್ತಕ್ಕೆ 'ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ವೃತ್ತ' ಎಂದು ನಾಮಕರಣ ಮಾಡಿತ್ತು. ಶ್ರೀಗಳ ಶತಮಾನೋತ್ಸವದ ಸವಿನೆನಪಿಗಾಗಿ ಈ ವೃತ್ತದಲ್ಲಿ ಶಿವರಾತ್ರಿ ರಾಜೇಂದ್ರ ಶ್ರೀಗಳ ಪ್ರತಿಮೆ ಸ್ಥಾಪಿಸಲು ಶತಮಾನೋತ್ಸವ ಸಮಿತಿ ಹಾಗೂ ಸೇವಾ ಟ್ರಸ್ಟ್ ನಿರ್ಧರಿಸಿತ್ತು. ಅದರಂತೆ 2018ರ ಆಗಸ್ಟ್ 29ರಂದು ಆಗಲೂ ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯ ಅವರಿಂದ ಪ್ರತಿಮೆ ಸ್ಥಾಪನೆಗೆ ಶಂಕುಸ್ಥಾಪನೆಯನ್ನೂ ನೆರವೇರಿಸಲಾಗಿತ್ತು.

ಹೈಕೋರ್ಟ್ ಮೊರೆ: ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದೆ ಎನ್ನುತ್ತಿರುವಾಗಲೇ 2021ರಲ್ಲಿ ಅರಸು ಮಂಡಳಿ ಪ್ರಮುಖರು, ವೃತ್ತಗಳು ಮತ್ತು ಪ್ರತಿಮೆ ಸ್ಥಾಪನೆ ಸಂಬಂಧ ಸುಪ್ರೀಂಕೋರ್ಟ್ 2009ರ ಸೆಪ್ಟೆಂಬರ್ 29ರಂದು ನೀಡಿದ್ದ ಆದೇಶ ಉಲ್ಲಂಘನೆಯಾಗುತ್ತದೆ ಎಂದು ಪ್ರತಿಮೆ ಸ್ಥಾಪನೆಗೆ ಆಕ್ಷೇಪ ವ್ಯಕ್ತಪಡಿಸಿ ಹೈಕೋರ್ಟ್ ಮೊರೆ ಹೋಗಿತ್ತು.

ಯಾವುದೇ ಸಾರ್ವಜನಿಕ ಸ್ಥಳ ಒತ್ತುವರಿ ಮಾಡಿಕೊಂಡು ಸಾರ್ವಜನಿಕರಿಗೆ ಅಡಚಣೆಯುಂಟಾಗುವಂತೆ ವೃತ್ತಗಳನ್ನು ಹಾಗೂ ಪ್ರತಿಮೆಗಳನ್ನು ನಿರ್ಮಿಸಬಾರದು ಎಂಬುದು ಸುಪ್ರೀಂಕೋರ್ಟ್ ಆದೇಶ. ಈ ಪ್ರಕರಣದಲ್ಲಿ ಪ್ರತಿಮೆ ನಿರ್ಮಾಣದಿಂದ ಸಾರ್ವಜನಿಕ ಸ್ಥಳ ಒತ್ತುವರಿಯಾಗುತ್ತದೆಯೇ ಹಾಗೂ ಸಾರ್ವಜನಿಕರಿಗೆ ಅಡಚಣೆ ಉಂಟಾಗುತ್ತದೆಯೇ? ಎಂಬುದನ್ನು ಮಾತ್ರ ಪರಿಶೀಲಿಸಬೇಕಿದ್ದರಿಂದ ಹೈಕೋರ್ಟ್ ಈ ಸಂಬಂಧ ಜಿಲ್ಲಾ ಸಮಿತಿ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು 2022ರ ಜೂನ್ 10ರಂದು ಆದೇಶ ನೀಡಿತ್ತು.

ಅದರಂತೆ ಮೈಸೂರು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಗರ ಪೊಲೀಸ್ ಆಯುಕ್ತರು, ನಗರ ಪಾಲಿಕೆ ಆಯುಕ್ತರು, ಹೆಚ್ಚುವರಿ ಜಿಲ್ಲಾಧಿಕಾರಿ, ಮುಡಾ ಆಯುಕ್ತರು, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು, ಮೈಸೂರು ತಾಲೂಕು ತಹಶೀಲ್ದಾರರು ಹಾಗೂ ಮೈಸೂರು ವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳನ್ನೊಳಗೊಂಡ ಸಮಿತಿ ರಚಿಸಲಾಯಿತು.

ಈ ಸಮಿತಿಯು ಸ್ಥಳ ಪರಿಶೀಲನೆ ನಡೆಸಿ ಸಮಿತಿಯ ನಡಾವಳಿಯನ್ನು 2023ರ ಸೆಪ್ಟೆಂಬರ್ 2ರಂದು ರಾಜ್ಯ ಕಾನೂನು ಇಲಾಖೆಗೆ ಪ್ರಧಾನ ಕಾರ್ಯದರ್ಶಿಗಳಿಗೆ ರವಾನಿಸಿತ್ತು. ಆದರೆ ಈ ಪ್ರಕರಣ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಿದ್ದಾದ್ದರಿಂದ ಈ ಸಂಬಂಧ ಕ್ರಮ ಕೈಗೊಳ್ಳುವಂತೆ ಕಾನೂನು ಇಲಾಖೆಯು 2023ರ ಸೆಪ್ಟೆಂಬರ್ 25ರಂದು ನಗರಾಭಿವೃದ್ಧಿ ಇಲಾಖೆಗೆ ಪತ್ರ ರವಾನಿಸಿತ್ತು ನಂತರ ನಗರಾಭಿವೃದ್ಧಿ ಇಲಾಖೆಯು ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲು ತೀರ್ಮಾನವನ್ನು ಜಿಲ್ಲಾ ಸಮಿತಿಗೆ ವಹಿಸಿ ಕಳೆದ ನವೆಂಬರ್ 16ರಂದು ಜಿಲ್ಲಾಧಿಕಾರಿಗಳಿಗೆ ಪತ್ರ ರವಾನಿಸಿತ್ತು.

ಈ ಸಂಬಂಧ ಡಿಸೆಂಬರ್ 5ರಂದು ಜಿಲ್ಲಾ ಮಟ್ಟದ ಸಮಿತಿಯು ಸಭೆ ನಡೆಸಿ ಗನ್‌ಹೌಸ್ ಬಳಿಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ವೃತ್ತದಲ್ಲಿ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಪ್ರತಿಮೆ ಸ್ಥಾಪನೆಗೆ ಸಮ್ಮತಿ ಸೂಚಿಸಿತ್ತು.

ಸಮಿತಿಯು ಸಮ್ಮತಿ ಸೂಚಿಸುವ ಮುನ್ನ ಅಂತಿಮವಾಗಿ ಕಳೆದ ನವೆಂಬರ್ 28ರಂದು ಸಭೆ ನಡೆಸಿ ಗನ್ ಹೌಸ್ ಬಳಿ ಇರುವ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ವೃತ್ತವು 6 ರಸ್ತೆ ಮಾರ್ಗಗಳನ್ನು ಸಂಪರ್ಕಿಸುವ ಕೇಂದ್ರದಲ್ಲಿರುತ್ತದೆ. ಈ ವೃತ್ತವು ಸುಪ್ರೀಂ ಕೋರ್ಟ್ 2009ರ ಸೆಪ್ಟೆಂಬರ್ 29ರಂದು ಆದೇಶ ನೀಡುವುದಕ್ಕೆ ನಿಕಟಪೂರ್ವದಿಂದಲೇ ಅಸ್ತಿತ್ವದಲ್ಲಿರುವುದು ನಿಸ್ಸಂಶಯವಾಗಿದೆ. ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತವು ಈಗಾಗಲೇ ಅಸ್ತಿತ್ವದಲ್ಲಿರುವುದರಿಂದ ಇದು ನೂತನವಾಗಿ ನಿರ್ಮಾಣ ಮಾಡುವ ವೃತ್ತವಾಗಿರುವುದಿಲ್ಲ. ಆದುದರಿಂದ ಈ ವೃತ್ತದೊಳಗೆ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ ಪ್ರತಿಮೆ ಸ್ಥಾಪನೆಯಿಂದ ಸಾರ್ವಜನಿಕ ಪ್ರದೇಶ ಒತ್ತುವರಿಯಾಗುವುದಿಲ್ಲ. ಎಲ್ಲಾ ರೀತಿಯಲ್ಲೂ ಪರಿಶೀಲಿಸಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತದಲ್ಲಿ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಪ್ರತಿಮೆಯನ್ನು ಸ್ಥಾಪಿಸುವುದರಿಂದ ಸುಪ್ರೀಂಕೋರ್ಟ್‌ನ ನಿರ್ದೇಶನಗಳು ಉಲ್ಲಂಘನೆಯಾಗುವುದಿಲ್ಲ ಎಂಬುದನ್ನು ಜಿಲ್ಲಾ ಮಟ್ಟದ ಸಮಿತಿ ಒಮ್ಮತದಿಂದ ತೀರ್ಮಾನಿಸಿ ಪ್ರತಿಮೆ ನಿರ್ಮಿಸಲು ಸಮ್ಮತಿಸಿದೆ ಎಂದು ಸಮಿತಿಯು ತಿಳಿಸಿದೆ.

ಸಮಿತಿಯು ತನ್ನ ಈ ತೀರ್ಮಾನದ ಪ್ರತಿಗಳನ್ನು ಸಮಿತಿ ಸದಸ್ಯರಿಗೆ ಮಾತ್ರವಲ್ಲದೆ ಬೆಂಗಳೂರಿನ ಅಖಿಲ ಭಾರತ ಕ್ಷತ್ರಿಯ ಮಹಾಸಭಾದ ಸತ್ಯನಾರಾಯಣ ರಾವ್, ಬೆಂಗಳೂರಿನ ಕರ್ನಾಟಕ ರಾಜ್ಯ ಅರಸು ಸಂಘದ ಪ್ರಧಾನ ಕಾರ್ಯದರ್ಶಿ ಜಯದೇವರಾಜೇ ಅರಸ್, ಮೈಸೂರಿನ ಜೆಎಸ್‌ಎಸ್ ಮಹಾ ವಿದ್ಯಾಪೀಠ, ಮೈಸೂರಿನ ಶ್ರೀ ಶಿವರಾತ್ರಿ ರಾಜೇಂದ್ರ ಸೇವಾ ಟ್ರಸ್ಟ್ ಮತ್ತು ಮೈಸೂರು ವಿವಿಯ ನಿವೃತ್ತ ಪ್ರೊ. ಪಿ.ವಿ.ನಂಜರಾಜೇ ಅರಸ್ ಅವರಿಗೂ ರವಾನಿಸಿದೆ.

ಇದು ಕಾನೂನು ಬದ್ಧ, ಆದೇಶ ಉಲ್ಲಂಘಿಸಿಲ್ಲ



ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರ ಶತಮಾನೋತ್ಸವ ಸಮಿತಿ ಹಾಗೂ ಸೇವಾ ಟ್ರಸ್ಟ್ ವತಿಯಿಂದ ಕಾನೂನಾತ್ಮಕವಾಗಿಯೇ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಪ್ರತಿಮೆ ಸ್ಥಾಪಿಸಿದ್ದೇವೆ. ಯಾವುದೇ ಆದೇಶವನ್ನು ಉಲ್ಲಂಘಿಸಿಲ್ಲ. ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯ ಮತ್ತು ಜಿಲ್ಲಾ ಮಟ್ಟದ ಸಮಿತಿ ನಿರ್ಧಾರದಂತೆ ನಾವು ಕ್ರಮ ವಹಿಸಿದ್ದೇವೆ. ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರು ಕೇವಲ ಒಂದು ಸಮುದಾಯಕ್ಕಲ್ಲ, ಸರ್ವರ ಕ್ಷೇಮಾಭಿವೃದ್ಧಿಗೆ ದುಡಿದವರು. ಹಗಲಲ್ಲಿ ವಾಹನ ಸಂಚಾರಕ್ಕೆ ತೊಂದರೆಯಾಗುತ್ತದೆ ಎಂಬ ಕಾರಣಕ್ಕೆ ರಾತ್ರಿ ಪ್ರತಿಮೆ ಸ್ಥಾಪಿಸಲಾಗಿದೆ.

–ಡಾ.ಸಿ.ಜಿ.ಬೆಟ್ಟಸೂರ್ ಮಠ್, ಕಾರ್ಯನಿರ್ವಾಹಕ ಕಾರ್ಯದರ್ಶಿ, ಜೆಎಸ್‌ಎಸ್ ವಿದ್ಯಾಪೀಠ

ಅತ್ಯಂತ ದುರದೃಷ್ಟಕರ



ಮೈಸೂರಿನ ಗನ್‌ಹೌಸ್ ಬಳಿ ತಡರಾತ್ರಿ ಕ್ರೇನ್ ಉಪಯೋಗಿಸಿ ಪ್ರತಿಮೆ ಸ್ಥಾಪಿರುವುದು ಅತ್ಯಂತ ದುರದೃಷ್ಟಕರ ಸಂಗತಿ. ಈ ಕುರಿತು ಪ್ರಬುದ್ಧ ಸಂಸ್ಥೆಯಿಂದ ಇಂತಹ ಘಟನೆ ನಡೆದಿರುವುದು ನಿಜಕ್ಕೂ ಸಮಂಜಸವಲ್ಲ. ಉದ್ದೇಶಿತ ಪ್ರತಿಮೆ ಸ್ಥಾಪನೆಗೆ ಸತತವಾಗಿ ಪ್ರತಿರೋಧ ತೋರಿದ ಸಾರ್ವಜನಿಕರಿಗೆ ಸ್ಪಂದಿಸಿ ಈ ಬಗ್ಗೆ ಪುನರ್ವಿಮರ್ಶೆ ಮಾಡಲು ಮನವಿ ಕೂಡ ತಲುಪಿಸಿ ಬೆಂಬಲ ಸೂಚಿಸಿದ್ದೆ.

–ಪ್ರಮೋದಾದೇವಿ ಒಡೆಯರ್, ಮೈಸೂರು ರಾಜವಂಶಸ್ಥೆ

ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ ಪ್ರತಿಮೆ ಸ್ಥಾಪನೆ ಸಂಬಂಧ ಕಾನೂನು ಹೋರಾಟ ಮಾಡ್ತೇವೆ...

ಕರ್ನಾಟಕ ರಾಜ್ಯ ಅರಸು ಸಂಘದ ನಿರ್ಧಾರ



ಮೈಸೂರು,ಡಿ.9(ಜಿಎ, ಆರ್‌ಕೆ)– ಮೈಸೂರಿನ ಗನ್ ಹೌಸ್ ಬಳಿಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತದಲ್ಲಿ ಪ್ರತಿಮೆ ಸ್ಥಾಪಿಸುವ ಸಂಬಂಧ ಜಿಲ್ಲಾಡಳಿತವು ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಂಡಿದೆ. ಆ ಮೂಲಕ ಕಾನೂನು ಉಲ್ಲಂಘಿಸಿ, ರಾಜೇಂದ್ರ ಸ್ವಾಮೀಜಿಯವರ ಪ್ರತಿಮೆ ಸ್ಥಾಪನೆಗೆ ಅವಕಾಶ ಕಲ್ಪಿಸಿದೆ ಎಂದು ಕರ್ನಾಟಕ ರಾಜ್ಯ ಅರಸು ಸಂಘದ ಪ್ರಧಾನ ಕಾರ್ಯದರ್ಶಿ ಜಯದೇವರಾಜೇ ಅರಸ್ ಆರೋಪಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗನ್ ಹೌಸ್ ವೃತ್ತದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಪ್ರತಿಮೆ ಸ್ಥಾಪನೆ ವಿಚಾರವಾಗಿ ಹಲವಾರು ವರ್ಷಗಳಿಂದ ಕಾನೂನು ಹೋರಾಟ ನಡೆಯುತ್ತಿದ್ದು, ನ್ಯಾಯಾಲಯವು ಜಿಲ್ಲಾ ಸಮಿತಿಯನ್ನು ರಚಿಸಿರುವುದು ಅನಧಿಕೃತವಾಗಿ ಪ್ರತಿಮೆ ಸ್ಥಾಪಿಸಲು ಅವಕಾಶ ನೀಡಬಾರದೆಂದು. ಆದರೆ, ಈ ಸಮಿತಿ ಈಗ ಪ್ರತಿಮೆ ಸ್ಥಾಪನೆಗೆ ಅವಕಾಶ ಕಲ್ಪಿಸಿದೆ. ಇದು ಎಷ್ಟರಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ಜಿಲ್ಲಾಡಳಿತದ ಸಮಿತಿಯು ತಮಗೆ ಬೇಕಾದಂತೆ ನಿರ್ಧಾರ ತೆಗೆದುಕೊಂಡಿದೆ. ಸಮಿತಿಯ ಈ ಹಿಂದಿನ ಸಭೆಗೆ ಎಲ್ಲರನ್ನೂ ಆಹ್ವಾನಿಸುತ್ತಿದ್ದರು. ಆದರೆ, ದಿನಾಂಕ 5/12/23ರಂದು ನಡೆದ ಸಭೆಗೆ ನಮ್ಮ ಸಂಘದ ಯಾವುದೇ ಪದಾಧಿಕಾರಿಯನ್ನು ಆಹ್ವಾನಿಸಿಲ್ಲ. ಈ ನಡಾವಳಿಯ ಪ್ರತಿಯೂ ನಮಗೆ ತಲುಪಿಲ್ಲ. ಈ ವಿಚಾರವಾಗಿ ಸೋಮವಾರ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡುತ್ತೇವೆ. ಜೊತೆಗೆ ಕಾನೂನು ಹೋರಾಟ ಮುಂದುವರೆಸುತ್ತೇವೆ ಎಂದರು.

ಇಲ್ಲಿ ಈ ಹಿಂದೆ ರಾಜೇಂದ್ರ ಶ್ರೀಗಳ ಪ್ರತಿಮೆ ಸ್ಥಾಪನೆ ಮಾಡುತ್ತಾರೆ ಎಂಬ ವಿಷಯ ತಿಳಿಯುತ್ತಿದ್ದಂತೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರಿಗೆ 2017 ಮತ್ತು 2022ರಲ್ಲಿ ಎರಡು ಬಾರಿ ಪತ್ರ ಬರೆದು, ಈ ವೃತ್ತದಲ್ಲಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಮೆ ಸ್ಥಾಪಿಸುವುದು ಸೂಕ್ತ ಎಂದು ಪ್ರಸ್ತಾಪಿಸಿದರು. ಆದರೆ, ಈ ಪತ್ರಗಳಿಗೆ ಸ್ವಾಮೀಜಿಯವರಿಂದ ಈವರೆಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಅರಮನೆಯಿಂದ ಮಠವೇ ಹೊರತು, ಮಠದಿಂದಾಗಿ ಅರಮನೆ ಇಲ್ಲ ಎಂದು ತಿಳಿಸಿದರು.

ರಾತ್ರೋರಾತ್ರಿ ರಾಜೇಂದ್ರ ಸ್ವಾಮೀಜಿ ಪ್ರತಿಮೆ ಸ್ಥಾಪಿಸಿ, ಸ್ವಾಮೀಜಿ ಮತ್ತು ಇಡೀ ಜೆಎಸ್‌ಎಸ್ ಸಂಸ್ಥೆಗೆ ಅವಮಾನ ಮಾಡಲಾಗಿದೆ. ಈ ಕೃತ್ಯ ಸಂಬಂಧ ಕೆ.ಆರ್. ಠಾಣೆಯಲ್ಲಿ ದೂರು ನೀಡಲಾಗಿದೆ. ಈ ಸ್ಥಳದಲ್ಲಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಮೆ ಬಿಟ್ಟು ಬೇರೆ ಯಾವುದಕ್ಕೂ ಅವಕಾಶ ನೀಡಬಾರದು. ಇಲ್ಲವಾದರೆ, ತಾಯಿ ಚಾಮುಂಡೇಶ್ವರಿ ಅಥವಾ ಫೌಂಟನ್ ನಿರ್ಮಿಸಿ. ಅಂತಿಮವಾಗಿ ನ್ಯಾಯಾಲಯದ ತೀರ್ಪಿಗೆ ತಲೆಬಾಗುತ್ತೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ಶ್ರೀಕಾಂತ್‌ರಾಜ್ ಅರಸ್, ಶ್ರೀಧರ್‌ರಾಜ್ ಅರಸ್, ನಂಜುಂಡೇರಾಜ್ ಅರಸ್, ಅಮರ್‌ನಾಥ್‌ಅರಸ್ ಉಪಸ್ಥಿತರಿದ್ದರು.

ಜಾತಿ ಜನಗಣತಿ ಆಗದೆ ಸಂಪತ್ತಿನ ಸಮಾನ ಹಂಚಿಕೆ 'ಕತ್ತಲೆಯಲ್ಲಿ ಕಪ್ಪು ಬೆಕ್ಕು ಹುಡುಕಿದಂತೆ...!'

● ಹೈಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ, ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಎಲ್.ನಾರಾಯಣಸ್ವಾಮಿ ಅಭಿಮತ ● ಸಂಪತ್ತಿನ ಸಮಾನ ಹಂಚಿಕೆಗೆ ನಿಗದಿತ ಅವಧಿಗೆ ಜಾತಿ ಗಣತಿ ಅನಿವಾರ್ಯ

ಮೈಸೂರು,ಡಿ.9(ಎಸ್‌ಬಿಡಿ)– ರಾಷ್ಟ್ರದ ಸಂಪತ್ತಿನ ಸಮಾನ ಹಂಚಿಕೆ ದೃಷ್ಟಿಯಿಂದ ನಿಗದಿತ ಅವಧಿಗೆ ಜಾತಿ ಜನಗಣತಿ ನಡೆಸುವುದು ಅಗತ್ಯ ಎಂದು ಹೈಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ, ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಎಲ್.ನಾರಾಯಣಸ್ವಾಮಿ ಅಭಿಪ್ರಾಯಿಸಿದರು.

ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಶನಿವಾರ ನಡೆದ 'ಒಡಲು ಟ್ರಸ್ಟ್' ಉದ್ಘಾಟನೆ ಹಾಗೂ ವಿಚಾರ ಮಂಥನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಲ ಕಾಲಕ್ಕೆ ಜಾತಿ ಜನಗಣತಿ ನಡೆಸಿದರೆ ಆ ಮೂಲಕ ರಾಷ್ಟ್ರದ ಸಂಪತ್ತು ಸಮಾನವಾಗಿ ಹಂಚಿಕೆಯಾಗಲು ಸಾಧ್ಯವಿದೆ ಎಂದರು.

ಆರ್ಥಿಕ ಸಂಪತ್ತು ಕೆಲವೇ ವ್ಯಕ್ತಿಗಳ ಕೈಯ್ಯಲ್ಲಿದ್ದು, ದೇಶದಲ್ಲಿ ಇಂದಿಗೂ ಬಡವರು ದೊಡ್ಡ ಪ್ರಮಾಣದಲ್ಲಿದ್ದಾರೆ. ಈ ಪರಿಸ್ಥಿತಿಯಲ್ಲಿ ಸಾಮಾಜಿಕ ನ್ಯಾಯ ಕಲ್ಪಿಸಲು ಯಾರು ಎಷ್ಟಿದ್ದಾರೆ ಎಂಬ ಅಂಕಿ ಅಂಶಗಳು ಬೇಕಾಗುತ್ತದೆ. ಕಡಿಮೆ ಪ್ರಮಾಣದಲ್ಲಿ ಹೆಚ್ಚು ಜನ ಹಂಚಿಕೊಳ್ಳಲು ಸಾಧ್ಯವಾಗುವುದಿಲ್ಲ. ಮಹಿಳೆಯರಿಗೆ ಮೀಸಲಾತಿ ನೀಡುವಾಗಲೂ ಅವರ ಸಂಖ್ಯೆಯನ್ನು ಪರಿಗಣಿಸಬೇಕು. ಜಾತಿ ಜನ ಗಣತಿಯಾಗದೇ ಸಮರ್ಪಕವಾಗಿ ಸೌಲಭ್ಯ ಕಲ್ಪಿಸುತ್ತೇವೆ ಎನ್ನುವುದು ಕತ್ತಲ ಕೋಣೆಯಲ್ಲಿ ಕಪ್ಪು ಬೆಕ್ಕು ಹುಡುಕಿದಂತೆ ಆಗುತ್ತದೆ. ಹಾಗಾಗಿ ಯಾರು ಎಷ್ಟಿದ್ದಾರೆ ಎಂಬ ಅಂಕಿ ಅಂಶದಿಂದ ಮಾತ್ರ ಸಮಾನ ಹಂಚಿಕೆ ಸಾಧ್ಯ ಎಂದು ಪ್ರತಿಪಾದಿಸಿದರು.

ಸಾಧಿಸಿದ್ದಾದರೂ ಏನು?: ದೇಶದ ಜನಸಾಮಾನ್ಯರಿಗೆ ಸಂಪೂರ್ಣವಾಗಿ ಸಾಮಾಜಿಕ ನ್ಯಾಯ ದೊರಕಿಲ್ಲ. ಸ್ವಾತಂತ್ರ್ಯ ಬಂದು 75 ವರ್ಷವಾಗಿದ್ದರೂ ದೇಶದಲ್ಲಿ ಬಡತನ ಕಡಿಮೆಯಾಗಿಲ್ಲ. ಈಗಲೂ ಬಡ ಜನರು ಅಕ್ಕಿಗಾಗಿ ಸಾಲುಗಟ್ಟಿ ನಿಲ್ಲುವ ಪರಿಸ್ಥಿತಿಯಲ್ಲಿದ್ದಾರೆ ಎಂದರೆ ನಾವು ಸಾಧಿಸಿದ್ದಾದರೂ ಏನು?. ನಮ್ಮ ನಾಯಕರು ಜನರಿಗೆ ಹೊಟ್ಟೆ ತುಂಬಾ ಊಟವನ್ನೇ ನೀಡಲು ಸಾಧ್ಯವಾಗಿಲ್ಲ. ಅಷ್ಟೊಂದು ಜನರನ್ನು ಬಡವರನ್ನಾಗಿಯೇ ಉಳಿಸಿಕೊಂಡಿದ್ದೇವೆ. ನಾವು ನಮ್ಮ ನಾಯಕರನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಎಡವಿದ್ದೇವಾ ಅಥವಾ ನಮ್ಮ ಹೋರಾಟದ ಧ್ವನಿ ಕ್ಷೀಣಿಸಿದೆಯಾ? ಎಂದು ನಮಗೆ ನಾವೇ ಪ್ರಶ್ನಿಸಿಕೊಳ್ಳಬೇಕಿದೆ ಎಂದರು.

ಯೋಚಿಸಿ ಆಯ್ಕೆ ಮಾಡಿ: ಚುನಾವಣೆಯಲ್ಲಿ ಹಣ ಬಲದಿಂದ ಗೆಲ್ಲುವವರಿಂದ ಜನಪರ ನಿಲುವು ನಿರೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಸರಿಯಾಗಿ ಯೋಚಿಸಿ, ಯೋಗ್ಯರಿಗೆ ಮತ ಚಲಾಯಿಸಬೇಕು. ಸಮಾಜದಲ್ಲಿ ಅನಿಷ್ಟ ಪದ್ಧತಿಗಳು ಇನ್ನೂ ಜೀವಂತವಾಗಿವೆ. ಸರ್ಕಾರಗಳೂ ಕೂಡ ಜಾತಿ ಸಂಘಟನೆಗಳಿಗೆ ಪ್ರೋತ್ಸಾಹ ನೀಡುತ್ತಿವೆ ಎಂದೆನಿಸುತ್ತದೆ. ಸಡಿಲಗೊಳಿಸಲಾಗದಷ್ಟು ಜಾತಿ ಗಟ್ಟಿಯಾಗುತ್ತಿದೆ. ಸಂಪತ್ತು ಕೆಲವರ ಕೈಯ್ಯಲ್ಲಿ ಕ್ರೋಢೀಕರಣವಾಗಿದೆ. ದೇಶದಲ್ಲಿ ಜಾತಿ ಪದ್ಧತಿ ಅಳಿದು ಸಮಾನ ಭಾವ ಮೂಡುವವರೆಗೂ ಆರ್ಥಿಕ ಸಂಪತ್ತಿನ ಸಮಾನ ಹಂಚಿಕೆ ಮರೀಚಿಕೆಯಷ್ಟೇ ಎಂದು ಅಭಿಪ್ರಾಯಿಸಿದರು.

ಇಚ್ಛಾಶಕ್ತಿ ಇಲ್ಲ: 'ವಿಚಾರ ಮಂಥನ'ದಲ್ಲಿ 'ಮಹಿಳಾ ಮೀಸಲಾತಿ: ಸವಾಲು ಹಾಗೂ ಸಾಧ್ಯತೆಗಳು' ಕುರಿತು ಮಾತನಾಡಿದ ಪ್ರಾಧ್ಯಾಪಕಿ ಕವಿತಾ ರೈ, ರಾಜಕೀಯ ಪರಿಸ್ಥಿತಿಯಲ್ಲಿ ಭಾಗಿಗಳಾಗುವ ಮಹಿಳೆಯರು ಬಲಿಯೂ ಆಗುತ್ತಿದ್ದಾರೆ. ಹೆಚ್.ಡಿ.ದೇವೇಗೌಡರು ಪ್ರಧಾನಿಯಾಗಿದ್ದಾಗ ಮಹಿಳಾ ಮೀಸಲಾತಿ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲಾಗಿತ್ತು. ಅದು ವಿವಾದಕ್ಕೆ ಒಳಗಾಗಿತ್ತು. ಇತ್ತೀಚೆಗೆ ಕಾನೂನು ಸಚಿವರು ಮಸೂದೆ ಮಂಡಿಸಿದ್ದು, ಸುದೀರ್ಘ ಚರ್ಚೆಯ ನಂತರ ಅಂಗೀಕಾರಗೊಂಡಿದೆ. ಆದರೆ ಅದರಲ್ಲಿ ಓಬಿಸಿ ಮಹಿಳೆಯರಿಗೆ ಸ್ಥಾನ ನಿಗದಿಗೊಳಿಸಿಲ್ಲ. ಅಲ್ಲದೆ ಜನಗಣತಿ ಹಾಗೂ ಲೋಕಸಭಾ ಕ್ಷೇತ್ರಗಳ ಪುನರ್ವಿಂಗಡಣೆಯಾದ ನಂತರ ಈ ಮೀಸಲಾತಿ ಜಾರಿಯಾಗಲಿದೆ ಎನ್ನಲಾಗುತ್ತಿದೆ. ಇಚ್ಛೆಸಿದರೆ ನಾಳೆಯೇ ಮೀಸಲಾತಿ ಜಾರಿಗೊಳಿಸಬಹುದು. ಆದರೆ ಇದಕ್ಕೆ ಪರ್ಯಾಯ ರಾಜಕಾರಣದ ಆತಂಕ ಅಡ್ಡಿಯಾಗಿರಬಹುದು ಎಂದು ತಿಳಿಸಿದರು.

'ಜಾತಿ ಗಣತಿ ಅನಿವಾರ್ಯತೆ ಮತ್ತು ಸಾಮಾಜಿಕ ನ್ಯಾಯ' ವಿಷಯ ಕುರಿತು ಮಾತನಾಡಿದ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಕೆ.ಎನ್.ಲಿಂಗಪ್ಪ, ಜಾತಿ ಜನಗಣತಿ ಅನಿವಾರ್ಯ ಎಂದು ಪ್ರತಿಪಾದಿಸಿದರು. ಟ್ರಸ್ಟ್ ಅಧ್ಯಕ್ಷ ಆರ್.ಎಸ್.ದೊಡ್ಡಣ್ಣ ಅಧ್ಯಕ್ಷತೆ ವಹಿಸಿದ್ದರು. ಒಡಲು ಟ್ರಸ್ಟ್ ಧರ್ಮದರ್ಶಿ ಎಸ್.ನರೇಂದ್ರಕುಮಾರ್, ಕಾರ್ಯದರ್ಶಿ ಕೆ.ಎನ್.ಶಿವಲಿಂಗಯ್ಯ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ 'ಒಡಲು ಟ್ರಸ್ಟ್' ಉದ್ಘಾಟನೆ ಹಾಗೂ ವಿಚಾರ ಮಂಥನ ಕಾರ್ಯಕ್ರಮವನ್ನು ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಎಲ್.ನಾರಾಯಣಸ್ವಾಮಿ ಉದ್ಘಾಟಿಸಿದರು.

ಸಿದ್ದಲಿಂಗಪುರ ಬಳಿ ಜೋಡೆತ್ತು ಗಾಡಿ ಓಟ ಸ್ಪರ್ಧೆಯಲ್ಲಿ ಪಾಲಹಳ್ಳಿಯ 'ಸಾರಂಗ ಮತ್ತು ಏಳುಕೋಟೆ'ಗೆ ಪ್ರಥಮ ಬಹುಮಾನ



ಮೈಸೂರು, ಡಿ.9(ಎಂಕೆ)– ಮೈಸೂರಿನ ಸಿದ್ದಲಿಂಗಪುರದಲ್ಲಿ ಷಷ್ಠಿ ಹಬ್ಬದ ಪ್ರಯುಕ್ತ ಯುವಶಕ್ತಿ ಪಡೆ ವತಿಯಿಂದ ಆಯೋಜಿಸಿದ್ದ ಹಳ್ಳಿ ಕಾರ್, ಗೂಳಿ ಜೋಡೆತ್ತು ಗಾಡಿ ಓಟದ ಸ್ಪರ್ಧೆಯಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿಯ 'ಸಾರಂಗ ಮತ್ತು ಏಳುಕೋಟೆ' ಜೋಡೆತ್ತು ಪ್ರಥಮ ಬಹುಮಾನ ಜಯಿಸಿತು.

ಸುಮಾರು 65 ಜೋಡೆತ್ತುಗಳ ನಡುವೆ ನಡೆದ ಹಣಾಹಣಿಯ ಅಂತಿಮ ಸುತ್ತಿನಲ್ಲಿ ಮಿಂಚಿನಂತೆ ಓಡಿದ ಪಾಲಹಳ್ಳಿಯ 'ಸಾರಂಗ ಮತ್ತು ಏಳುಕೋಟೆ' ಜೋಡೆತ್ತು ಪ್ರಥಮ ಬಹುಮಾನ (50,000 ರೂ.)ದ ಜೊತೆಗೆ ಆಕರ್ಷಕ ಟ್ರೋಫಿ ಗೆದ್ದುಕೊಂಡವು.

ಪಿರಿಯಾಪಟ್ಟಣ ತಾಲೂಕಿನ ನವಿಲೂರು ಗ್ರಾಮದ 'ನವಿಲೂರು ಕರ ಮತ್ತು ಬೌರ್ಯ' ಜೋಡೆತ್ತು ದ್ವಿತೀಯ ಬಹುಮಾನ(30,000 ರೂ.) ಗೆದ್ದರೆ, ಪಾಲಹಳ್ಳಿಯ 'ರಾಮುಕರ ಮತ್ತು ಹುಲಿಯಾ' ಜೋಡೆತ್ತು ತೃತೀಯ ಬಹುಮಾನ(20,000 ರೂ.) ಗೆದ್ದುಕೊಂಡವು. ಹಾಗೆಯೇ ಚಿಕ್ಕಮಗಳೂರಿನ ತೇಗೂರು ಗ್ರಾಮದ 'ಸಿಪಾಯಿ ಮತ್ತು ಬಾದಲ್' ಜೋಡೆತ್ತು ನಾಲ್ಕನೆ ಬಹುಮಾನ (10,000 ರೂ.)ಪಡೆದವು. ವಿಜೇತರ ಜೋಡೆತ್ತುಗಳ ಮಾಲೀಕರಿಗೆ ನಗದು ಬಹುಮಾನದ ಜೊತೆಗೆ ಟ್ರೋಫಿಗಳನ್ನು ನೀಡಿ ಅಭಿನಂದಿಸಲಾಯಿತು.

ಸಿದ್ದಲಿಂಗಪುರ ಗ್ರಾಪಂ ಸದಸ್ಯ ಮಂಜುನಾಥ್, ಯುವಶಕ್ತಿ ಪಡೆ ಅಧ್ಯಕ್ಷ ಕಾರ್ತಿಕ್, ದರ್ಶನ್, ಅಭಿಷೇಕ್, ಕಿರಣ್, ಚೇತನ್, ಆನಂದ್, ಮಂಜುನಾಥ್, ಪ್ರವೀಣ, ಸೂರ್ಯಕುಮಾರ್, ರವಕುಮಾರ್, ಯೋಗೇಶ್, ಸುನೀಲ್ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ನಾನು ಸಂಗೀತ ಅಭ್ಯಾಸ ಮಾಡುವಾಗೆಲ್ಲಾ ನೀವು ಯಾಕ್ರೀ ಹೊರಗೆ ಹೋಗಿ ನಿಂತ್ಕೋತೀರಾ?

ಗಂಡ : ಅಕ್ಕಪಕ್ಕದ ಮನೆಯವರು ನಾನು ನಿನ್ನ ಹೊಡೀತಿದ್ದೀನಿ ಅಂತ ತಿಳ್ಕೋಬಾರ್ದು ಅಂತ...

ಮೈಸೂರು ಮಿತ್ರ

ಭಾನುವಾರ, 10 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸದ್ಗುಣಕ್ಕೆ ಅಪಾರ ಧೈರ್ಯವಿದೆ. ಅದಕ್ಕೆ ಭಯವೆಂಬುದೇ ಇಲ್ಲ.

–ವಿಲಿಯಮ್ ಶೇಕ್ಸ್‌ಪಿಯರ್

ವೇದ ಸುಳ್ಳಾದರೂ { ಚಾತುರ್ಯ ಬಲ್ಲವನಿಗೆ
ಗಾದೆ ಸುಳ್ಳಾಗದು { ಚಾಚೂ ಚಿಂತಿಲ್ಲ

ನಿಮ್ಮ ಪತ್ರಗಳು

ಲೀಲಾ ಅಮ್ಮನ ಲೀಲಾಂತ್ಯ

ಮಾನ್ಯರೆ,



"ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ದೇವರಿಲ್ಲ" ಎನ್ನುವ ಗಾದೆ ಮಾತು ಸಾರ್ವಕಾಲಿಕ ಸತ್ಯವಾಗಿದೆ. ಜಗತ್ತಿನಲ್ಲಿ ತಾಯಿಗೆ ವಿಶೇಷ ಸ್ಥಾನವಿದೆ. ತಾಯಿಯೇ ಕಣ್ಣಿಗೆ ಕಾಣುವ ದೇವರಾಗಿದ್ದಾಳೆ. ಇದೇ ಹಾದಿಯಲ್ಲಿ ಕನ್ನಡ ಚಲನಚಿತ್ರರಂಗದ ಅಭಿಜಾತ ಕಲಾವಿದೆ, ಎಲ್ಲರಿಂದಲೂ ಅಮ್ಮ ಎಂದೇ ಕರೆಯಲ್ಪಡುತ್ತಿದ್ದ ಲೀಲಾವತಿಯವರು ನಮ್ಮನ್ನಗಲಿರುವುದು ಕರ್ನಾಟಕ ರಾಜ್ಯವನ್ನು ಶೋಕ ಸಾಗರದಲ್ಲಿ ಮುಳುಗುವಂತೆ ಮಾಡಿದೆ.

ಲೀಲಾವತಿಯವರ ಪೂರ್ಣ ಹೆಸರು ಲೀಲಾಕಿರಣ್. ಇವರು 1938 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ ಜನಿಸಿದರು. ನಟಿ ಲೀಲಾವತಿಯವರು ನಾಟಕ, ರಂಗಭೂಮಿ ಬಗೆಗೆ ಚಿಕ್ಕ ವಯಸ್ಸಿನಲ್ಲೇ ಆಸಕ್ತಿ ಹೊಂದಿದ್ದರು. ಕನ್ನಡ, ತೆಲುಗು, ತಮಿಳು, ಮಲಯಾಳಂ ಭಾಷೆಗಳಲ್ಲಿ 600ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದರು. ನಟಿ ಲೀಲಾವತಿ 50 ವರ್ಷಗಳ ಕಾಲ ಚಿತ್ರರಂಗದಲ್ಲಿ ಸೇವೆ ಸಲ್ಲಿಸಿದ್ದರು. ಕನ್ನಡ ಚಿತ್ರರಂಗದ ಮೇರು ನಟರಾದ ಡಾ. ರಾಜಕುಮಾರ್, ವಿಷ್ಣುವರ್ಧನ್, ತಮಿಳಿನ ಎಂಜಿಆರ್, ಎನ್.ಟಿ.ಆರ್, ಶಿವಾಜಿಗಣೇಶನ್, ಜೆಮಿನಿ ಗಣೇಶನ್, ತೆಲುಗಿನ ಚಿರಂಜೀವಿ ಅಂತಹ ನಟರು ಜೊತೆ ನಟಿಸಿ ಅಭಿಮಾನಿಗಳ ಮನಸ್ಸು ಗೆಲ್ಲುವಲ್ಲಿ ಯಶಸ್ವಿಯಾಗಿದ್ದರು. ಲೀಲಾವತಿಯವರು ಕೇವಲ ನಟನೆ ಮಾತ್ರವಲ್ಲದೇ ಸಾಮಾಜಿಕ ಕೆಲಸಗಳ ಮೂಲಕವೂ ಗುರುತಿಸಿಕೊಂಡಿದ್ದರು.

ಲೀಲಾವತಿ ಅವರು 1949ರಲ್ಲಿ ಶಂಕರ್ ಸಿಂಗ್ ಅವರ ನಾಗಕನ್ನಿಕ ಚಿತ್ರದಲ್ಲಿ ಸಖಿಯ ಪಾತ್ರದ ಮುಖಾಂತರ ಕನ್ನಡ ಚಿತ್ರರಂಗ ಪ್ರವೇಶಿಸಿದರು. ಸುಬ್ಬಯ್ಯ ನಾಯ್ಡು ಅವರ ಸಂಸ್ಥೆಯಲ್ಲಿ ರಂಗಭೂಮಿ ಕಲಾವಿದೆಯಾಗಿದ್ದ ಲೀಲಾವತಿ ಅವರು ಹಿರಣ್ಯ ಕಶ್ಯಪು ನಾಟಕದಲ್ಲಿ ಕಯಾದುವಿನ ಸಖಿಯಾಗಿ ನಾಟಕಗಳಲ್ಲಿ ಅಭಿನಯಿಸಿದ್ದರು. ಮಹಾಲಿಂಗ ಭಾಗವತರ ನಾಟಕ ಸಂಸ್ಥೆಯನ್ನು ಸೇರಿ ಹಲವಾರು ನಾಟಕಗಳಲ್ಲಿ ಅಭಿನಯಿಸಿ ಸೈ ಎನಿಸಿಕೊಂಡಿದ್ದರು. ಸುಬ್ಬಯ್ಯ ನಾಯ್ಡು ಅವರ 'ಭಕ್ತ ಪ್ರಹ್ಲಾದ'ದಲ್ಲಿ ಕೂಡಾ ಲೀಲಾವತಿ ಅಭಿನಯಿಸಿದ್ದರು.

ಲೀಲಾವತಿಯವರು ನಾಯಕಿಯಾಗಿ ಅಭಿನಯಿಸಿದ ಮೊದಲ ಚಿತ್ರ ಮಾಂಗಲ್ಯ ಯೋಗ. ಡಾ. ರಾಜ್‌ಕುಮಾರ್ ಅವರೊಂದಿಗೆ ನಟಿಸಿದ ಮೊದಲ ಚಿತ್ರ ರಣಧೀರ ಕಂಠೀರವ, ನಂತರದಲ್ಲಿ ರಾಣಿ ಹೊನ್ನಮ್ಮ ಚಿತ್ರದ ಯಶಸ್ಸಿನ ಮೂಲಕ ರಾಜ್‌ಕುಮಾರ್ ಮತ್ತು ಲೀಲಾವತಿ ಅವರ ಜೋಡಿ ಜನಪ್ರಿಯವಾಯಿತು. ಸಂತ ತುಕಾರಾಂ, ಕಣ್ತೆರೆದು ನೋಡು, ಕೈವಾರ ಮಹಾತ್ಮೆ, ಗಾಳಿ ಗೋಪುರ, ಕನ್ಯಾರತ್ನ, ಕುಲವಧು, ವೀರ ಕೇಸರಿ, ಮನ ಮೆಚ್ಚಿದ ಮಡದಿ ಹೀಗೆ ಹಲವಾರು ಚಿತ್ರಗಳಲ್ಲಿ ಕಾಣಿಸಿಕೊಂಡರು. ಅಲ್ಲದೆ ನಾಯಕರಿಗಿಂತಲೂ ಹೆಚ್ಚಿನ ಸಂಭಾವನೆ ಪಡೆಯುತ್ತಿದ್ದು, ಆ ಕೀರ್ತಿ ಲೀಲಾವತಿಯವರಿಗೆ ಸಲ್ಲಬೇಕು.

ಲೀಲಾವತಿಯವರಿಗೆ ಸಿನಿಮಾದಲ್ಲಿ ಸಾಧನೆಗಾಗಿ 2008– ತುಮಕೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, 2006– ಅತ್ಯುತ್ತಮ ಪೋಷಕನಟಿ ಫಿಲಂಫೇರ್ ಕನ್ನಡ – ಕನ್ನಡದ ಕಂದ ಚಿತ್ರಕ್ಕಾಗಿ, 1999–2000 ದಲ್ಲಿ – ಡಾ. ರಾಜಕುಮಾರ್ ಜೀವಮಾನ ಸಾಧನೆ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದರು.

ಚಲನಚಿತ್ರರಂಗವಲ್ಲದೆ ಸಮಾಜ ಸೇವೆಯಲ್ಲಿಯು ತಮ್ಮನ್ನು ತೊಡಗಿಸಿಕೊಂಡಿದ್ದ ಲೀಲಾವತಿಯವರು ನೆಲಮಂಗಲದ ಸುತ್ತಮುತ್ತ ವಾಸಿಸುವ ಜನರ ಆರೋಗ್ಯ ಸೇವೆಗಾಗಿ ಸೋಲದೇವನಹಳ್ಳಿಯಲ್ಲಿ ಆಸ್ಪತ್ರೆಯೊಂದನ್ನು ಕಟ್ಟಿಸಿದ್ದಾರೆ. ಇವರ ಮಗ ವಿನೋದ್ ರಾಜ್ ಕನ್ನಡ ಚಿತ್ರರಂಗದ ಖ್ಯಾತ ನಟ.

ಲೀಲಾಮ್ಮ ಎಂದೆ ಪ್ರಸಿದ್ಧಿಯಾಗಿದ್ದ, ಕರ್ನಾಟಕದ ತಾಯಿ ತಮ್ಮ 87 ನೇ ವಯಸ್ಸಿನಲ್ಲಿ ನಮ್ಮನ್ನಗಲಿರುವುದು ಕರ್ನಾಟಕದ ಚಿತ್ರರಂಗಕ್ಕೆ ತುಂಬಲಾರದ ನಷ್ಟವಾಗಿದ್ದು ಮತ್ತೊಮ್ಮೆ ಲೀಲಾವತಿಯವರು ಕರ್ನಾಟಕದಲ್ಲಿ ಹುಟ್ಟಿಬರಲೆಂದು ದೇವರಲ್ಲಿ ಪ್ರಾರ್ಥಿಸುತ್ತಾ ಅವರ ಆತ್ಮಕ್ಕೆ ಚಿರಶಾಂತಿ ದೊರಕಲೆಂದೂ ಕರ್ನಾಟಕದ ಜನತೆಯ ಪರವಾಗಿ ಪ್ರಾರ್ಥಿಸೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

ರೂಟ್ ನಂ. 80 ಸಮಯಾನುಸಾರ ಸಂಚರಿಸಲಿ

ಮಾನ್ಯರೆ,

ಈ ಮೊದಲು ಮೈಸೂರು ನಗರ ಸಾರಿಗೆ ರೂಟ್ ನಂ.80 ವಿವೇಕಾನಂದ ವೃತ್ತದಿಂದ ನಗರ ಬಸ್ ನಿಲ್ದಾಣದ ಮೂಲಕ ಸಾತಗಳ್ಳಿ ಸ್ಯಾಟಲೈಟ್ ಬಸ್ ನಿಲ್ದಾಣಕ್ಕೆ ಗಂಟೆಗೊಮ್ಮೆ ಸಂಚರಿಸುತ್ತಿತ್ತು. ಇದರಿಂದ ಕಾಲೇಜು ವಿದ್ಯಾರ್ಥಿಗಳಿಗೆ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರಿಗೆ, ಎಂಆರ್‌ಸಿ ಕಣ್ಣಿನ ಆಸ್ಪತ್ರೆಗೆ, ಶಕ್ತಿನಗರ ಪ್ರಾದೇಶಿಕ ಸಾರಿಗೆ ಕಚೇರಿಗೆ ತೆರಳುವ ಸಾರ್ವಜನಿಕರಿಗೆ ಅನುಕೂಲವಾಗುತ್ತಿತ್ತು. ಈಗ ಈ ಬಸ್ ಸರಿಯಾದ ಸಮಯಪಾಲನೆ ಮಾಡುತ್ತಿಲ್ಲ. ಸಂಬಂಧಪಟ್ಟ ಸಾರಿಗೆ ಸಂಸ್ಥೆ ಅಧಿಕಾರಿಗಳು ಈ ಸಮಸ್ಯೆ ಬಗೆಹರಿಸಲು ಮನವಿ.

–ನೊಂದ ಪ್ರಯಾಣಿಕರು, ಮೈಸೂರು.

ಹಾಮಾನಾ ಮತ್ತು ಅಂಕಣ ಬರಹ

ಮಾನ್ಯರೆ,

ಡಾ. ಹಾ.ಮಾ.ನಾಯಕರ ಬಗೆಗೆ ಜೆ.ಬಿ.ಆರ್. ಅವರ ಬರಹ (ಮಿತ್ರ ನ. 10). ಪ್ರಾಯಶಃ ಕೇಂದ್ರ ಸಾಹಿತ್ಯ ಅಕಾಡೆಮಿಯ ಇತಿಹಾಸದಲ್ಲಿ, ಅಂಕಣ ಬರಹಗಳಿಗೆ ಪ್ರಥಮ ಪ್ರಶಸ್ತಿ ಪಡೆದ ಕೀರ್ತಿ ಡಾ. ನಾಯಕರದು! ಅದರಲ್ಲಿ ನನ್ನ ಪಾತ್ರದ ಬಗೆಗೆ ಹೇಳಿಕೊಂಡರೆ ತಪ್ಪಲ್ಲವಷ್ಟೆ,

ಆ ವರ್ಷ ನಾನೊಬ್ಬ ತೀರ್ಪುಗಾರ, ಹೇಗೋ ಏನೋ ಅಂತಿಮ ಆಯ್ಕೆ ನನ್ನ ಕೈಯಲ್ಲಿತ್ತು ಅದನ್ನರಿತ ಹಾಮಾನಾ ನನ್ನನ್ನು ಕೇಳಿದರು : "ಯಾರಿಗೆ ಬಹುಮಾನ ಕೊಡಿಸುತ್ತೀರಿ, ಸ್ವಾಮಿ?" ನನ್ನ ಮನಸ್ಸಿನಲ್ಲಿ ಎಲ್.ಎಸ್. ಶೇಷಗಿರಿರಾಯರ ಪುಸ್ತಕವೊಂದಿರುವುದಾಗಿ ತಿಳಿಸಿದೆ. ಆಗ ಅವರು ಹೇಳಿದರು : "ಅದನ್ನು ಬಿಡಿ; ನನ್ನ ಪುಸ್ತಕಕ್ಕೆ ಕೊಡಿಸಿ!" "ಆಯಿತು, ಸಾರ್" ಎಂದೆ. ಆಮೇಲೆ ಅವರಿಗೆ ಪ್ರಶಸ್ತಿ ಬಂತು. (ಸುದ್ದಿಯನ್ನು ಆಕಾಶವಾಣಿಯಲ್ಲಿ ಕೇಳಿ, ಮೊದಲನೆಯದಾಗಿ ಮನೆಗೆ ಹೋಗಿ ಅಭಿನಂದಿಸಿದೆ. ಅವರು ವಂದನೆ ಹೇಳಲಿಲ್ಲ ಎಂಬುದು ಬೇರೆ ಮಾತು)

ಹಾಮಾನಾ ಅವರ ಅಂಕಣ ಬರಹಗಳ ಬಗೆಗೆ ಒಮ್ಮೆ ಡಾ. ಎಂ. ಚಿದಾನಂದ ಮೂರ್ತಿಯವರು Shallow (ಆಳವಿಲ್ಲದವು) ಎಂದರು. ನೆನಪಾಗುತ್ತದೆ! ಅದು ನನಗೆ ಪೂರ್ತಿ ಸಮ್ಮತವಲ್ಲ. ಅವು ವೈಶಿಷ್ಟ್ಯಪೂರ್ಣ ಬರಹಗಳು.

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

ಮಂಥನ




ನಿವೇದಿತಾ ಎಚ್
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು


ನಾಕೊಂದ್ಲ ನಾಕು! ನಾಕೆರಡ್ಲ ಎಂಟು...ಇಷ್ಟೇ ಅಲ್ಲ ಗಣಿತ!



ಆರ್ಯಭಟ



ಬ್ರಹ್ಮಗುಪ್ತ



ನೀಲಕಂಠ ಸೋಮಯಾಜಿ



ಶ್ರೀನಿವಾಸ ರಾಮಾನುಜನ್

ನಿಮಗೆ ಮೊದಲು ಒಂದಷ್ಟು ಒಗಟುಗಳನ್ನು ಹೇಳುತ್ತೇನೆ:

ಒಬ್ಬ ಹಳ್ಳಿಯವನು ರಾಜನಿಗೆ ಕಾಣಿಕೆ ಕೊಡಲೆಂದು ಒಂದಿಷ್ಟು ಹಣ್ಣುಗಳನ್ನು ಬುಟ್ಟಿಯಲ್ಲಿ ತುಂಬಿಕೊಂಡು ಬರುತ್ತಾನೆ. ಅವನು ಅರಮನೆಯನ್ನು ಮುಟ್ಟುವವರೆಗೆ ಏಳು ಸುಂಕದಕಟ್ಟೆಗಳನ್ನು ದಾಟಬೇಕು. ಪ್ರತಿ ಸುಂಕದಕಟ್ಟೆಯಲ್ಲಿ ಪ್ರತಿ ಸುಂಕದವನು, ಹಳ್ಳಿಯವನಿಂದ ಅವನಲ್ಲಿದ್ದ ಹಣ್ಣುಗಳ ಅರ್ಧದಷ್ಟು ಹಣ್ಣುಗಳನ್ನು ಸುಂಕವಾಗಿ ಪಡೆಯುತ್ತಾರೆ. ಏಳೂ ಸುಂಕದಕಟ್ಟೆಗಳನ್ನು ದಾಟಿ ಬಂದಮೇಲೆ ಕೊನೆಯಲ್ಲಿ ರಾಜನಿಗೆ ಕೊಡಲು ಅವನ ಬಳಿ ಅರ್ಧ ಹಣ್ಣು ಮಾತ್ರ ಉಳಿಯಿತು. ಹಾಗಾದರೆ ಹಳ್ಳಿಯವನು ತಂದ ಹಣ್ಣುಗಳೆಷ್ಟು?

ಹಾಗೆಯೇ ಇನ್ನೊಂದು,

ನೀವು ಒಂದು ಅಂಕೆ ಅಥವಾ ಸಂಖ್ಯೆಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಿರಿ. ಅಷ್ಟೇ ಮೊತ್ತವನ್ನು ಆ ಸಂಖ್ಯೆಗೆ ಕೂಡಿಸಿರಿ. ಅವುಗಳ ಒಟ್ಟು ಮೊತ್ತದಲ್ಲಿ ಅದರ ಅರ್ಧವನ್ನು ಕಳೆದು ಎರಡನೆಯ ಸಾರಿ ಇಟ್ಟುಕೊಂಡ ಸಂಖ್ಯೆಯನ್ನು ಉಳಿದ ಮೊತ್ತದಲ್ಲಿ ಕಳೆಯಿರಿ. ಎಷ್ಟು ಉಳಿಯಿತೆನ್ನುವುದನ್ನು ನಾನು ಹೇಳುತ್ತೇನೆ.

ಇದೊಂದನ್ನು ಹೇಳಲೇಬೇಕು:

ಒಂದು ಊರಿನಲ್ಲಿ ಒಂದೇ ದೇವಸ್ಥಾನದಲ್ಲಿ ಮೂರು ದೇವರುಗಳಿದ್ದವು. ಒಬ್ಬ ಭಕ್ತನು ಕೆಲವು ಹೂವುಗಳನ್ನು ತೆಗೆದುಕೊಂಡು ಅಲ್ಲಿಗೆ ಹೋಗುತ್ತಾನೆ. ಅವನು ತಾನು ಒಯ್ದ ಹೂವುಗಳನ್ನು ಕೈಯ್ಯಲ್ಲಿ ಹಿಡಿದು ಕಲ್ಯಾಣಿಯಲ್ಲಿ ಮುಳುಗಿದ. ಮೇಲೆದ್ದು ಎಣಿಸಿ ನೋಡಿದಾಗ ಮುಳುಗುವ ಮುಂಚೆ ಕೈಯ್ಯಲ್ಲಿ ಇದ್ದ ಎರಡು ಪಟ್ಟು ಹೂವುಗಳು ಅವನ ಬಳಿ ಇದ್ದವು. ಅವುಗಳಲ್ಲಿ ಕೆಲವನ್ನು ಮೊದಲು ಕಂಡ ದೇವರಿಗೆ ಮುಡಿಸಿದ. ಉಳಿದ ಹೂವುಗಳನ್ನು ಹಿಡಿದು ಮುಂದೆ ಹೋದಾಗ, ಅಲ್ಲೂ ಒಂದು ಕಲ್ಯಾಣಿ. ಅದರಲ್ಲಿಯೂ ಮುಳುಗಿದಾಗ, ಮತ್ತೆ ಹೂವುಗಳು ದುಪ್ಪಟ್ಟಾದವು. ಮೊದಲು ಸಿಕ್ಕ ದೇವರಿಗೆ ಮುಡಿಸಿದಷ್ಟೇ ಹೂವುಗಳನ್ನು ಈ ದೇವರಿಗೂ ಮುಡಿಸಿ, ಮುಂದೆ ಹೋದಾಗ ಮತ್ತೆ ಕಲ್ಯಾಣಿ ಮತ್ತೆ ದೇವರು. ಅಲ್ಲಿಯೂ ಮುಳುಗಿ ಎದ್ದಾಗ ಮತ್ತೆ ಕೈಯ್ಯಲ್ಲಿದ್ದ ಹೂವುಗಳು ದುಪ್ಪಟ್ಟಾಗಿದ್ದವು. ಆ ಮೂರನೆಯ ದೇವರಿಗೂ ಮೊದಲನೆಯ ಮತ್ತು ಎರಡನೆಯ ದೇವರಿಗೆ ಮುಡಿಸಿದಷ್ಟೇ ಹೂವುಗಳನ್ನು ಮುಡಿಸಿದನು. ಆಗ ಭಕ್ತನ ಕೈಯ್ಯಲ್ಲಿದ್ದ ಹೂವುಗಳು ಖಾಲಿಯಾಗಿದ್ದವು. ಹಾಗಾದರೆ ಭಕ್ತನು ದೇವಾಲಯಕ್ಕೆ ಹೊರಡುವಾಗ ಅವನ ಕೈಯ್ಯಲ್ಲಿ ಇದ್ದ ಹೂವುಗಳೆಷ್ಟು?

ಬಹುಶಃ ನಮ್ಮೆಲ್ಲರ ಬಾಲ್ಯವೂ ಈ ಒಗಟುಗಳಿಲ್ಲದೆ ಇದ್ದಿರಲು ಸಾಧ್ಯವೇ ಇಲ್ಲ. ಟೀವಿ ಬರುವ ಮುಂಚೆ ನಮ್ಮೆಲ್ಲರ ಬಿಡುವಿನ ಸಮಯ ಒಗಟು ಇಲ್ಲವಾದಲ್ಲಿ ಅಂತ್ಯಾಕ್ಷರಿ ಹಾಡುವಲ್ಲಿ ಕಳೆದುಹೋಗುತ್ತಿತ್ತು. ಸಮಯ ಕಳೆಯಲೆಂದು ದೊಡ್ಡವರು ನಮಗೆ ಕೇಳುತ್ತಿದ್ದ ಈ ಒಗಟುಗಳು ರಂಜನೆಯನ್ನು ಮಾತ್ರ ನೀಡದೆ, ತಲೆಗೂ ಕೆಲಸ ಕೊಟ್ಟು ಗಣಿತದ ಪ್ರಪಂಚಕ್ಕೆ ನಮ್ಮನ್ನು ಉಪಾಯವಾಗಿ ಎಳೆದುಕೊಂಡು ಹೋಗಿ ಮೋಜಿನೊಂದಿಗೆ ಲೆಕ್ಕ ಕಲಿಯುವ ಅನಿರೀಕ್ಷಿತ ಅವಕಾಶವನ್ನು ಒದಗಿಸಿಕೊಡುತ್ತಿದ್ದವು. ನಮ್ಮ ಮಕ್ಕಳಿಗೂ ಈ ಒಗಟುಗಳನ್ನು ಕೇಳಿಯೇ ಕೇಳಿರುತ್ತೇವೆ.

ಹಾಗಾಗಿಯೇ ಹೀಗೆ ಒಗಟುಗಳನ್ನು ನೆನಪಿಸುತ್ತಿದ್ದೇನೆ ಎಂದು ನಿಮಗೆ ಅನ್ನಿಸಿರಬೇಕಲ್ಲವೇ? ಅದೂ ಗಣಿತದ ಒಗಟುಗಳು? ಡಿಸೆಂಬರ್ 22 ಅನ್ನು ನಾವು ಭಾರತೀಯರು ರಾಷ್ಟ್ರೀಯ ಗಣಿತ ದಿನವನ್ನಾಗಿ ಆಚರಿಸುತ್ತೇವೆ. ಅಂದು ನಮ್ಮ ದೇಶದವರೇ ಆದ, ಪ್ರಪಂಚ ಕಂಡ ಪ್ರಚಂಡ ಗಣಿತಜ್ಞ, ಶ್ರೀನಿವಾಸ ರಾಮಾನುಜನ್ ಅವರ ಜನ್ಮ ದಿನ.

ಸಾಮಾನ್ಯವಾಗಿ ಗಣಿತವೆಂದರೆ, ನಮಗೆ ವರ್ಜ್ಯ ಎನ್ನುವವರೇ ಹೆಚ್ಚು ಬೇರೆ ವಿಷಯಗಳ ಹಾಗೆ ಗಣಿತವನ್ನು ಪ್ರೀತಿಸುತ್ತಾ ಕಲಿತವರು ತುಂಬಾ ಕಡಿಮೆ. ಗಣಿತವೆಂದರೆ ಕಬ್ಬಿಣದ ಕಡಲೆ ಎನ್ನುವ ಪೂರ್ವಾಗ್ರಹವನ್ನು ಬೆಳೆಸಿಕೊಂಡು, ಅದನ್ನು ದ್ವೇಷಿಸಿದವರೇ ಹೆಚ್ಚು. ಕಾಟಾಚಾರವೆಂಬಂತೆ ಹತ್ತನೆಯ ತರಗತಿಯವರೆಗೂ ಓದಿ, ಮುಂದೆ ಕಲಾ ವಿಭಾಗಕ್ಕೆ ಸೇರಿ ಗಣಿತಕ್ಕೆ ದೊಡ್ಡ ನಮಸ್ಕಾರ ಹಾಕುತ್ತಾರೆ.

ಆದರೆ ಗಣಿತ ನಮ್ಮ ಜೀವನದಲ್ಲಿ ಅದೆಷ್ಟರಮಟ್ಟಿಗೆ ಬೆರೆತು ಹೋಗಿದೆ, ಗಣಿತದೊಂದಿಗೆ ನಮ್ಮದು ಅದೆಂತಹ ಅವಿನಾಭಾವ ಸಂಬಂಧ ಎಂದು ಒಮ್ಮೆ ಅವಲೋಕಿಸಿ ನೋಡಿದರೆ ನಿಮಗೇ ಅಚ್ಚರಿಯೆನಿಸುತ್ತದೆ. ಗಣಿತವನ್ನು ದ್ವೇಷಿಸುತ್ತಲೇ ಅದನ್ನು ಜೀವನದ ಅವಿಭಾಜ್ಯ ಅಂಗವಾಗಿಸಿಕೊಂಡಿದ್ದೇವೆ ಎಂಬುದನ್ನು ಗಮನಿಸಿದರೆ, ನಮ್ಮದು ಗಣಿತದೊಂದಿಗೆ ಒಂದು ತರಹದ Love hate Relationship ಎನ್ನಿಸುತ್ತದೆ. ನಮಗೇ ತಿಳಿಯದೆ ಗಣಿತದ ಬಲೆಯಲ್ಲಿ ಸಿಕ್ಕಿದ್ದೇವೆ!

ನಾನು ಮೇಲೆ ಹೇಳಿದ ಒಗಟುಗಳೇ ಅದಕ್ಕೆ ಸಾಕ್ಷಿ. ಅಂತಹ ಒಗಟುಗಳನ್ನು ಬಿಡಿಸುವುದು ಮೋಜು ಎಂದುಕೊಳ್ಳುತ್ತೇವೆಯೇ ಹೊರತು, ಗಣಿತದ ಕಲಿಕೆಯ ಮೋಜಿನ ವಿಧಾನ ಎಂದು ನಮ್ಮ ಅರಿವಿಗೆ ಬರುವುದೇ ಇಲ್ಲ. ಮಕ್ಕಳು ಕಲಿಕೆಯನ್ನು ಪ್ರಾರಂಭಿಸುವುದೇ ಗಣಿತದ ಸಖ್ಯದಲ್ಲಿ! ನಿನಗೆ ಕೈ ಎಷ್ಟಪ್ಪ, ಕಣ್ಣು ಎಷ್ಟಪ್ಪ, ಕಾಲು ಎಷ್ಟಪ್ಪ ಎಂದು ನಾವು ಮುದ್ದುಗರೆದು ಕೇಳಿದಾಗ, ಮಗು ತನ್ನ ಬಾಲಭಾಷೆಯಲ್ಲಿ ಎರಡು ಎನ್ನುವಾಗಲೇ ಅದಕ್ಕೆ ಗಣಿತ ಅರ್ಥವಾಗಿರುತ್ತದೆ! ನಂತರ ತಟ್ಟೆಯಲ್ಲಿ ಉಣಿಸುವಾಗ, ಎರಡೇ ತುತ್ತು, ಮೂರೇ ತುತ್ತು ಎನ್ನುವಾಗಲೂ ಗಣಿತವೇ! ಹೀಗೆ ಗಣಿತದೊಂದಿಗೆ ಜೀವನದ ಮೊದಲ ಪಾಠಗಳನ್ನು ಕಲಿಯುವ ಕೂಸು, ಆಟಗಳಿಗೆ ತೆರೆದುಕೊಂಡಾಗಲೂ ಗಣಿತವೇ! ಕುಂಟಾಬಿಲ್ಲೆ, ಅಳುಗುಳಿ ಮನೆ, ಕವಡೆಯಾಟ, ಕಲ್ಲಾಟ, ಗೋಲಿಯಂತಹ ಸಾಂಪ್ರದಾಯಿಕ ಆಟಗಳಾಗಿರಬಹುದು, ಕ್ರಿಕೆಟ್, ಟೆನ್ನಿಸ್, ಫುಟ್ಬಾಲ್‌ನಂತಹ ಆಧುನಿಕ ಕ್ರೀಡೆಗಳಾಗಿರಬಹುದು, ಲೆಕ್ಕಾಚಾರವಿಲ್ಲದ ಆಟದಲ್ಲಿ ಮಜಾವುಂಟೇ?

ಆಟಗಳ ಹಂತ ದಾಟಿ ಸಾಮಾಜಿಕ ಜೀವನಕ್ಕೆ ನಾವು ಅಡಿಯಿಟ್ಟಾಗಲೂ ಅಲ್ಲಿಯೂ ಗಣಿತದ ಲೆಕ್ಕಾಚಾರವಿದೆ. ಎಷ್ಟೇ ನಿರಕ್ಷರಕುಕ್ಷಿಯಾದರೂ, ಅವನು ಮಾರಿನ ಮೊಳದ ಲೆಕ್ಕದಲ್ಲಿ ಹೂವನ್ನು ಅಳೆಯಬಲ್ಲ, ಕಣ್ಣಳತೆಯಲ್ಲಿಯೇ ಆಭರಣ ಎಷ್ಟು ತೊಲ ತೂಗುತ್ತದೆಂದು ಲೆಕ್ಕ ಹಾಕುವ ಮಹಿಳಾಮಣಿಗಳಿದ್ದಾರೆ. ಕಣ್ಣಿನ ಅಂದಾಜಿನಲ್ಲಿಯೇ, ಬೊಗಸೆಗಳ ಅಳತೆಯಲ್ಲಿಯೇ, ಅಕ್ಕಿ, ಬೇಳೆ, ಬೆಲ್ಲಗಳನ್ನು ಬಳಸಿ ರುಚಿಕಟ್ಟಾದ ಅಡುಗೆ ತಯಾರಿಸುವವರಿದ್ದಾರೆ. ನಮ್ಮ ಅಮ್ಮಂದಿರು, ಹಿಂದೆಲ್ಲಾ, ನೋಡು ನೀನು ಆರು ಕೊಡ ನೀರು ಸೇದುವಷ್ಟರಲ್ಲಿ ಅನ್ನದ ನೀರು ಹಿಂಗಿರುತ್ತದೆ ಎನ್ನುತ್ತಿದ್ದರಲ್ಲ! ಒಂದೊಂದು ಹಿಡಿ ಉದ್ದು ಅವಲಕ್ಕಿ. ಮೂರು ಹಿಡಿ ಅಕ್ಕಿ, ನಾಲ್ಕು ಚಿಟಿಕೆಯಷ್ಟು ಮೆಂತ್ಯೆ ನೆನೆಸು ಸಾಕು. ದೋಸೆ ಗರಿಗರಿಯಾಗಿ ಆಗುತ್ತದೆ ಎನ್ನುತ್ತಿದ್ದರಲ್ಲಾ! ಬಾಳೆಯ ಗೊನೆಯನ್ನು ನೋಡಿ ಇಂತಿಷ್ಟು ದಿನಗಳಲ್ಲಿಯೇ ಹಣ್ಣಾಗುತ್ತದೆ ಎಂದು ನಿಖರವಾಗಿ ಹೇಳಬಲ್ಲವರಿದ್ದಾರೆ. ಹೆಜ್ಜೆಗಳ ಲೆಕ್ಕದಲ್ಲಿ ಕರಾರುವಕ್ಕಾಗಿ ಸ್ಥಳಗಳ ದೂರ ಅಂದಾಜಿಸುವ ನಿಪುಣರಿದ್ದಾರೆ. ಇಲ್ಲೆಲ್ಲಾ ಕೆಲಸ ಮಾಡಿರುವುದು ಗಣಿತಕ್ಕೆ ಪಕ್ಕಾದ ಸಾಮಾನ್ಯ ಮಾನವನ ಅಸಾಮಾನ್ಯ ಮೆದುಳೇ!

> ❝ ಡಿಸೆಂಬರ್ 22, 'ರಾಷ್ಟ್ರೀಯ ಗಣಿತ ದಿನ! ಸಾಮಾನ್ಯವಾಗಿ ಗಣಿತವೆಂದರೆ, ನಮಗೆ ವರ್ಜ್ಯ ಎನ್ನುವವರೇ ಹೆಚ್ಚು. ಬೇರೆ ವಿಷಯಗಳ ಹಾಗೆ ಗಣಿತವನ್ನು ಪ್ರೀತಿಸುತ್ತಾ ಕಲಿತವರು ತುಂಬಾ ಕಡಿಮೆ. ಗಣಿತವೆಂದರೆ ಕಬ್ಬಿಣದ ಕಡಲೆ ಎನ್ನುವ ಪೂರ್ವಾಗ್ರಹವನ್ನು ಬೆಳೆಸಿಕೊಂಡು, ಅದನ್ನು ದ್ವೇಷಿಸಿದವರೇ ಹೆಚ್ಚು.. ಕಾಟಾಚಾರವೆಂಬಂತೆ ಹತ್ತನೆಯ ತರಗತಿಯವರೆಗೂ ಓದಿ, ಮುಂದೆ ಕಲಾ ವಿಭಾಗಕ್ಕೆ ಸೇರಿ ಗಣಿತಕ್ಕೆ ದೊಡ್ಡ ನಮಸ್ಕಾರ ಹಾಕುತ್ತಾರೆ.

ಇದೆಲ್ಲಾ ನಮ್ಮ ದೈನಂದಿನ ಜೀವನದಲ್ಲಿ ಗಣಿತದ ಅಪ್ರಜ್ಞಾಪೂರ್ವಕ ಮಿಳಿತವಾದರೆ, ಜಗತ್ತಿಗೆ ಗಣಿತದ ಅತ್ಯುಪಯುಕ್ತ 'ಶೂನ್ಯ'ವನ್ನು ನೀಡಿ ಗಣಿತವನ್ನು ಸುಲಭವಾಗಿಸಿದವರು ನಾವು! ಬ್ರಹ್ಮಗುಪ್ತ ಶೂನ್ಯವನ್ನು ಜಗತ್ತಿಗೆ ಪರಿಚಯಿಸದಿದ್ದರೆ ಇಂದು ಹೇಗಿರುತ್ತಿತ್ತೆಂದು ಯೋಚಿಸಲೂ ಕಷ್ಟವಾಗುತ್ತದೆ! ನಮ್ಮ ದೇಶದ ಜಗತ್ಪ್ರಸಿದ್ಧ ದೇವಾಲಯಗಳ ನಿರ್ಮಾಣದಲ್ಲಿ, ಗಣಿತದ ಬಳಕೆಯ ಪಾರಮ್ಯ ಮೆರೆದಿದ್ದಾರೆ ನಮ್ಮ ಶಿಲ್ಪಿಗಳು. ಹಂಪಿಯ ದೇವಾಲಯದಲ್ಲಿ ಗೋಪುರದ ನೆರಳು ತಿರುಗುಮುರುಗಾಗಿ ಬೀಳುವ ತಂತ್ರಜ್ಞಾನದ ಹಿಂದಿನ ಸೂತ್ರ ಗಣಿತವೇ! ಇಂತಹ ಅದ್ಭುತಗಳು ಅದೆಷ್ಟು ನಮ್ಮಲ್ಲಿಲ್ಲ? ಗ್ರಹಗಳ ಚಲನೆಯನ್ನು ವೀಕ್ಷಿಸುವ ಖಗೋಳ ಭವನಗಳು ನಮ್ಮಲ್ಲಿ ಶತಮಾನಗಳ ಹಿಂದೆಯೇ ಇದ್ದವು. ಅಂತಹ ಕಟ್ಟಡಗಳ ನಿರ್ಮಾಣದ ಹಿಂದೆ ಅದೆಂತಹ ಉನ್ನತ ಮಟ್ಟದ ಗಣಿತದ ಲೆಕ್ಕಾಚಾರವಿರಬೇಕು? ಸೂರ್ಯನ ಕಿರಣಗಳು ದೇವಾಲಯದ ಮೂಲವಿಗ್ರಹವನ್ನು ಸ್ಪರ್ಶಿಸುವ ಹಾಗೆ ದೇವಾಲಯಗಳನ್ನು ನಿರ್ಮಿಸಿರುವುದರ ಹಿಂದಿರುವುದು ಗಣಿತದ ಮೆದುಳೇ! ಹೋಮ ಹವನಗಳಂತಹ ಅಪ್ಪಟ ಧಾರ್ಮಿಕ ಕಾರ್ಯಗಳಲ್ಲಿ ನಿರ್ಮಿಸುವ ಹೋಮಕುಂಡದ ನಿರ್ಮಾಣವೂ ಸಹ ಗಣಿತದ ಲೆಕ್ಕಾಚಾರವೇ ಎಂದರೆ ನೀವು ಅಚ್ಚರಿ ಪಡುವಹಾಗಿಲ್ಲ.

ಇದಲ್ಲದೆ, ನಮ್ಮ ಕವಿಗಳೂ ಗಣಿತದಲ್ಲಿ ಹಿಂದೆ ಬಿದ್ದಿಲ್ಲ ಎಂದರೆ ನಂಬುವಿರಾ? ನಂಬಲೇಬೇಕು ನೀವು. ಷಟ್ಪದಿಗಳು, ಕಂದಪದ್ಯಗಳು, ವೃತ್ತಗಳಲ್ಲಿ ಕಾವ್ಯಗಳನ್ನು ರಚಿಸಿರುವ ನಮ್ಮ ರನ್ನ, ಪಂಪ, ಕುಮಾರವ್ಯಾಸ, ಹರಿಹರರಿಗೆ ಗಣಿತದ ಜ್ಞಾನವಿರಲಿಲ್ಲ ಎನ್ನಬಹುದೇ? ಭಾರತೀಯ ಭಾಷೆಗಳಲ್ಲದೆ, ಸಂಸ್ಕೃತದ ಕವಿಗಳೂ ಕಾವ್ಯಗಳನ್ನು ಗಣಿತದ ಲೆಕ್ಕಾಚಾರದಲ್ಲಿಯೇ ಬರೆದಿರುವುದು. ಪ್ರತಿಯೊಂದು ಸ್ವರ ವ್ಯಂಜನಗಳನ್ನು ಬಳಸುವ ಮುನ್ನ, ಅದು ಕಾವ್ಯಾಲಯಕ್ಕೆ ಚ್ಯುತಿ ಬಾರದಂತಿರಬೇಕು ಎಂದು ಅದೆಷ್ಟು ಪ್ರಜ್ಞಾಪೂರ್ವಕವಾಗಿ ಅವರು ಲೆಕ್ಕಾಚಾರ ಹಾಕಿರಬೇಕು? ಕಾವ್ಯಗಣಿತವೇ ಅದು! ಭಾಸ್ಕರಾಚಾರ್ಯನ ಪ್ರಸಿದ್ಧ ಕೃತಿ ಲೀಲಾವತಿಯಲ್ಲಿ ಅವನು ಗಣಿತದ ಸೂತ್ರಗಳನ್ನು ಹೇಳಿರುವುದು ಪದ್ಯಗಳ ಮೂಲಕವೇ ಎನ್ನುವುದು ಸೋಜಿಗದ ವಿಷಯ.

ಅಬ್ಬಾ! ಗಣಿತವಿಲ್ಲದೆಯೇ ನಾವು ಬದುಕುವುದುಂಟೇ? ಹೇಗೆ ಗಣಿತ ನಮ್ಮನ್ನು ಆವರಿಸಿದೆ ಅಲ್ಲವೇ? ಹಾಗಿದ್ದರೇಕೆ ಗಣಿತವೆಂದರೆ ನಮಗೆ ಭಯ? ಅದಕ್ಕೆ ಕಾರಣಗಳು ಸಾಕಷ್ಟಿವೆ. ಹಲವು ಆಯಾಮಗಳಿರುವ ಆ ವಿಷಯವನ್ನು ಇಲ್ಲಿ ಚರ್ಚಿಸುವುದು ಬೇಡ. ಆದರೆ ಗಣಿತವೆಂಬುದು ನಾವು ಭಾರತೀಯರಿಗೆ ಬಹಳ ಹತ್ತಿರದ್ದು ಎನ್ನುವುದು ನಿಜ. ಭಾಷೆಯ ತೊಡಕಿನಿಂದಾಗಿ ಭಾರತೀಯ ಗಣಿತಜ್ಞರ ಕೊಡುಗೆಗಳು ಬೆಳಕಿಗೆ ಬಂದದ್ದು 19 ಮತ್ತು 20ನೆಯ ಶತಮಾನದಲ್ಲಿ. **ಪೈಥಾಗೊರಾಸ್** ಪ್ರಮೇಯವನ್ನು, ಪೈಥಾಗೊರಾಸ್‌ಗಿಂತ ಶತಮಾನಗಳ ಮೊದಲೇ, 8ನೆಯ ಶತಮಾನದಲ್ಲಿ ಜೀವಿಸಿದ್ದ ಭಾರತೀಯ ಗಣಿತಜ್ಞ ಬೌಧಾಯನ ತ್ರಿಕೋಣಗಳ ಸೂತ್ರಗಳನ್ನು ನಿರೂಪಿಸಿದ್ದನಾದ್ದರಿಂದ, 'ಬೌಧಾಯನ ಶುಲ್ವ ಪ್ರಮೇಯ' ಎಂಬ ಹೆಸರಿನಿಂದ ಆಗಲೇ ಅದು ಪ್ರಚಲಿತದಲ್ಲಿತ್ತು. **ಕೋಪರ್ನಿಕಸ್** ಮತ್ತು **ಕೆಪ್ಲರ್**‌ಗಿಂತ ನೂರಾರು ವರ್ಷಗಳ ಮುಂಚೆಯೇ ನಮ್ಮ **ಆರ್ಯಭಟ, ಭಾಸ್ಕರ, ನೀಲಕಂಠ ಸೋಮಯಾಜಿ** ಮೊದಲಾದವರು ನಿರೂಪಿಸಿದ ಗ್ರಹ ಗಣಿತ ಮತ್ತು ಸೌರ ಸಿದ್ಧಾಂತಗಳು ಕರಾರುವಾಕ್ ಆಗಿಯೇ ಇದ್ದವು. ಪೈ ಬೆಲೆಯ ನಿಗದಿಗೆ ಭಾರತೀಯ ಶಾಸ್ತ್ರಜ್ಞರು ನೀಡಿರುವ ನಿಖರ ಬೆಲೆ, ಕಾಲ್ಕ್ಯುಲಸ್, ನ್ಯೂಟನ್ ಗೌಸ್ ಇಂಟರ್ಪೋಲೇಷನ್ ಮತ್ತು ನ್ಯೂಟನ್ ಸ್ಟರ್ಲಿಂಗ್ ಇಂಟರ್ಪೋಲೇಷನ್ ಇತ್ಯಾದಿ ಕಠಿಣತಮ ಲೆಕ್ಕಾಚಾರಗಳನ್ನು, **ಬ್ರಹ್ಮಗುಪ್ತನ ಉತ್ತರಖಂಡಕಾವ್ಯಕ, ಗೋವಿಂದ ಸ್ವಾಮಿಯ ಸೂತ್ರಗಳು, ಮಾಧವನ ಸೂತ್ರಗಳು, ಕೇರಳದ ಗಣಿತಜ್ಞರ ಯುಕ್ತಿಭಾಷಾ, ಕರಣ ಪದ್ಧತಿಗಳಲ್ಲಿ ಪ್ರಸ್ತಾಪಿತವಾಗಿರುವ ಸೈನ್ ಮತ್ತು ಕೋಸೈನ್ ಶ್ರೇಣಿಗಳು ನೀಲಕಂಠನ ಗುಣೋತ್ತರ ಶ್ರೇಣಿಗಳಲ್ಲಿ ಕಾಣಬಹುದು.** ಹೀಗೆ ಭಾರತೀಯ ಗಣಿತಜ್ಞರ ಸಾಧನೆ ಉನ್ನತ ಮಟ್ಟದ್ದಾಗಿತ್ತು.

2012ರಿಂದ ಶ್ರೀನಿವಾಸ ರಾಮಾನುಜನ್ ಅವರ ಹುಟ್ಟಿದ ದಿನವನ್ನು ರಾಷ್ಟ್ರೀಯ ಗಣಿತ ದಿನವನ್ನಾಗಿ ಆಚರಿಸಬೇಕೆಂದು ನಿರ್ಧರಿಸಲಾಯಿತು. ಅದೇ ವರ್ಷ ರಾಮಾನುಜನ್ ಅವರ 125ನೇ ಜನ್ಮದಿನವಾದ್ದರಿಂದ, 2012ಅನ್ನು ಭಾರತ 'ರಾಷ್ಟ್ರೀಯ ಗಣಿತ ವರ್ಷ' ಎಂದು ಘೋಷಿಸಲಾಗಿತ್ತು. 1887ರಲ್ಲಿ ತಮಿಳುನಾಡಿನ ಈರೋಡಿನಲ್ಲಿ ಜನಿಸಿದ ಶ್ರೀನಿವಾಸ ರಾಮಾನುಜನ್, ಗಣಿತದಲ್ಲಿ ಶಾಸ್ತ್ರೀಯ ಶಿಕ್ಷಣವನ್ನು ಪಡೆದವರಲ್ಲ. ಕುಂಭಕೋಣಮ್‌ನಲ್ಲಿ ಶಿಕ್ಷಣ ಆರಂಭಿಸಿದ ರಾಮಾನುಜನ್, ಕೇವಲ 11ರ ಬಾಲಕನಾಗಿದ್ದಾಗಲೇ ಕಾಲೇಜಿನಲ್ಲಿ ಓದುತ್ತಿದ್ದ ಅವರ ಸಂಬಂಧಿಕ ಹುಡುಗರ ಪಠ್ಯದಲ್ಲಿದ್ದ ಗಣಿತದ ಸಮಸ್ಯೆಗಳನ್ನು ಬಿಡಿಸಿ ತಾವೊಬ್ಬ ಮೇಧಾವಿಯೆಂಬುದನ್ನು ಸಾಬೀತುಪಡಿಸಿದ್ದರು. ನಂತರದ ದಿನಗಳಲ್ಲಿ ಗಣಿತದೆಡೆಗಿನ ತಮ್ಮ ಅತೀವ ಆಸಕ್ತಿಯಿಂದಾಗಿ ಸ್ವಯಂ ಅಧ್ಯಯನ ಕೈಗೊಂಡು ತಮ್ಮದೇ ಆದ ಸೂತ್ರಗಳನ್ನು ಸಿದ್ಧಪಡಿಸಿದರು. ಮದ್ರಾಸ್ ವಿಶ್ವವಿದ್ಯಾಲಯಕ್ಕೆ ಸೇರಿದ ಮೇಲೆ, ಗಣಿತದ ವಲಯದಲ್ಲಿ ಪ್ರಸಿದ್ಧರಾದರು. ಬ್ರಿಟನ್‌ನ ಗಣಿತಜ್ಞರಾದ ಎಂ.ಜೆ.ಎಮ್.ಹಿಲ್ ಅವರೊಂದಿಗೆ ಪತ್ರಮುಖೇನ ಗಣಿತದ ತಮ್ಮ ಸೂತ್ರಗಳನ್ನು ಕಳುಹಿಸಿ ಅವರಿಂದ ಸಲಹೆ ಪಡೆಯುತ್ತಿದ್ದರು. ರಾಮಾನುಜನ್ ಅವರ ಅಸಾಧ್ಯ ಪ್ರತಿಭೆಯನ್ನು ಗುರುತಿಸಿದ ಹಿಲ್ ಅವರು ರಾಮಾನುಜನ್ ಅವರನ್ನು 1914ರಲ್ಲಿ ಲಂಡನ್‌ಗೆ ಕರೆಯಿಸಿಕೊಂಡರು. ಅಲ್ಲಿ ಅವರು ನಿರೂಪಿಸಿದ ಸೂತ್ರಗಳು, ಬಿಡಿಸಿದ ಗಣಿತದ ಸಮಸ್ಯೆಗಳ ಅಧ್ಯಯನವನ್ನೇ ಮಾಡಲಾಯಿತು. 5 ವರ್ಷಗಳನ್ನು ಲಂಡನ್‌ನಲ್ಲಿ ಕಳೆದ ರಾಮಾನುಜನ್ 1916ರಲ್ಲಿ Bachelor of Arts by Research ಪದವಿಯನ್ನು ಪಡೆದರು. ಕೇಂಬ್ರಿಜ್‌ನ ಮೊದಲ ಚುನಾಯಿತ Fellow of Trinity ಆದರು. ಅವರ ಆರೋಗ್ಯ ತೀವ್ರವಾಗಿ ಹದಗೆಟ್ಟಿದ್ದರಿಂದ, ಭಾರತಕ್ಕೆ ಹಿಂತಿರುಗಿದರು. ಕ್ಷಯರೋಗಕ್ಕೆ ತುತ್ತಾದ ಅವರು, ವಿಟಮಿನ್‌ಗಳ ಕೊರತೆಯಿಂದಾಗಿ ಹಾಸಿಗೆ ಹಿಡಿದರು. 1920 ಏಪ್ರಿಲ್ 26ರಂದು ಕೇವಲ 32 ವಯಸ್ಸಿನವರಾಗಿದ್ದಾಗ ರಾಮಾನುಜನ್ ದೈವಾಧೀನರಾದರು. ಅವರು ಬಿಟ್ಟು ಹೋದ ಗಣಿತದ ನೋಟ್ಸ್‌ಗಳ ಅಧ್ಯಯನ ಇನ್ನೂ ನಡೆಯುತ್ತಿದೆ ಮತ್ತು ಹೊಸ ಹೊಸ ವಿಷಯಗಳ ಆಗರವಾಗಿದೆ. ಅವಿಭಾಜ್ಯ ಸಂಖ್ಯೆಗಳು, ಪಾರ್ಟಿಷನ್ ಸಂಖ್ಯೆಗಳ ಬಗ್ಗೆ ಸಾಕಷ್ಟು ಅಧ್ಯಯನ ನಡೆಸಿದ್ದ ರಾಮಾನುಜನ್‌ರ ಅಕಾಲಿಕ ಮರಣದಿಂದ ಗಣಿತ ಲೋಕ ನಿಜವಾಗಿ ನಷ್ಟವನ್ನು ಅನುಭವಿಸಿತು.

ಇಂತಹ ಮೇಧಾವಿ ನಾಡಿನಲ್ಲಿ ಹುಟ್ಟಿರುವ ನಾವೆಲ್ಲರೂ ಗಣಿತದ ಬಗ್ಗೆ ಇರುವ ಅಸಹಜ ಭಯವನ್ನು ಹೋಗಲಾಡಿಸಿಕೊಂಡು ಗಣಿತದ ಕಲಿಕೆಯನ್ನು ಆನಂದಿಸುವಂತಾಗಬೇಕು. ಇದೇ 2023ರ ಗಣಿತ ದಿನದ ಘೋಷವಾಕ್ಯ ಕೂಡ, ಎಲ್ಲರಿಗಾಗಿ ಗಣಿತ.

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿಗೆ 77ನೇ ಹುಟ್ಟುಹಬ್ಬ: ಪ್ರಧಾನಿ ನರೇಂದ್ರ ಮೋದಿ ಸೇರಿ ಗಣ್ಯರಿಂದ ಶುಭಾಶಯ




ನವದೆಹಲಿ: ಪ್ರಧಾನಿ ನರೇಂದ್ರ ಮೋದಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹಲವರು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರ 77ನೇ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರಿದ್ದಾರೆ. ಶ್ರೀಮತಿ ಸೋನಿಯಾ ಗಾಂಧಿ ಜಿ ಅವರಿಗೆ ಅವರ ಜನ್ಮದಿನದ ಶುಭಾಶಯಗಳು. ಅವರಿಗೆ ದೀರ್ಘ ಮತ್ತು ಆರೋಗ್ಯಕರ ಜೀವನ ದೊರಕಲಿ ಎಂದು ಪ್ರಧಾನಿ ಮೋದಿ ಶನಿವಾರ ಟ್ವೀಟ್ ಮಾಡಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟ್ವೀಟ್ ಮಾಡಿದ್ದು, ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಜಿ ಅವರಿಗೆ ಅವರ ಜನ್ಮದಿನದ ಶುಭಾಶಯಗಳು. ತುಳಿತಕ್ಕೊಳಗಾದ ವ್ಯಕ್ತಿಗಳ ಹಕ್ಕುಗಳಿಗಾಗಿ ಪಟ್ಟುಬಿಡದ ವಕೀಲರಂತೆ ಸೋನಿಯಾ ಗಾಂಧಿ ಹೋರಾಡಿದರು. ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಅವರು ಧೈರ್ಯ ಮತ್ತು ನಿಸ್ವಾರ್ಥ ತ್ಯಾಗವು ಎಲ್ಲರಿಗೂ ಸ್ಫೂರ್ತಿಯಾಗಿದೆ. ದೀರ್ಘ ಮತ್ತು ಆರೋಗ್ಯಕರ ಜೀವನ ಅವರದ್ದಾಗಲಿ ಎಂದು ನಾನು ಅವರಿಗೆ ಶುಭ ಹಾರೈಸುತ್ತೇನೆ ಎಂದಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆಸಿ ವೇಣುಗೋಪಾಲ್ ಕೂಡ ಸೋನಿಯಾ ಗಾಂಧಿಯವರಿಗೆ ಜನ್ಮದಿನದ ಶುಭಾಶಯಗಳನ್ನು ಕೋರಿದ್ದಾರೆ. ಸಿಪಿಪಿ ಅಧ್ಯಕ್ಷೆ ಸೋನಿಯಾ ಗಾಂಧಿ ಜಿ ಅವರಿಗೆ ಅವರ ಜನ್ಮದಿನದ ಶುಭಾಶಯಗಳು! ಸಾರ್ವಜನಿಕ ಸೇವೆಗೆ, ಸಮಾಜದ ಬಡ ಮತ್ತು ಅಂಚಿನಲ್ಲಿರುವ ವರ್ಗಗಳ ಉನ್ನತಿಗೆ ಅವರ ಬದ್ಧತೆಯು ಶತಕೋಟಿ ಹೃದಯಗಳನ್ನು ಗೆದ್ದಿದೆ ಎಂದು ವೇಣುಗೋಪಾಲ್ ಟ್ವೀಟ್ ಮಾಡಿದ್ದಾರೆ. ತಮ್ಮ ರಾಜಕೀಯ ಪ್ರಯಾಣದಲ್ಲಿ, ಅವರ ಜೀವನ ಪಯಣ ನಮಗೆಲ್ಲರಿಗೂ ಸ್ಫೂರ್ತಿಯಾಗಿದೆ. ಅವರು ಕಾಂಗ್ರೆಸ್ ಅನ್ನು ಅತ್ಯಂತ ಸವಾಲಿನ ಅವಧಿಯಲ್ಲಿ ಅತ್ಯಂತ ಸಮಚಿತ್ತದಿಂದ ಮುನ್ನಡೆಸಿದರು ಮತ್ತು ಯುಪಿಎ ಸರ್ಕಾರದ ವಾಸ್ತುಶಿಲ್ಪಿಯಾಗಿದ್ದರು ಮತ್ತು ದೇಶದ ಎಲ್ಲರಿಗೂ ಕಲ್ಯಾಣ ಮತ್ತು ಉತ್ತಮ ಬೆಳವಣಿಗೆಯನ್ನು ತಲುಪಿಸಿದರು ಎಂದಿದ್ದಾರೆ.

ತಮಿಳುನಾಡು ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಟ್ವೀಟ್ ಮಾಡಿದ್ದು, ಕಾಂಗ್ರೆಸ್ ನಾಯಕಿ ಮೇಡಂ ಸೋನಿಯಾ ಗಾಂಧಿ ಅವರಿಗೆ ಜನ್ಮದಿನದ ಶುಭಾಶಯಗಳು. ಅವರು ಸಮರ್ಪಿತ ಸಾರ್ವಜನಿಕ ಜೀವನಕ್ಕೆ ಮಾದರಿ. ಅವರು ಉತ್ತಮ ಆರೋಗ್ಯದಿಂದ ತುಂಬಿದ ದೀರ್ಘಾಯುಷ್ಯವನ್ನು ಪಡೆಯಲಿ ಎಂದು ಬಯಸುತ್ತೇನೆ. ಭಾರತವನ್ನು ನಿರಂಕುಶ ಶಕ್ತಿಗಳಿಂದ ರಕ್ಷಿಸುವ ನಮ್ಮ ಒಗ್ಗಟ್ಟಿನ ಪ್ರಯತ್ನದಲ್ಲಿ ಅವರ ಆಳವಾದ ದೃಷ್ಟಿ ಮತ್ತು ಅನುಭವದ ಸಂಪತ್ತು ಮಾರ್ಗದರ್ಶಿ ದೀಪವಾಗಿ ಮುಂದುವರಿಯಲಿ ಹೇಳಿದ್ದಾರೆ.

ರಾಜ್ಯದಲ್ಲಿ ಬಿಜೆಪಿ 28 ಸ್ಥಾನ ಗೆದ್ದರೆ ಅದರ ಕ್ರೆಡಿಟ್ ಮೋದಿಗೆ ಮಾತ್ರ



ಹಾಸನ: ಬಿಜೆಪಿಯ ಫೈರ್ ಬ್ರಾಂಡ್ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಶನಿವಾರ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಅವರ ಪುತ್ರ, ರಾಜ್ಯ ಬಿಜೆಪಿ ಅಧ್ಯಕ್ಷ ಬಿವೈ ವಿಜಯೇಂದ್ರ ಅವರ ವಿರುದ್ಧ ಮತ್ತೆ ಗುಡುಗಿದ್ದಾರೆ.

ಇಂದು ದಕ್ಷಿಣ ಕನ್ನಡ ಜಿಲ್ಲೆಯ ಕಲ್ಲಡ್ಕಕ್ಕೆ ತೆರಳುವ ಮಾರ್ಗ ಮಧ್ಯ ಸುದ್ದಿಗಾರರೊಂದಿಗೆ ಮಾತನಾಡಿದ ಯತ್ನಾಳ್, 2024 ರ ಸಂಸತ್ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಎಲ್ಲಾ 28 ಸ್ಥಾನಗಳನ್ನು ಗೆದ್ದರೆ ಅದರ ಕ್ರೆಡಿಟ್ ಪ್ರಧಾನಿ ನರೇಂದ್ರ ಮೋದಿಗೆ ಮಾತ್ರ ಸಲ್ಲುತ್ತದೆ. ಇತರ ಯಾವುದೇ ನಾಯಕರಿಗೆ ಅಲ್ಲ ಎಂದರು.

ಹಿಂದೂ ಧರ್ಮ ಮತ್ತು ದೇಶದ ಹಿತ ದೃಷ್ಟಿಯಿಂದ ಮೋದಿ ಮೂರನೇ ಬಾರಿಗೆ ಪ್ರಧಾನಿಯಾಗಬೇಕು ಎಂಬ ಕಾರಣಕ್ಕೆ ಯಾವುದೇ ನಾಯಕರು ಬಿಜೆಪಿ ತೊರೆಯುವುದಿಲ್ಲ ಎಂದು ಯತ್ನಾಳ್ ಹೇಳಿದರು.

ಬಿಜೆಪಿ ಗೆಲುವಿಗೆ ಜೋಡೆತ್ತು ಕೆಲಸ ಮಾಡುತ್ತಾರೆ ಎಂಬ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಬಿಜೆಪಿ ಅಧ್ಯಕ್ಷ ಬಿವೈ ವಿಜಯೇಂದ್ರ ಅವರ ಹೇಳಿಕೆಯನ್ನು ಲೇವಡಿ ಮಾಡಿದ ಯತ್ನಾಳ್, ಜೋಡೆತ್ತುಗಳಲ್ಲಿ ಒಬ್ಬರು ದೆಹಲಿಯಲ್ಲಿ ಮತ್ತು ಇನ್ನೊಬ್ಬರು ಬೆಂಗಳೂರಿನಲ್ಲಿದ್ದಾರೆ ಎಂದರು.

ಇದೇ ವೇಳೆ ಮಾಜಿ ಸಚಿವ ವಿ. ಸೋಮಣ್ಣ ರಾಜೀನಾಮೆ ನೀಡುವುದಿಲ್ಲ. ಇತ್ತೀಚಿನ ವಿಧಾನಸಭಾ ಚುನಾವಣೆಯಲ್ಲಿ ವರುಣಾ ಮತ್ತು ಚಾಮರಾಜನಗರ ಕ್ಷೇತ್ರಗಳಲ್ಲಿ ಸೋಲಿಗೆ ಕಾರಣ ಎಲ್ಲರಿಗೂ ತಿಳಿದಿದೆ. ದುರದೃಷ್ಟವಶಾತ್ ಬಿಜೆಪಿಯಲ್ಲಿರುವ ಕೆಲವು ನಾಯಕರು ಅವರನ್ನು ರಾಜ್ಯದಲ್ಲಿ ಮಹಾನ್ ನಾಯಕರೆಂದು ಬಿಂಬಿಸುತ್ತಿದ್ದಾರೆ ಎಂದು ಪರೋಕ್ಷವಾಗಿ ವಿಜಯೇಂದ್ರ ವಿರುದ್ಧ ವಾಗ್ದಾಳಿ ನಡೆಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕಾರೇಕುರ ಬಳಿ ವ್ಯಕ್ತಿಯ ಬರ್ಬರ ಹತ್ಯೆ

ಶ್ರೀರಂಗಪಟ್ಟಣ,ಡಿ.9–ತಾಲೂಕಿನ ಕಾರೇಕುರ ಗ್ರಾಮದಲ್ಲಿ ಶುಕ್ರವಾರ ಮಧ್ಯರಾತ್ರಿ ವ್ಯಕ್ತಿಯೊಬ್ಬನನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದೆ.

ಮೂಲತಃ ಊಟಿಯವನಾಗಿದ್ದು, ಕೆಲ ವರ್ಷಗಳಿಂದ ಕಾರೇಕುರದಲ್ಲಿ ಕುಟುಂಬ ಸಮೇತ ನೆಲೆಸಿದ್ದ ಯೋಗೇಶ್ (34), ಹತ್ಯೆಗೀಡಾದವನಾಗಿದ್ದು, ದುಷ್ಕರ್ಮಿಗಳು ಈತನ ತಲೆ ಮೇಲೆ ಯಾವುದೋ ಆಯುಧದಿಂದ ಹೊಡೆದು, ಕೊಂದು ಹಾಕಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಯಾರು ಈ ಯೋಗೇಶ್?: ಮೂಲತಃ ಊಟಿಯವನಾದ ಯೋಗೇಶ್, ಕೆಲ ವರ್ಷದ ಹಿಂದೆ ಕಾರೇಕುರ ಗ್ರಾಮದ ಎಸ್ಟೇಟ್‌ವೊಂದರಲ್ಲಿ ಕೆಲಸಕ್ಕೆಂದು ಬಂದವನು. ಕೆಲ ಸಮಯ ಎಸ್ಟೇಟ್‌ನಲ್ಲಿ ಕೆಲಸ ಮಾಡಿದ ಈತ, ನಂತರ ಎಸ್ಟೇಟ್‌ನವರು ಕೊಟ್ಟಿದ್ದ ಮನೆಯನ್ನು ತೆರವುಗೊಳಿಸಿ ತಾನೇ ಬಾಡಿಗೆ ಮನೆಯೊಂದನ್ನು ಮಾಡಿಕೊಂಡು ಕುಟುಂಬ ಸಮೇತ ವಾಸವಿದ್ದ. ಕೆಲ ದಿನಗಳ ಕಾಲ ಗ್ರಾಮದಲ್ಲಿ ಕೋಳಿ ಅಂಗಡಿಯನ್ನು ನಡೆಸಿದ್ದ ಈತ ನಂತರ ಅದನ್ನು ಮುಚ್ಚಿಹಾಕಿದ್ದ.

ಯಾವುದೇ ಸ್ಥಿರ ಉದ್ಯೋಗವಿಲ್ಲದ ಯೋಗೇಶ, ಬಾರ್ ಬೆಂಡಿಂಗ್, ಗಾರೆ ಕೆಲಸ ಹಾಗೂ ಪೇಂಟರ್ ಹೀಗೆ ಸಿಕ್ಕ ಸಿಕ್ಕ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದ. ಈತ ಯಾವ ಕೆಲಸ ಮಾಡುತ್ತಾನೆ ಎಂಬುದು ನಿಖರವಾಗಿ ಗ್ರಾಮದಲ್ಲಿ ಯಾರಿಗೂ ಗೊತ್ತಿಲ್ಲ. ಗಾಂಜಾ ಮಾರಾಟ ದಂಧೆಯಲ್ಲೂ ಈತ ಸಕ್ರಿಯನಾಗಿದ್ದ. ಕಳೆದ ಜೂನ್ 1ರಂದು ಮೈಸೂರಿನ ಮೇಟಗಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಗೊಳಪಟ್ಟ ಕಾವೇರಿನಗರಕ್ಕೆ ಹೊಂದಿಕೊಂಡಂತಿರುವ ರಿಂಗ್ ರಸ್ತೆಯಲ್ಲಿ ಗಾಂಜಾ



ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾಗ ನಾಗನಹಳ್ಳಿಯ ಸಚಿನ್ ಕುಮಾರ್, ಬಿಎಂಶ್ರೀ ನಗರದ ಗಣೇಶ್ ಅಲಿಯಾಸ್ ಗಣಪತಿ ಅವರೊಂದಿಗೆ ಯೋಗೇಶ ಮೈಸೂರಿನ ಪೊಲೀಸರಿಗೆ 900 ಗ್ರಾಂ ಗಾಂಜಾ ಸಮೇತ ಸಿಕ್ಕಿಬಿದ್ದು ಜೈಲು ಪಾಲಾಗಿ ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆಯಾಗಿದ್ದ ಈತ, ಮತ್ತೆ ಗಾಂಜಾ ಮಾರಾಟ ದಂಧೆಯಲ್ಲಿ ತೊಡಗಿಸಿಕೊಂಡಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಶುಕ್ರವಾರ ಮಧ್ಯರಾತ್ರಿ ಗ್ರಾಮಕ್ಕೆ ಆಗಮಿಸಿದಾಗ ಹತ್ಯೆಗೀಡಾಗಿದ್ದಾನೆ. ಈತನನ್ನು ಪರಿಚಿತರೇ ಹತ್ಯೆಗೈದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಗಾಂಜಾ ಮಾರಾಟ ದಂಧೆಕೋರರೊಂದಿಗೆ ಸಂಪರ್ಕದಲ್ಲಿದ್ದ ಈತನನ್ನು ಅವರೇ ಹತ್ಯೆ ಮಾಡಿರಬಹುದು ಎಂಬ ನಿಟ್ಟಿನಲ್ಲಿ ಕೂಡ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಘಟನಾ ಸ್ಥಳಕ್ಕೆ ಮಂಡ್ಯ ಜಿಲ್ಲಾ ಎಸ್ಪಿ ಎನ್.ಯತೀಶ್, ಅಡಿಷನಲ್ ಎಸ್ಪಿ ತಿಮ್ಮಯ್ಯ, ಶ್ರೀರಂಗಪಟ್ಟಣ ಡಿವೈಎಸ್ಪಿ ಮುರಳಿ, ಶ್ರೀರಂಗಪಟ್ಟಣ ಟೌನ್ ಠಾಣೆಯ ಇನ್ಸ್‌ಪೆಕ್ಟರ್ ಪ್ರಕಾಶ್ ಹಾಗೂ ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಶ್ರೀರಂಗಪಟ್ಟಣ ಟೌನ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದೆ.

ಸಲೂನ್ ಅಂಗಡಿ ಮಾಲೀಕನ ಮೇಲೆ ಹಲ್ಲೆ; 15 ದಿನದ ನಂತರ ಪ್ರಕರಣ ದಾಖಲು

ಮೈಸೂರು, ಡಿ.9–ಸುಮಾರು 15 ದಿನದ ಹಿಂದೆ ಮೈಸೂರಿನ ಹೆಬ್ಬಾಳ್ ಅಭಿಷೇಕ್ ವೃತ್ತದ ಬಳಿ ಸಲೂನ್ ಅಂಗಡಿ ಮಾಲೀಕನ ಮೇಲೆ ಯುವಕ ನೋರ್ವ ವಿನಾಕಾರಣ ಹಲ್ಲೆ ಮಾಡಿದ ಘಟನೆ ಬಗ್ಗೆ ಹೆಬ್ಬಾಳ್ ಠಾಣೆಯಲ್ಲಿ ಡಿ.8ರಂದು ಪ್ರಕರಣ ದಾಖಲಾಗಿದೆ.

ಕ್ರೈಂ ಬಾಕ್ಸ್

ಅಭಿಷೇಕ್ ವೃತ್ತದ ಬಳಿ ಗೋಲ್ಡ್ ವಿನ್ ಮೆನ್ಸ್ ಪಾರ್ಲರ್ ಸಲೂನ್ ನಡೆಸುತ್ತಿರುವ ಎಂ.ರಾಜು ಹಲ್ಲೆಗೊಳಗಾದವರಾಗಿದ್ದು, ಮಂಚೇಗೌಡಕೊಪ್ಪಲಿನ ರವಿ ಎಂಬುವರ ಮಗ ರಾಜು ಅಲಿಯಾಸ್ ವಾಸು ಇವರ ಮೇಲೆ ವಿನಾ ಕಾರಣ ಹಲ್ಲೆ ನಡೆಸಿದ್ದಾನೆ. ನ.25ರಂದು ಮಧ್ಯಾಹ್ನ ಅಭಿಷೇಕ್ ವೃತ್ತದ ಬಳಿ ಜೂಸ್ ಸೆಂಟರ್‌ಗೆ ಹೋಗಿ ಜೂಸ್ ಕುಡಿದು ಸಲೂನ್‌ಗೆ ಹಿಂತಿರುಗುತ್ತಿದ್ದ ಎಂ.ರಾಜು ಅವರನ್ನು ಏಕಾಏಕಿ ಅಡ್ಡಗಟ್ಟಿದ ರಾಜು ಅಲಿಯಾಸ್ ವಾಸು, 'ನನ್ನನ್ನು ನೋಡಿಯೂ ಹಾಗೇ ಹೋಗುತ್ತಿದ್ದೀಯಾ' ಎಂದು ವಿನಾಕಾರಣ ತಗಾದೆ ತೆಗೆದು ಅವಾಚ್ಯ ಶಬ್ದಗಳಿಂದ ಬಯ್ಯುತ್ತಾ, ಹಲ್ಲೆಗೈದಿದ್ದಾನೆ. ನೀನು ನನಗೆ ಗೌರವ ಕೊಡದೇ ಹೋದರೆ ನಿನ್ನನ್ನು ಸುಮ್ಮನೇ ಬಿಡುವುದಿಲ್ಲ. ನಾನು ಯಾರು ಎಂದು ನಿನಗೆ ತೋರಿಸಬೇಕಾಗುತ್ತದೆ ಎಂದು ಧಮ್ಕಿ ಹಾಕಿದ್ದಾನೆ. ಈ ವೇಳೆ ಅಕ್ಕ–ಪಕ್ಕದ ಅಂಗಡಿಯವರು ಎಂ.ರಾಜು ಅವರನ್ನು ರಕ್ಷಿಸಿದ್ದಾರೆ.

ಈ ಹಲ್ಲೆ ಸಂಬಂಧ ನ.26ರ 'ಮೈಸೂರು ಮಿತ್ರ' ಸಂಚಿಕೆಯ 'ಓದುಗರ ಪತ್ರ' ವಿಭಾಗದಲ್ಲಿ ಪ್ರಕಟವಾಗಿತ್ತು. ವಿಚಿತ್ರವೆಂದರೆ ಹೆಬ್ಬಾಳ್ ಠಾಣೆ ಪೊಲೀಸರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿಯೇ ಇರಲಿಲ್ಲ. ತಮ್ಮ ಠಾಣಾ ವ್ಯಾಪ್ತಿಯಲ್ಲಿ ಇಂತಹ ಗೂಂಡಾ ಪ್ರವೃತ್ತಿ ನಡೆದಿರುವುದು ಗಮನಕ್ಕೆ ಬಂದ ತಕ್ಷಣವೇ ಪೊಲೀಸರು ಕಾರ್ಯೋನ್ಮುಖರಾಗಬೇಕಾಗುತ್ತದೆ. ಒಂದು ವೇಳೆ ಸಂಬಂಧಪಟ್ಟವರು ಹಲ್ಲೆಕೋರನ ಮೇಲಿನ ಭಯದಿಂದ ದೂರು ಸಲ್ಲಿಸದೇ ಇದ್ದರೂ ಪೊಲೀಸರು ಸ್ವಯಂ ಪ್ರಕರಣ ದಾಖಲಿಸಿಕೊಂಡು, ಸಾರ್ವಜನಿಕವಾಗಿ ವಿನಾಕಾರಣ ಗೂಂಡಾಗಿರಿ ನಡೆಸಿದ ವ್ಯಕ್ತಿಯನ್ನು ವಿಚಾರಣೆಗೊಳಪಡಿಸಿ ಆತನ ಪೂರ್ವಾಪರ ಏನೆಂಬುದರ ಬಗ್ಗೆ ಮಾಹಿತಿ ಕಲೆ ಹಾಕಿ ಮುಂದೆ ಇಂತಹ ಕೃತ್ಯ ನಡೆಯದಂತೆ ಜಾಗ್ರತೆ ವಹಿಸುವ ಮೂಲಕ ಸಾರ್ವಜನಿಕರಿಗೆ ಅಭಯ ನೀಡಬೇಕಾಗುತ್ತದೆ. ವಿಚಿತ್ರವೆಂದರೆ ಹೆಬ್ಬಾಳ್ ಠಾಣೆ ಪೊಲೀಸರು ಈ ಪ್ರಕರಣದ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ ಎಂದೆನಿಸುತ್ತದೆ. ಅಥವಾ ಈ ಠಾಣೆಯ ಗುಪ್ತಚರ ವಿಭಾಗದ ಸಿಬ್ಬಂದಿ ಕರ್ತವ್ಯಲೋಪ ಎಸಗಿರಬಹುದು. ಇಲ್ಲವೇ ಠಾಣಾಧಿಕಾರಿಗಳು ಈ ಪ್ರಕರಣವನ್ನು ಲಘುವಾಗಿ ಪರಿಗಣಿಸಿರಬಹುದು ಎಂದು ಸಾರ್ವಜನಿಕರು ದೂರಿದ್ದಾರೆ.

ಅಂತೂ–ಇಂತೂ ಘಟನೆ ನಡೆದು 15 ದಿನದ ನಂತರ ಅಂದರೆ ಡಿ.8ರಂದು ಬೆಳಗ್ಗೆ 11 ಗಂಟೆ ಸಮಯದಲ್ಲಿ ಹಲ್ಲೆಗೊಳಗಾದ ಎಂ.ರಾಜು ಪೊಲೀಸ್ ಠಾಣೆಗೆ ತೆರಳಿ ದೂರು ಸಲ್ಲಿಸಿದ್ದಾರೆ. ತಾವು ಸ್ವಂತ ಕೆಲಸದ ಮೇಲೆ ಹೊರ ಊರಿಗೆ ಹೋಗಿದ್ದರಿಂದ ದೂರು ನೀಡಲು ವಿಳಂಬವಾಗಿದೆ ಎಂಬ ಕಾರಣವನ್ನು ಎಂ.ರಾಜು ಉಲ್ಲೇಖಿಸಿದ್ದಾರೆ. ಸ್ವಂತವಾಗಿ ಸಲೂನ್ ನಡೆಸುತ್ತಿರುವ ವ್ಯಕ್ತಿ ತನ್ನ ಮೇಲೆ ಹಲ್ಲೆ ನಡೆದ ನಂತರ ಸುದೀರ್ಘ 15 ದಿನಗಳ ಕಾಲ ಹೊರ ಊರಿಗೆ ಹೋಗಿದ್ದಾನೆ ಅಂದರೆ ಹಲ್ಲೆಯಿಂದ ಭಯಭೀತನಾಗಿಯೇ ಹೊರ ಊರಿಗೆ ಹೋಗಿದ್ದನೇ ಎಂಬುದರ ಬಗ್ಗೆಯೂ ಕೂಡ ಹೆಬ್ಬಾಳ್ ಠಾಣೆ ಪೊಲೀಸರು ಗಮನ ಹರಿಸಬೇಕು ಎಂದು ಮೈಸೂರಿನ ಕಳಕಳಿಯುಳ್ಳ ನಾಗರಿಕರು ಅಭಿಪ್ರಾಯಪಟ್ಟಿದ್ದಾರೆ.

ಕಾನ್ಸ್‌ಟೇಬಲ್ ಮನೆ ಕಬೋರ್ಡ್‌ನಲ್ಲಿದ್ದ ಗೃಹಿಣಿಯ ಮಾಂಗಲ್ಯ ಸರ ಕಳವು

ಮೈಸೂರು, ಡಿ.9–ಪೊಲೀಸ್ ಕಾನ್ಸ್‌ಟೇಬಲ್ ಮನೆಯ ಕಬೋರ್ಡ್‌ನಲ್ಲಿದ್ದ ಮಾಂಗಲ್ಯ ಸರ ಕಳುವಾಗಿರುವ ಬಗ್ಗೆ ತಡವಾಗಿ ವರದಿಯಾಗಿದೆ.



ಚಾಮರಾಜನಗರದಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಆಗಿರುವ ಎಂ.ಪಿ. ಮಹದೇವಸ್ವಾಮಿ ಅವರು ಕುಟುಂಬ ಸಮೇತರಾಗಿ ಮೈಸೂರಿನ ಲಾಲ್ ಬಹದ್ದೂರ್ ಶಾಸ್ತ್ರಿ ನಗರದಲ್ಲಿ ವಾಸವಿದ್ದು, ಇವರ ಪತ್ನಿ ಮಮತಾ (39) ಮಾಂಗಲ್ಯ ಸರ ಕಳೆದುಕೊಂಡವರು.

ವಿವರ: ಡಿ.2ರಂದು ಮಹದೇವಸ್ವಾಮಿ ರಾತ್ರಿ ಕರ್ತವ್ಯಕ್ಕೆ ಚಾಮರಾಜನಗರಕ್ಕೆ ತೆರಳಿದ್ದಾರೆ. ಅದೇ ದಿನ ಸಂಜೆ 6.30ರ ಸುಮಾರಿನಲ್ಲಿ ಮಮತಾ ಅವರು ಗುಂಡ್ಲುಪೇಟೆಗೆ ಹೋಗಿದ್ದು, ರಾತ್ರಿ ಪ್ರಯಾಣವಾದ ಕಾರಣ ತಮ್ಮ ಕುತ್ತಿಗೆಯಲ್ಲಿದ್ದ 45 ಗ್ರಾಂ ತೂಕದ ಮಾಂಗಲ್ಯ ಸರವನ್ನು ಬೆಡ್‌ರೂಂನ ಕಬೋರ್ಡ್‌ನಲ್ಲಿಟ್ಟು ಹೋಗಿದ್ದಾರೆ. ಡಿ.4ರಂದು ಬೆಳಗ್ಗೆ ನೋಡಿದಾಗ ಕಬೋರ್ಡ್‌ನಲ್ಲಿದ್ದ ಮಾಂಗಲ್ಯ ಸರ ಕಳುವಾಗಿರುವುದು ಗೊತ್ತಾಗಿದೆ. ಈ ಸಂಬಂಧ ಡಿ.8ರಂದು ಮಮತಾ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಆಲನಹಳ್ಳಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಉಪನ್ಯಾಸಕನ ಬ್ಯಾಂಕ್ ಖಾತೆಗೆ ಕತ್ತರಿ ಹಾಕಿದ ಖದೀಮರು

ಮಡಿಕೇರಿ, ಡಿ.9–ಕಾಲೇಜು ಉಪನ್ಯಾಸಕರೊಬ್ಬರ ಆಧಾರ್ ಕಾರ್ಡ್‌ನ ಬಯೋಮೆಟ್ರಿಕ್ ಬಳಸಿ ಅವರ ಬ್ಯಾಂಕ್ ಖಾತೆಯಿಂದ 1.07 ಲಕ್ಷ ರೂ.ಗಳನ್ನು ಅಕ್ರಮವಾಗಿ ಡ್ರಾ ಮಾಡಲಾಗಿದೆ.

1.07 ಲಕ್ಷ ರೂ. ಅಕ್ರಮವಾಗಿ ಡ್ರಾ

ಕೊಡಗಿನ ಮಂಗಳಾದೇವಿ ನಗರ ನಿವಾಸಿಯಾಗಿರುವ ಕಾಲೇಜು ಉಪನ್ಯಾಸಕ ವೇಣುಗೋಪಾಲ್ ಅವರು ಸುಳ್ಯದ ಎಸ್‌ಬಿಐನಲ್ಲಿ ಖಾತೆ ಹೊಂದಿದ್ದಾರೆ. ಇವರು ಇತ್ತೀಚೆಗೆ ಎಟಿಎಂನಲ್ಲಿ ಹಣ ಡ್ರಾ ಮಾಡಲು ಹೋದಾಗ ತಮ್ಮ ಖಾತೆಯಲ್ಲಿ ಹಣ ಕಡಿಮೆ ಇರುವುದು ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ಅವರು ತಾವು ಖಾತೆ ಹೊಂದಿದ್ದ ಬ್ಯಾಂಕ್ ಅನ್ನು ಸಂಪರ್ಕಿಸಿದಾಗ ಅವರ ಆಧಾರ್ ಕಾರ್ಡ್‌ನ ಬಯೋಮೆಟ್ರಿಕ್ ಬಳಸಿಕೊಂಡು ಅ.10ರಿಂದ ಡಿ.6ರವರೆಗೆ 1,07,500 ರೂ. ಅಕ್ರಮವಾಗಿ ಡ್ರಾ ಮಾಡಿರುವುದು ಬ್ಯಾಂಕ್ ಸ್ಟೇಟ್‌ಮೆಂಟ್‌ನಿಂದ ಗೊತ್ತಾಗಿದೆ. ವೇಣುಗೋಪಾಲ್ ಅವರು ಯಾರಿಗೂ ಎಟಿಎಂ ವಿವರಗಳನ್ನಾಗಲೀ, ಓಟಿಪಿಯನ್ನಾಗಲೀ ನೀಡದೇ ಇದ್ದರೂ ಆಧಾರ್ ಕಾರ್ಡ್‌ನ ಬಯೋಮೆಟ್ರಿಕ್ ಬಳಸಿಕೊಂಡು ಅಕ್ರಮವಾಗಿ ಬ್ಯಾಂಕ್ ಖಾತೆಯಿಂದ ಹಣ ಡ್ರಾ ಮಾಡಿರುವುದು ಆಘಾತಕಾರಿಯಾಗಿದೆ. ಈ ಸಂಬಂಧ ಕೊಡಗು ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಳ್ಳೆಯ ಪುಸ್ತಕ ಮುಂದಿನ ಜನಾಂಗಕ್ಕೆ ಅದ್ಭುತ ಕಾಣಿಕೆ

ಕುವೆಂಪು ವಿವಿ ಪ್ರಾಧ್ಯಾಪಕ ಪ್ರೊ.ಜಿ. ಪ್ರಶಾಂತ ನಾಯಕ ಅಭಿಮತ



ಮೈಸೂರು, ಡಿ.9(ಪಿಎಂ)– ಒಳ್ಳೆಯ ಪುಸ್ತಕಗಳು ಮುಂದಿನ ಜನಾಂಗಕ್ಕೆ ಬಿಟ್ಟು ಹೋಗಬಹುದಾದ ಅದ್ಭುತ ಕಾಣಿಕೆಗಳಾಗಲಿವೆ ಎಂದು ಶಿವಮೊಗ್ಗ ಜಿಲ್ಲೆಯ ಕುವೆಂಪು ವಿವಿಯ ಕನ್ನಡ ಭಾರತಿ ವಿಭಾಗದ ಪ್ರಾಧ್ಯಾಪಕ ಪ್ರೊ.ಜಿ.ಪ್ರಶಾಂತ ನಾಯಕ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಡಾ.ನಂಜುಂಡಸ್ವಾಮಿ ಹರದನಹಳ್ಳಿ ಅವರ ಜೊಚ್ಚಲ ಕವನ ಸಂಕಲನ 'ನೆಲೆ ನಿಲ್ಲದ ಮುಗಿಲು' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪುಸ್ತಕ ಕುರಿತು ಅವರು ಮಾತನಾಡಿದರು.

ಇಂದು ಎಲ್ಲಾ ಮಾಹಿತಿ ಅಂತರ್ಜಾಲದಲ್ಲಿ ದೊರೆಯುತ್ತದೆ ಎನ್ನುವ ಕಾಲಘಟ್ಟದಲ್ಲಿ ಇದ್ದೇವೆ. ಮೊಬೈಲ್ ಬಳಕೆ ಬಾರದಿದ್ದರೆ, ಫೇಸ್‌ಬುಕ್ ಖಾತೆ ಹೊಂದದಿದ್ದರೆ ಅಂತಹವರನ್ನು ಮನುಷ್ಯರೇ ಎಂದು ನೋಡುವ ಸನ್ನಿವೇಶ ನಿರ್ಮಾಣವಾಗಿದೆ. ಇಂತಹ ಪರಿಸ್ಥಿತಿ ನಡುವೆಯೂ ನಾನು ಫೇಸ್‌ಬುಕ್ ಖಾತೆ ಹೊಂದಿಲ್ಲ ಎಂದರು.

ತಂತ್ರಜ್ಞಾನದ ಹಿನ್ನೆಲೆಯಲ್ಲಿ ಯಾವುದೇ ಬರಹಗಳನ್ನು ಲ್ಯಾಪ್‌ಟಾಪ್, ಸಿಡಿ ಮೊದಲಾದ ವಿಧಾನಗಳಲ್ಲಿ ಸಂಗ್ರಹಿಸಿಡಬಹುದು. ಕೋವಿಡ್ ಸಂದರ್ಭದಲ್ಲಿ ಮನುಷ್ಯರನ್ನೇ ಕಣ್ಣಿಗೆ ಕಾಣದ ಸೂಕ್ಷ್ಮ ಜೀವಿ ನಾಶ ಮಾಡಿತು. ಅಂತೆಯೇ ಒಂದು ವೈರಸ್ ತಂತ್ರಜ್ಞಾನದಲ್ಲಿರುವ ದತ್ತಾಂಶ ನಾಶ ಮಾಡಬಲ್ಲದು ಎಂಬುದು ಅಷ್ಟೇ ಸತ್ಯ. ಹಾಗಾಗಿ ಪುಸ್ತಕಗಳ ಜೊತೆಗೆ ನನ್ನಂತಹವರು ಬದುಕುತ್ತಿದ್ದೇವೆ ಎಂದು ತಿಳಿಸಿದರು.

ಸಮಾರಂಭ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಸಾಹಿತ್ಯ ವರ್ತಮಾನಕ್ಕೆ ಸ್ಪಂದಿಸುವಂತೆ ಇರಬೇಕು. ಇಲ್ಲವಾದರೆ ಅಂತಹ ಸಾಹಿತ್ಯ ಸಾರ್ಥಕವಾಗಲು ಸಾಧ್ಯವಿಲ್ಲ. ಅದನ್ನು ಬರೆದವರು ಉತ್ತಮ ಲೇಖಕರೂ ಆಗಲಾರರು. ಸಾಹಿತ್ಯ ರಚನೆ ಅಷ್ಟು ಸುಲಭವಲ್ಲ. ಅದರಲ್ಲೂ ಕವನ–ಕವಿತೆ ರಚನೆ ಮತ್ತಷ್ಟು ಸವಾಲೇ ಸರಿ. ಅರ್ಥಪೂರ್ಣವಾಗಿ ಕಾವ್ಯ ರಚನೆ ಮಾಡುವುದು ಸಾಮಾನ್ಯ ಸಂಗತಿಯಲ್ಲ ಎಂದು ಹೇಳಿದರು.

ಟಿವಿ, ಮೊಬೈಲ್ ಭರಾಟೆಯಲ್ಲಿ ಪುಸ್ತಕ ಓದುವುದು ಕಡಿಮೆಯಾಗಿದೆ ಎಂಬ ಭಾವನೆ ಇದೆ. ಆದರೆ ಅದು ಖಂಡಿತ ತಪ್ಪು ಪುಸ್ತಕ ಓದುವವರ ಸಂಖ್ಯೆ ಕಡಿಮೆಯಾಗಿಲ್ಲ. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಜನತೆಗೆ ನೆಮ್ಮದಿ ನೀಡಿ, ಅವರ ಆತಂಕ ನಿವಾರಣೆಗೆ ಪುಸ್ತಕಗಳು ಸಹಕಾರಿಯಾದವು. ಒಳ್ಳೆಯ ಅಧ್ಯಾಪಕರು ಮತ್ತು ಲೇಖಕರಾಗಿರುವ ಡಾ.ನಂಜುಂಡಸ್ವಾಮಿ ಹರದನಹಳ್ಳಿಯವರು ನಿರಂತರವಾಗಿ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಮೈಸೂರು–ಚಾಮರಾಜನಗರ ನಾಯಕರ ಸಂಘದ ಅಧ್ಯಕ್ಷ ರಾಮಚಂದ್ರ ಕವನ ಸಂಕಲನ ಬಿಡುಗಡೆ ಮಾಡಿದರು. ಇದೇ ವೇಳೆ ರಾಜ್ಯ ನಾಯಕರ ಯುವ ಸೇನೆ ಅಧ್ಯಕ್ಷ ದೇವರಾಜ ಟಿ.ಕಾಟೂರು, ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪನಾಯಕ, ಮುಖಂಡರಾದ ಜವರನಾಯಕ, ಸಿದ್ದರಾಜು ಟಿ.ಕಾಟೂರು ಅವರನ್ನು ಸನ್ಮಾನಿಸಲಾಯಿತು.

ನಗರಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ, ಜನಪದ ಗಾಯಕ ಸಿ.ಎಂ. ನರಸಿಂಹಮೂರ್ತಿ, ಹುಣಸೂರು ಸರ್ಕಾರಿ ಮಹಿಳಾ ಕಾಲೇಜು ಪ್ರಾಂಶುಪಾಲ ಪುಟ್ಟಶೆಟ್ಟಿ, ಮೈಸೂರು–ಚಾಮರಾಜನಗರ ಜಿಲ್ಲಾ ನಾಯಕ ನೌಕರರ ಸಂಘದ ಅಧ್ಯಕ್ಷ ಜಗದೀಶ್ವರಮೂರ್ತಿ, ಮೈಸೂರು ತಾಲೂಕು ನಾಯಕರ ಸಂಘದ ಮಹದೇವಸ್ವಾಮಿ, ಉದ್ಯಮಿ ಬಾಬು ನಾಯಕ, ಮುಖಂಡ ಡಾ.ಮಹೇಶ್ ಚಿಕ್ಕಲೂರು ಮತ್ತಿತರರು ಹಾಜರಿದ್ದರು.

ಸಾಂಸ್ಕೃತಿಕ ಸ್ಪರ್ಧೆಗಳು ವಿದ್ಯಾರ್ಥಿ ಜೀವನದ ಯಶಸ್ಸಿಗೆ ಮೈಲಿಗಲ್ಲು

ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅಭಿಮತ



ಮೈಸೂರು,ಡಿ.9(ಎಂಟಿವೈ)–ವಿದ್ಯಾರ್ಥಿಗಳು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ವ್ಯಕ್ತಿತ್ವ ವಿಕಸನಗೊಳ್ಳುವುದರೊಂದಿಗೆ ಜೀವನದ ಯಶಸ್ಸಿಗೆ ಮುನ್ನಡಿ ಇಟ್ಟಂತಾಗಲಿದ್ದು, ಅದಕ್ಕಾಗಿ ಸಾಂಸ್ಕೃತಿಕ ಸ್ಪರ್ಧೆಗೆ ವೇದಿಕೆ ಕಲ್ಪಿಸುವ ಅಗತ್ಯವಿದೆ ಎಂದು ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಪದವಿಪೂರ್ವ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಶನಿವಾರ ಆಯೋಜಿಸಿದ್ದ 'ಕಲಾ ಶಾರದಾ–2023' ಅಂತರ ಕಾಲೇಜು ಸಾಂಸ್ಕೃತಿಕ ಕಾರ್ಯಕ್ರಮದ ಬಹುಮಾನ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಅವರು, ಸಾಂಸ್ಕೃತಿಕ ಸ್ಪರ್ಧೆಗಳು ವಿದ್ಯಾರ್ಥಿ ಜೀವನದ ಯಶಸ್ಸಿಗೆ ಮೈಲಿಗಲ್ಲಾಗಿದೆ. ವ್ಯಕ್ತಿತ್ವ ವಿಕಸನಗೊಳ್ಳಲು ಪ್ರತಿಭಾ ವೇದಿಕೆಗಳು ಸಹಕಾರಿಯಾಗಲಿವೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಯಾವುದೇ ಸ್ಪರ್ಧೆಯಲ್ಲಿ ಸೋಲು–ಗೆಲವು ಮುಖ್ಯವಲ್ಲ. ಆದರೆ, ಪಾಲ್ಗೊಳ್ಳುವಿಕೆ ಮಹತ್ತರ ಪಾತ್ರ ವಹಿಸುತ್ತದೆ. ವಿದ್ಯಾರ್ಥಿಗಳು ಪಠ್ಯಕ್ರಮದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದರಿಂದ ನಾಯಕತ್ವ ಗುಣ ಬೆಳೆಯುತ್ತದೆ. ಅಲ್ಲದೆ, ವಿದ್ಯಾರ್ಥಿಗಳಲ್ಲಿ ಧೈರ್ಯವೂ ಬರುತ್ತದೆ ಎಂದರು.

ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಅಗತ್ಯವಿದೆ. ಸಂಸ್ಕೃತಿ ಮತ್ತು ಕಲೆ ಮೈಗೂಡಿಸಿಕೊಂಡರೆ ಜೀವನದುದ್ದಕ್ಕೂ ಕಲೆಗಾರನಾಗಿರಬಹುದು. ಭಾರತೀಯ ಸಂಸ್ಕೃತಿಯಲ್ಲಿ ರಾಮಾಯಣ, ಮಹಾಭಾರತ ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡಿದೆ. ಇದರಲ್ಲಿರುವ ಆದರ್ಶ ವ್ಯಕ್ತಿಗಳ ಹಾಗೂ ಸರಳ ಜೀವನ ಎಲ್ಲರಿಗೂ ಸ್ಫೂರ್ತಿದಾಯಕ. ಐಐಟಿ ಮಾಡಿರುವ ಶೇ.76ರಷ್ಟು ಪ್ರತಿಭಾವಂತ ಭಾರತೀಯರು ವಿದೇಶದಲ್ಲಿದ್ದಾರೆ. ಶೇ.24ರಷ್ಟು ಮಾತ್ರ ಭಾರತದಲ್ಲಿಯೇ ಸೇವೆ ಸಲ್ಲಿಸುತ್ತಿದ್ದಾರೆ. ಎಲ್ಲಾ ಕ್ಷೇತ್ರದ ಪ್ರತಿಭಾನ್ವಿತರು ದೇಶಕ್ಕಾಗಿ ದುಡಿದರೆ ದೇಶ ಮತ್ತಷ್ಟು ಅಭಿವೃದ್ಧಿ ಹೊಂದಲು ಸಾಧ್ಯ ಎಂದರು.

ವಿವಿಧ ಸ್ಪರ್ಧೆ: ಮೈಸೂರು ನಗರ ವ್ಯಾಪ್ತಿಯ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಯಲ್ಲಿ 27 ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಭರತನಾಟ್ಯ, ಸಮೂಹ ನೃತ್ಯ, ಚಿತ್ರಗೀತೆ, ಭಾವಗೀತೆ, ಜನಪದ ಗೀತೆ, ಶಾಸ್ತ್ರೀಯ ಸಂಗೀತ ಸ್ಪರ್ಧೆಗಳು ನಡೆದವು. ಈ ಸ್ಪರ್ಧೆಗಳಲ್ಲಿ ಅತೀ ಹೆಚ್ಚು ಅಂಕ ಹಾಗೂ ಬಹುಮಾನವನ್ನು ಪಡೆದ ಸದ್ವಿದ್ಯಾ ಸೆಮಿ ರೆಸಿಡೆನ್ಸಿ ಪ ಪೂರ್ವ ಕಾಲೇಜಿಗೆ ಶ್ರೀಮತಿ ಶಾರದಮ್ಮ ಕಲಾ ಶಾರದಾ ಪರ್ಯಾಯ ಪಾರಿತೋಷಕ ಲಭಿಸಿತು.

ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸಿ.ಕೆ.ಅಶೋಕ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್, ಕಲಾ ಶಾರದಾ ಸಂಚಾಲಕ ರಾಜೇಂದ್ರ ಪ್ರಸಾದ್ ಹೊನ್ನಲಗೆರೆ, ಕಾಲೇಜಿನ ಸಾಂಸ್ಕೃತಿಕ ವೇದಿಕೆ ಸಂಚಾಲಕರಾದ ವಿದೂಷಿ ಕಾವ್ಯಶ್ರೀ ಆರ್.ರಾವ್, ಉಪನ್ಯಾಸಕರಾದ ಹೆಚ್.ಆರ್.ಪರಮೇಶ್, ಎ.ಶಿಲ್ಪಾ, ಡಾ.ಪೂಜಾ, ಡಾ.ಲಾವಣ್ಯ, ವಿಂದ್ಯಾ ಆರ್.ಪ್ರಸಾದ್, ಮಧುರ, ಮನೋಜ್‌ಕುಮಾರ್, ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ಜನವರಿ 28ರವರೆಗೆ ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ವಸ್ತುಪ್ರದರ್ಶನ

ಮೈಸೂರು,ಡಿ.9(ಆರ್‌ಕೆ)–ಮೈಸೂರಿನ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಆರಂಭವಾಗಿರುವ ಸಹರಾ ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ವಸ್ತುಪ್ರದರ್ಶನ ಮತ್ತು ಮಾರಾಟವು ಜನವರಿ 28ರವರೆಗೆ ನಡೆಯಲಿದೆ. ಭಾರತ ಸರ್ಕಾರದ ಟೆಕ್ಸ್‌ಟೈಲ್ಸ್ ಸಚಿವಾಲಯದಿಂದ ನೋಂದಾಯಿತ ಸಹರಾ ಮಹಿಳಾ ಸ್ವ–ಸಹಾಯ ಸಂಘವು ಸಹರಾ ಹ್ಯಾಂಡಿಕ್ರಾಫ್ಟ್ಸ್, ಹ್ಯಾಂಡ್‌ಲೂಮ್ ಅಸೋಸಿಯೇಷನ್ ಸಹಯೋಗದಲ್ಲಿ ನ.17ರಿಂದ ಆಯೋಜಿಸಿರುವ ಹ್ಯಾಂಡಿಕ್ರಾಫ್ಟ್ಸ್ ಮತ್ತು ಹ್ಯಾಂಡ್‌ಲೂಮ್ ವಸ್ತುಪ್ರದರ್ಶನ ಹಾಗೂ ಶಾಪಿಂಗ್ ಫೆಸ್ಟಿವಲ್‌ನಲ್ಲಿ ಕಲಾಕೃತಿ, ಕೈಮಗ್ಗ ಸಾಮಗ್ರಿಗಳು, ಹ್ಯಾಂಡ್‌ಲೂಮ್ ಸೇರಿದಂತೆ ಗೃಹೋಪಯೋಗಿ ವಸ್ತುಗಳನ್ನು ಪ್ರದರ್ಶಿಸಲಾಗಿದೆ. ಪ್ರವೇಶ ಮತ್ತು ವಾಹನ ನಿಲುಗಡೆ ಉಚಿತವಾಗಿದ್ದು, ಪ್ರತೀ ದಿನ ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ ವಸ್ತುಪ್ರದರ್ಶನ ತೆರೆದಿರುತ್ತದೆ. ಎಲ್ಲಾ ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಮತ್ತು ಪೇಟಿಎಂಗಳನ್ನು ಸ್ವೀಕರಿಸಲಾಗುವುದು. ಮಾಹಿತಿಗೆ 9880903786, 9590018133, 8892138769 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹೆಮ್ಮಿಗೆ ಸಮುದಾಯದ ಸಾಧಕರಿಗೆ ಸನ್ಮಾನ



ಹೆಮ್ಮಿಗೆ ಶ್ರೀ ವೈಷ್ಣವ ಸಭಾ ವತಿಯಿಂದ ವಿವಿಧ ಕ್ಷೇತ್ರದ ಹೆಮ್ಮಿಗೆ ಸಮುದಾಯದ ಸಾಧಕರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಮೈಸೂರು, ಡಿ.9(ಎಂಕೆ)– ಹೆಮ್ಮಿಗೆ ಶ್ರೀ ವೈಷ್ಣವ ಸಭಾ ವತಿಯಿಂದ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಹೆಮ್ಮಿಗೆ ಸಮುದಾಯದ ಸಾಧಕರನ್ನು ಸನ್ಮಾನಿಸಿ, ಗೌರವಿಸಲಾಯಿತು.

ನಗರದ ಸರಸ್ವತಿಪುರಂನಲ್ಲಿರುವ ರೋಟರಿ ಪಶ್ಚಿಮ ಶಾಲೆ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಸನ್ಮಾನ ಹಾಗೂ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಸತ್ಯನಾರಾಯಣ ಹಾಗೂ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸಾಧಕರಾದ ಡಾ.ನಿ.ಕೃ.ರಾಮಶೇಷನ್(ಸಂಶೋಧನೆ), ಡಾ.ಭಾರ್ಗವಿ ಡಿ.ಹೆಮ್ಮಿಗೆ(ಪತ್ರಿಕೋದ್ಯಮ ಮತ್ತು ಶಿಕ್ಷಣ), ಡಾ.ಪದ್ಮಾವತಿ ನರಸಿಂಹನ್ (ಗಮಕ ಸಂಗೀತ), ವಂಶೀಧರ(ಕೊಳಲು ವಾದನ), ನಾಗರತ್ನಮ್ಮ ಹೆಮ್ಮಿಗೆ(ಸಾಹಿತ್ಯ) ಹಾಗೂ ಹೆಮ್ಮಿಗೆ ಎಸ್.ಪ್ರಶಾಂತ್(ಸಂಗೀತ) ಅವರನ್ನು ಸನ್ಮಾನಿಸಿ, ಗೌರವಿಸಿದರು.

ಬಳಿಕ ವಿದ್ವಾನ್ ಸತ್ಯನಾರಾಯಣ ಮಾತನಾಡಿ, ಗ್ರಾಮಗಳು ನಾಡಿನ ಕಲೆ, ಸಂಸ್ಕೃತಿ, ಸಾಹಿತ್ಯ ಹಾಗೂ ಪರಂಪರೆಯನ್ನು ಉಳಿಸಿ–ಬೆಳೆಸುವ ನಿಟ್ಟಿನಲ್ಲಿ ನಗರಗಳಿಗಿಂತಲೂ ಮಹತ್ತರವಾದ ಕೆಲಸ ಮಾಡಿವೆ. ಅದರಲ್ಲಿ ತಲಕಾಡಿನ ಹೆಮ್ಮಿಗೆ ಗ್ರಾಮವೂ ಒಂದಾಗಿದೆ. ಇಲ್ಲಿ ವಾಸ ಮಾಡುತ್ತಿದ್ದ ವೇದ, ಶಾಸ್ತ್ರ ತಿಳಿದಂತಹ ದೊಡ್ಡ ದೊಡ್ಡ ವಿದ್ವಾಂಸರು ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಅವರೆಲ್ಲರನ್ನು ಸ್ಮರಿಸುವ ನಿಟ್ಟಿನಲ್ಲಿ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಿರುವುದು ಶ್ಲಾಘನೀಯ ಎಂದು ಹೇಳಿದರು.

ಒಗ್ಗಟ್ಟಾಗಬೇಕು: ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಬ್ರಾಹ್ಮಣ ಸಮುದಾಯದಲ್ಲಿರುವ ತ್ರಿಮತಸ್ಥರು ಒಂದಾಗಿ ಬ್ರಾಹ್ಮಣ ಎಂಬ ಹೆಸರಿನಲ್ಲಿ ಒಗ್ಗಟ್ಟಾಗಬೇಕು ಎಂಬುದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಯುಕ್ತಿಯಾಗಿದೆ. ಒಗ್ಗಟ್ಟಿನಲ್ಲಿ ಬಲವಿದೆ, ಗೆಲುವಿದೆ ಎಂಬುದನ್ನು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೆ.ಆರ್.ಕ್ಷೇತ್ರದ ಅಭ್ಯರ್ಥಿ ಗೆಲ್ಲಿಸುವ ಮೂಲಕ ತೋರಿಸಿದ್ದೀರಿ. ಒಂಟಿ ಧ್ವನಿಯಾದರೆ, ಸೊಂಟ ಮುರಿದು ಕಳಿಸುತ್ತಾರೆ. ಆದ್ದರಿಂದ ಬ್ರಾಹ್ಮಣರೆಲ್ಲರೂ ಒಂದಾಗಬೇಕು ಎಂದರು.

ಬಳಿಕ ಗಾಯಕ ಹೆಮ್ಮಿಗೆ ಎಸ್.ಪ್ರಶಾಂತ್ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಪಿಟೀಲು ವಾದನದಲ್ಲಿ ವೈಭವ್ ರಮಣಿ, ಮೃದಂಗದಲ್ಲಿ ಅನಿರುದ್ಧ ಭಟ್ ಉತ್ತಮ ಸಾಥ್ ನೀಡಿದರು. ಆದಾಯ ತೆರಿಗೆ ಇಲಾಖೆ ಆಯುಕ್ತೆ(ಬೆಂಗಳೂರು) ಸೌಮ್ಯ ಆಚಾರ್, ಹೆಮ್ಮಿಗೆ ಶ್ರೀ ವೈಷ್ಣವ ಸಭಾ ಅಧ್ಯಕ್ಷ ಹೆಚ್.ವಿ.ಎಲ್.ಎನ್. ಆಚಾರ್, ಕಾರ್ಯದರ್ಶಿ ಹೆಚ್.ಆರ್.ಬಿಳಿಗಿರಿ, ಚಕ್ರಪಾಣಿ, ವಿಕ್ರಂ ಅಯ್ಯಂಗಾರ್, ಟಿ.ಎಸ್. ಅರುಣ್ ಮತ್ತಿತರರು ಉಪಸ್ಥಿತರಿದ್ದರು.

ಲೀಲಾವತಿಯವರಿಗೆ ದಾದಾಸಾಹೇಬ್ ಫಾಲ್ಕೆ ಗೌರವ ಸಲ್ಲದಿರುವುದು ಬೇಸರ




ಮೈಸೂರು,ಡಿ.9(ಪಿಎಂ)– ಕನ್ನಡ ಚಿತ್ರರಂಗದ ಹಿರಿಯ ನಟಿ ಲೀಲಾವತಿ ಅವರ ನಿಧನ ಕನ್ನಡ ಚಿತ್ರರಂಗಕ್ಕೆ ಮಾತ್ರವಲ್ಲದೆ, ಇಡೀ ನಾಡಿಗೆ ತುಂಬಲಾರದ ನಷ್ಟ. ಅವರಿಗೆ ಭಾರತ ಸರ್ಕಾರದಿಂದ ಕೊಡಮಾಡುವ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ನೀಡದಿರುವುದು ಅತ್ಯಂತ ಬೇಸರದ ಸಂಗತಿ ಎಂದು ಚಿತ್ರ ನಿರ್ಮಾಪಕ–ನಿರ್ದೇಶಕ ಸಿದ್ದೇಗೌಡ ಬೇಸರ ವ್ಯಕ್ತಪಡಿಸಿದ್ದಾರೆ.

400ಕ್ಕೂ ಹೆಚ್ಚು ಕನ್ನಡ ಚಿತ್ರದಲ್ಲಿ ಅಭಿನಯಿಸಿದ ಹೆಗ್ಗಳಿಕೆ ಹೊಂದಿರುವ ಅವರು, ನಾಯಕಿಯಾಗಿ ತಮ್ಮದೇ ಛಾಪು ಮೂಡಿಸಿದ್ದಲ್ಲದೆ, ಪೋಷಕ ಪಾತ್ರಗಳಲ್ಲಿಯೂ ಅಭಿನಯಿಸಿ ಕನ್ನಡ ಚಿತ್ರರಂಗವನ್ನು ಶ್ರೀಮಂತಗೊಳಿಸಿದ್ದಾರೆ. ಇದಲ್ಲದೆ, 200ಕ್ಕೂ ಹೆಚ್ಚು ಪರಭಾಷಾ ಚಿತ್ರಗಳಲ್ಲಿ ಅಭಿನಯಿಸಿ ಒಟ್ಟು 600ಕ್ಕೂ ಅಧಿಕ ಚಿತ್ರಗಳಲ್ಲಿ ಪಾತ್ರ ಮಾಡಿರುವ ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ನೀಡದಿರುವುದು ನೋವಿನ ಸಂಗತಿ. ಇವರಿಗಿಂತ ಕಡಿಮೆ ಸಿನಿಮಾಗಳಲ್ಲಿ ಅಭಿನಯಿಸಿದ ಹಲವರಿಗೆ ಸದರಿ ಪ್ರಶಸ್ತಿ ನೀಡಲಾಗಿದೆ. ಸಾರ್ಥಕ ಜೀವನ ನಡೆಸಿದ ಲೀಲಾವತಿಯವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಪ್ರಾರ್ಥಿಸಿದ್ದಾರೆ.

ಡಿ.13ರಂದು ಅತಿಥಿ ಉಪನ್ಯಾಸಕರ ನೇಮಕ ಸಂಬಂಧ ಸಂದರ್ಶನ

ಮೈಸೂರು,ಡಿ.9(ಪಿಎಂ)–ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳಲ್ಲಿನ ಸ್ನಾತಕೋತ್ತರ ವಿಷಯಗಳಲ್ಲಿ ಲಭ್ಯವಿರುವ ಹೆಚ್ಚುವರಿ ಬೋಧನಾ ಕಾರ್ಯಭಾರ ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುವ ಸಂಬಂಧ ಡಿ.13ರಂದು ಸಂದರ್ಶನ ನಡೆಯಲಿದೆ.




ಇದರ ಸಂಪೂರ್ಣ ವಿವರವು ವಿಶ್ವವಿದ್ಯಾನಿಲಯದ ವೆಬ್‌ಸೈಟ್(www. uni-mysore.ac.in)ನಲ್ಲಿ ಲಭ್ಯವಿದೆ. ಆಸಕ್ತರು ವಿವರ ಮತ್ತು ನಿಗದಿತ ಅರ್ಜಿ ನಮೂನೆಯನ್ನು ಸದರಿ ವೆಬ್‌ಸೈಟ್‌ನಿಂದ ಪಡೆಯಬಹುದು. ನಿಗದಿಪಡಿಸಿದ ದಿನಾಂಕದಲ್ಲಿ ವ್ಯತ್ಯಾಸವಾದಲ್ಲಿ ಬದಲಾವಣೆ ದಿನಾಂಕದ ಬಗ್ಗೆ ಮಾಹಿತಿಯನ್ನು ವಿವಿ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು ಎಂದು ವಿವಿ ಪ್ರಕಟಣೆ ತಿಳಿಸಿದೆ.

ವಡುವಿನ ಕಟ್ಟೆ ಕೆರೆ ಒತ್ತುವರಿ ತೆರವಿಗೆ ಜಿಲ್ಲಾಡಳಿತ ಮೀನಾಮೇಷ

ಮೈಸೂರು,ಡಿ.9(ಎಸ್‌ಪಿಎನ್)–ಮೈಸೂರು ತಾಲೂಕು, ಜಯಪುರ ಹೋಬಳಿಯ 'ವಡುವಿನ ಕಟ್ಟೆ ಕೆರೆ' ಜಾಗವನ್ನು ಒತ್ತುವರಿ ಮಾಡಿಕೊಂಡವರ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ರಾಜ್ಯ ಸರ್ಕಾರ, ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತ ವಿಫಲವಾಗಿದೆ ಎಂದು ವಡುವನಕಟ್ಟೆ ಕೆರೆ ಸಂರಕ್ಷಣಾ ಸಮಿತಿ ಬೇಸರ ಹೊರಹಾಕಿದೆ.

ವಡುವಿನ ಕಟ್ಟೆ ಕೆರೆ ದೇವರಾಜ ಅರಸು ಅವರ ಅಧಿಕಾರಾವಧಿಯಲ್ಲಿ ನವೀಕರಣಕೊಂಡು, ಉದ್ಘಾಟನೆಗೊಂಡಿತ್ತು. ನಂತರ ಅಧಿಕಾರಿಗಳು, ಗ್ರಾಮಸ್ಥರ ನಿರ್ಲಕ್ಷದಿಂದಾಗಿ ಕೆರೆ ಭೂಗಳ್ಳರ ಪಾಲಾಗಿತ್ತು. 1990ರಲ್ಲಿ ಈ ಕೆರೆಯನ್ನು ಅಭಿವೃದ್ಧಿಪಡಿಸುವಂತೆ ಗ್ರಾಮಸ್ಥರ ಮನವಿಗೆ ಸ್ಪಂದಿಸಿ, ಅಂದಿನ ಅಧಿಕಾರಿಗಳು ಸ್ಥಳಕ್ಕೆ ಬಂದು ಒಂದು ಅಂದಾಜಿನ ಮೇಲೆ 60–65 ಎಕರೆ ಜಾಗವಿದ್ದು, ಇದು ಸಣ್ಣ ನೀರಾವರಿ ಇಲಾಖೆ ಬರುತ್ತದೆ ಎಂದು ತಮ್ಮ ದಾಖಲೆಗಳಲ್ಲಿ ನಮೂದು ಮಾಡಿಕೊಂಡು ಹೋಗುತ್ತಿದ್ದರು. ಅದೇ ರೀತಿ ಸರ್ಕಾರಕ್ಕೂ ವರದಿ ನೀಡುತ್ತಿದ್ದರು ಎಂದು 'ಮೈಸೂರು ಮಿತ್ರ'ನಿಗೆ ವಡುವಿನ ಕಟ್ಟೆ ಕೆರೆ ಸಂರಕ್ಷಣಾ ಸಮಿತಿ ಸದಸ್ಯ ಭಾಸ್ಕರ ಶರ್ಮಾ ಮಾಹಿತಿ ನೀಡಿದರು.



ಇದರಿಂದಾಗಿ ಕೆರೆ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ಕಡಿಮೆ ಬರುತ್ತಿತ್ತು. ಇದರಿಂದ ಗ್ರಾಮಸ್ಥರಿಗೆ ಅನುಮಾನ ಬಂದು ಈ ಕೆರೆಯ ಜಾಗದ ಬಗ್ಗೆ ದಾಖಲಾತಿ ಹುಡುಕಿದಾಗ ಸರ್ಕಾರದ ಗೆಜೆಟ್‌ನಲ್ಲಿ 147 ಎಕರೆ ಕೆರೆ ಜಾಗ ಇರುವುದು ಬೆಳಕಿಗೆ ಬಂತು.

ಮೈಸೂರು ತಾಲೂಕು ಜಯಪುರ ಹೋಬಳಿ ಮದ್ದೂರು, ಕಲ್ಲಹಳ್ಳಿ ಹಾಗೂ ಹೆಚ್.ಡಿ.ಕೋಟೆ ತಾಲೂಕು ಹಂಪಾಪುರ ಹೋಬಳಿಯ ಹೊರಮಾರನಹಳ್ಳಿ ಗ್ರಾಮಗಳಲ್ಲಿ ವಡುವಿನ ಕಟ್ಟೆ ಕೆರೆ ಅಭಿವೃದ್ಧಿಗೆ ಭೂ ಸ್ವಾಧೀನವಾಗಿರುವ ಕುರಿತಾದ ದಾಖಲೆಗಳನ್ನು 'ಮೈಸೂರು ಮಿತ್ರ'ನಿಗೆ (ಸಮಗ್ರ ದಾಖಲೆಗಳನ್ನು ತೋರಿಸಿ) ತೋರಿಸಿದರು.

ವಡುವಿನ ಕಟ್ಟೆ ಕೆರೆಯ ಜಾಗ ಒಟ್ಟು ಸರ್ಕಾರದಿಂದ ಘೋಷಿಸಲ್ಪಟ್ಟಂತೆ ಮೈಸೂರು ತಾಲೂಕು ಮದ್ದೂರು ಗ್ರಾಮದ ಸ.ನಂ.ಗಳಲ್ಲಿ 124 ಎಕರೆ 06 ಗುಂಟೆ, ಕಲ್ಲಹಳ್ಳಿ ಸರ್ವೆ ನಂ.16 ಎಕರೆ 27 ಗುಂಟೆ ಹಾಗೂ ಹೆಚ್.ಡಿ.ಕೋಟೆ ತಾಲೂಕಿನ ಹೊರಮಾರನಹಳ್ಳಿ ಸ.ನಂ.9 ಎಕರೆ 09 ಗುಂಟೆ ಸೇರಿದಂತೆ ಒಟ್ಟು 147 ಎಕರೆ 02 ಗುಂಟೆ ಜಾಗ ಇದ್ದು, ಇದಕ್ಕೆ ಸಂಬಂಧಿಸಿದ ನಕ್ಷೆಯನ್ನು ಪ್ರದರ್ಶಿಸಿದರು.

ಇದರಲ್ಲಿ ಒಟ್ಟು 29 ಸರ್ವೆಗಳಿವೆ. 25 ಸರ್ವೆ ನಂಬರ್‌ಗಳ 120 ಎಕರೆ ಜಾಗವನ್ನು ಜಿಲ್ಲಾಡಳಿತ ವಶಕ್ಕೆ ಪಡೆದಿದೆ. ಇದರಲ್ಲಿ ಕಲ್ಲಹಳ್ಳಿ ಸರ್ವೆ ನಂ. 51ರ 16 ಎಕರೆ 27 ಗುಂಟೆ ಜಾಗ ಹಾಗೂ ಸರ್ವೆ ನಂ, 185, 186, 187 ಜಾಗವನ್ನು ಅಪರಿಚಿತರು ಅಕ್ರಮಿಸಿಕೊಂಡು ಕೆರೆ ಅಭಿವೃದ್ಧಿಗೆ ತೊಂದರೆ ನೀಡುತ್ತಿದ್ದಾರೆ. ಅಲ್ಲದೆ, ಈ ಸಂಬಂಧ ಹೈಕೋರ್ಟ್‌ನಲ್ಲೂ ಈ 4 ಸರ್ವೆ ನಂಬರ್ ಜಾಗವನ್ನು ನನಗೆ ನೀಡಬೇಕೆಂದು ವಾದ ಮಂಡಿಸಿದ್ದರು, ಆದರೆ, ಇವರ ಮಾತಿಗೆ ಕೋರ್ಟ್, ಮನ್ನಣೆ ನೀಡದೇ ಜಿಲ್ಲಾಡಳಿತದ ಪರವಾಗಿ ತೀರ್ಪು ನೀಡಿದೆ. ಆದರೂ ಈ ವ್ಯಕ್ತಿ ಆಕ್ರಮಿಸಿರುವ ಜಾಗದಲ್ಲಿ ಬೇಲಿ ಹಾಕಲು ಹೊರಟಿದ್ದ ಅಧಿಕಾರಿಗಳ ವಿರುದ್ಧ ಜಯಪುರ ಠಾಣೆಯಲ್ಲಿ ದೂರು ದಾಖಲಿಸಿ, ಜಿಲ್ಲಾಡಳಿತಕ್ಕೆ ಬೆದರಿಕೆ ಒಡ್ಡುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.


ಹಾಗಾಗಿ ಕಳೆದ 33 ವರ್ಷಗಳ ಹಿಂದೆ ಅಧಿಕಾರಿಗಳು ನೀಡುತ್ತಿದ್ದ ದಾಖಲೆ ಪ್ರಕಾರ ಕೆರೆ ಜಾಗ 65 ಎಕರೆ ಇತ್ತು. ಇಂದು ನಮ್ಮ ಸಮಿತಿ ಹೋರಾಟದ ಫಲವಾಗಿ ಭೂಗಳ್ಳರ ಪಾಲಾಗಿದ್ದ ಕೆರೆಯ ಜಾಗವನ್ನು ಬಿಡಿಸಿಕೊಳ್ಳಲು ಹತ್ತಾರು ಜಿಲ್ಲಾಧಿಕಾರಿಗಳು, ಅಪರ ಜಿಲ್ಲಾಧಿಕಾರಿಗಳು, ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು, ಸಹಾಯಕ ಆಯುಕ್ತರು (ಕಂದಾಯ), ತಹಸೀಲ್ದಾರ್ ಸೇರಿದಂತೆ ಇಂಜಿನಿಯರ್‌ಗಳ ಕೈ–ಕಾಲು ಹಿಡಿದು ಎಲ್ಲಾ ದಾಖಲಾತಿಗಳನ್ನು ಸರ್ಕಾರದ ಪರವಾಗಿ ನಮೂದಾಗುವಂತೆ ನೋಡಿಕೊಂಡಿದ್ದೇವೆ. ಇನ್ನುಳಿದ 4 ಸರ್ವೆ ನಂಬರ್ ಜಾಗವನ್ನು ವಶಕ್ಕೆ ಪಡೆದು, ಅದರ ದಾಖಲೆಗಳಲ್ಲಿ ವೆಬ್‌ಸೈಟ್‌ನಲ್ಲಿ ಇಂದೀಕರಿಸಿ, ಕೆರೆ ಅಭಿವೃದ್ಧಿಪಡಿಸಬೇಕು. ಇದಕ್ಕೆ ಇನ್ನೆಷ್ಟು ವರ್ಷ ಬೇಕೋ ಎಂದು ಅಧಿಕಾರಿಗಳ ಕಾರ್ಯವೈಖರಿಗೆ ಬೇಸರ ವ್ಯಕ್ತಪಡಿಸಿದರು.

ಮೈಸೂರು ಮಿತ್ರ

ಭಾನುವಾರ 10 ಡಿಸೆಂಬರ್ 2023

ಹಿರಿಯರನ್ನು ಪ್ರೀತಿಸುವ ಪ್ರವೃತ್ತಿ ಮೈಗೂಡಿಸಿಕೊಳ್ಳಿ

ನೊಣವಿನಕೆರೆ ಕಾಡುಸಿದ್ದೇಶ್ವರ ಮಠದ ಕರಿವೃಷಭ ದೇಶಿಕೇಂದ್ರ ಶಿವಯೋಗಿಶ್ವರಶ್ರೀ ಅಭಿಪ್ರಾಯ



ಮದ್ದೂರು, ಡಿ.9– ಯಾರಲ್ಲಿ ಶ್ರದ್ಧೆ, ಭಕ್ತಿ, ಕರ್ತವ್ಯ ನಿಷ್ಠೆ ಇರುತ್ತದೆಯೋ ಅವರಲ್ಲಿ ದೇವರನ್ನು ಕಾಣಬಹುದಾಗಿದ್ದು, ಪ್ರತಿಯೊಬ್ಬರೂ ಹಿರಿಯರನ್ನು ಪ್ರೀತಿಸುವ ಪ್ರವೃತ್ತಿ ಮೈಗೂಡಿಸಿಕೊಳ್ಳಬೇಕು ಎಂದು ನೊಣವಿನಕೆರೆ ಕಾಡುಸಿದ್ದೇಶ್ವರ ಮಠದ ಕರಿವೃಷಭ ದೇಶಿಕೇಂದ್ರ ಶಿವಯೋಗಿಶ್ವರಶ್ರೀ ಅಭಿಪ್ರಾಯಪಟ್ಟರು.

ಶನಿವಾರ ತಾಲೂಕಿನ ಕುಲೂರು ಗ್ರಾಮದ ಪಟ್ಟಲದಮ್ಮ ದೇವಾಲಯ ಸಮುದಾಯ ಭವನದಲ್ಲಿ ಆಯೋಜಿಸಿದ್ದ 11ನೇ ವರ್ಷದ ಕಾರ್ತಿಕ ಮಹೋತ್ಸವ ಹಾಗೂ ಕೆರೆಗೆ ಬಾಗಿನ ಸಮರ್ಪಣೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಶ್ರದ್ಧಾಭಕ್ತಿ ಬೆಳೆಸಿಕೊಂಡು ಸಂಸ್ಕೃತಿಯನ್ನು ಬದುಕಿನಲ್ಲಿ ಅಳವಡಿಸಿಕೊಂಡು ದೇಶದ ಉತ್ತಮ ಪ್ರಜೆಗಳಾಗಿ ರೂಪುಗೊಂಡು ಹುಟ್ಟಿದ ಗ್ರಾಮಕ್ಕೆ ಏನನ್ನಾದರೂ ಸೇವೆ ಸಲ್ಲಿಸಬೇಕು ಎಂದರು.

ರೈತರು ಸಂತೃಪ್ತಿ ಜೀವನ ನಡೆಸಲು ಮಳೆ ಅತ್ಯವಶ್ಯಕ. ಕೋವಿಡ್ ಸಂದರ್ಭ ದೇಶದ ಜನರು ಸಾಕಷ್ಟು ಸಂಕಷ್ಟಗಳನ್ನು ಅನುಭವಿಸಿದ್ದು, ಇದರಿಂದ ಹೊರಬಂದು ಬದುಕನ್ನು ರೂಪಿಸಿಕೊಂಡಿರುವುದು ಸಂತಸದ ವಿಚಾರ. ಮನುಷ್ಯ ಕಾಮ, ಕ್ರೋಧಗಳಿಂದ ಹೊರಬಂದು ನಾನೇ ಎಂಬ ಅಹಂ ಬಿಟ್ಟು ಭಗವಂತನನ್ನು ನಿತ್ಯ ನೆನೆಯುವ ಮೂಲಕ ಆಶೀರ್ವಾದ ಪಡೆದು ಸುಖ ಸಂತೋಷದಿಂದ ಆರೋಗ್ಯದಿಂದ ಜೀವನ ನಡೆಸಬೇಕು ಎಂದರು.

ಶಾಸಕ ಕೆ.ಎಂ.ಉದಯ್ ಮಾತನಾಡಿ, ಪಟ್ಟಲದಮ್ಮ ದೇವಿ ಆಶೀರ್ವಾದದಿಂದ ತಾವು ಶಾಸಕರಾಗಿದ್ದು ಮುಂದಿನ ದಿನಗಳಲ್ಲಿ ಕದಲೂರು ಗ್ರಾಮವನ್ನು ಮಾದರಿ ಗ್ರಾಮವನ್ನಾಗಿಸುವುದಾಗಿ ತಿಳಿಸಿದ ಅವರು, ರಸ್ತೆ, ಸಮುದಾಯ ಭವನ, ಕಾಂಪೌಂಡ್, ಕೊಠಡಿ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೆ ಈಗಾಗಲೇ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿರುವುದಾಗಿ ಹೇಳಿದರು.

ಮನ್‌ಮುಲ್ ಮಾಜಿ ಅಧ್ಯಕ್ಷ ಕದಲೂರು ರಾಮಕೃಷ್ಣ ಮಾತನಾಡಿ, 3 ಕೋಟಿ ರೂ. ವೆಚ್ಚದಲ್ಲಿ ಪಟ್ಟಲದಮ್ಮ ದೇವಿ ದೇವಾಲಯ ನಿರ್ಮಿಸಲು ಟ್ರಸ್ಟ್ ಪದಾಧಿಕಾರಿಗಳು ತೀರ್ಮಾನಿಸಿದ್ದು, ಅದರಂತೆ ಶಾಸಕರು ಜಿಲ್ಲೆಯಲ್ಲೇ ಕದಲೂರು ಗ್ರಾಮದಲ್ಲಿ ಸುಂದರವಾದ ದೇವಾಲಯವನ್ನು ನಿರ್ಮಾಣ ಮಾಡಬೇಕೆಂದು ಮನವಿ ಮಾಡಿದರು.

ಈ ವೇಳೆ ಚಂದನ್ ಗ್ರೂಪ್ಸ್ ಮಾಲೀಕ ಮಂಚೇಗೌಡ, ಕದಲೂರು ಗ್ರಾಪಂ ಅಧ್ಯಕ್ಷ ತಿಮ್ಮೇಗೌಡ, ಮುಖಂಡ ಶಿವರಾಮು, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಭಾರತಿನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಲಿಂಗೇಗೌಡ, ತಾಪಂ ಮಾಜಿ ಸದಸ್ಯ ಮಹೇಶ್ ಹಾಜರಿದ್ದರು.

ಡಿಕೆಶಿ ರಾಜ್ಯದ ಸಿಎಂ ಆಗುತ್ತಾರೆ

ಮದ್ದೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಂಬರುವ ದಿನಗಳಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ನೊಣವಿನಕೆರೆ ಕಾಡುಸಿದ್ದೇಶ್ವರ ಮಠದ ಕರಿವೃಷಭ ದೇಶಿಕೇಂದ್ರ ಶಿವಯೋಗಿಶ್ವರ ಶ್ರೀ ಭವಿಷ್ಯ ನುಡಿದರು.

ತಾಲೂಕಿನ ಕದಲೂರು ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶೀಘ್ರ ರಾಜ್ಯದಲ್ಲಿ ಸಿಎಂ ಬದಲಾವಣೆಯಾಗಲಿದ್ದು, ಡಿಕೆಶಿ ಸಿಎಂ ಆಗಲಿದ್ದಾರೆ ಎಂದರು.

ಸರ್ಕಾರ ಮೀಸಲಾತಿ ಪ್ರಕಟಿಸುವುದು ಉತ್ತಮ. ಅದು ಎಲ್ಲರಿಗೂ ಅನುಕೂಲವಾಗಲಿದೆ. ಶ್ರೀಮಠದ ಪರಮ ಭಕ್ತ ಶಿವಕುಮಾರ್ ಮುಖ್ಯಮಂತ್ರಿ ಆಗಲಿ. ಅವರು ಮುಖ್ಯಮಂತ್ರಿ ಆಗಲಿ. ಇದಕ್ಕೆ ನಮ್ಮ ಆಶೀರ್ವಾದ ಇದೆ. ಇದಕ್ಕಾಗಿ ನಾವು ಭಗವಂತನಲ್ಲಿ ಸಂಕಲ್ಪ ಕೂಡ ಮಾಡಿದ್ದೇವೆ. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂದರು.

ಕವಿಕಾವ್ಯ ಮೇಳಕ್ಕೆ ಕವನಗಳು, ಪ್ರಶಸ್ತಿಗೆ ಹೆಸರುಗಳ ಆಹ್ವಾನ

ಮಂಡ್ಯ, ಡಿ.9– ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಯುವಸೇನೆ, ಕನ್ನಡ ಕವಿಕೂಟ ವತಿಯಿಂದ ಸಂಕ್ರಾಂತಿ ಸಂಭ್ರಮ ಅಂಗವಾಗಿ ಡಾ. ಪುನೀತ್ ರಾಜಕುಮಾರ್ ಸ್ಮರಣಾರ್ಥ ಜ.21ರಂದು ನಗರದ ಕರ್ನಾಟಕ ಸಂಘದಲ್ಲಿ 33ನೇ ರಾಜ್ಯ ಮಟ್ಟದ ಕವಿಕಾವ್ಯ ಮೇಳ ಆಯೋಜಿಸಿದ್ದು, ಆಸಕ್ತರಿಂದ ಕವನಗಳನ್ನು ಹಾಗೂ ವಿವಿಧ ಪ್ರಶಸ್ತಿಗೆ ಸಾಧಕರ ಹೆಸರನ್ನು ಆಹ್ವಾನಿಸಲಾಗಿದೆ.

ಆಸಕ್ತರು 25 ಸಾಲಿನ ಎರಡು ಕವನಗಳು, ಕಿರು ಪರಿಚಯ, ಫೋಟೋ, ಮೊಬೈಲ್ ಸಂಖ್ಯೆ, ವಿಳಾಸ ಮತ್ತು ಸಾಧಕರು ಸಾಧನೆಯ ವಿವರಗಳನ್ನು ಡಿ.20ರೊಳಗೆ ಕಳುಹಿಸಬೇಕು. ವ್ಯಾಟ್ಸಪ್‌ನಲ್ಲಿ ಮೊದಲು ನೋಂದಣಿ ಮಾಡಿಕೊಂಡು, ನಂತರ ಅಂಚೆ ಮೂಲಕ ಕಳುಹಿಸಬೇಕು. ಕವನಗಳು ಯಾವುದಾದರೂ ವಿಷಯವನ್ನು ಒಳಗೊಂಡಿರಬಹುದು. ಡಾ.ಪುನೀತ್ ರಾಜಕುಮಾರ್ ಕುರಿತಿದ್ದರೆ ಆದ್ಯತೆ ನೀಡಲಾಗುವುದು. ಆಯ್ಕೆಯಾದ ಕವಿತೆಗಳನ್ನು ಪುಸ್ತಕ ರೂಪದಲ್ಲಿ ಹೊರತರಲಾಗುವುದು. 50 ಮಂದಿ ಕವಿಗಳಿಗೆ ಕವಿಗೋಷ್ಠಿಯಲ್ಲಿ ಅವಕಾಶ ಕಲ್ಪಿಸಲಾಗುವುದು. ಉತ್ತಮ ಸಾಧಕರನ್ನು 33ನೇ ರಾಜ್ಯ ಮಟ್ಟದ ಕವಿಕಾವ್ಯ ಮೇಳದ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಗುವುದು. ಕವಿಗೋಷ್ಠಿಯಲ್ಲಿ ಭಾಗವಹಿಸುವವರಿಗೆ ಕವನ ವಾಚನಕ್ಕೆ ಅವಕಾಶ, ಪ್ರಮಾಣ ಪತ್ರ, ನೆನಪಿನ ಕಾಣಿಕೆ ನೀಡಿ ಗೌರವಿಸಲಾಗುವುದು. 10 ಉತ್ತಮ ಕವನಗಳಿಗೆ ರಾಜ್ಯಮಟ್ಟದ 'ಕಾವ್ಯಶ್ರೀ' ಹಾಗೂ 10 ಮಂದಿ ಸಾಧಕರಿಗೆ 'ಸಮಾಜ ಸೇವಾರತ್ನ', 10 ಮಂದಿ ಸಾಧಕರಿಗೆ 'ಡಾ.ಪುನೀತ್ ಸಮಾಜಸೇವಾ' ಪ್ರಶಸ್ತಿ, 20 ಮಂದಿಗೆ 'ಕನ್ನಡರತ್ನ' ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಲಾಗುವುದು.

ಹೆಚ್ಚಿನ ಮಾಹಿತಿಗೆ ವಿಳಾಸ: ಎಸ್.ಕೃಷ್ಣ ಸ್ವರ್ಣಸಂದ್ರ, ಕವಿಮಿತ್ರ, ನಂ.767, ಸ್ವರ್ಣಸಂದ್ರ, ಮಂಡ್ಯ–571402ಗೆ ಕಳುಹಿಸಬೇಕು. ಅಲ್ಲದೇ ಮೊ.9448424380 ಸಂಪರ್ಕಿಸುವಂತೆ ವೇದಿಕೆ ಅಧ್ಯಕ್ಷ ಎಸ್.ಕೃಷ್ಣ ಸ್ವರ್ಣಸಂದ್ರ, ಅವರು ವಿನಂತಿಸಿದ್ದಾರೆ.

ಮೂಕ, ಕಿವುಡ ಮಕ್ಕಳಿಗೆ ಕಾಕ್ಲಿಯರ್ ಕಸಿ ಚಿಕಿತ್ಸೆ ಯಶಸ್ವಿ

ಮಿಮ್ಸ್ ನಿರ್ದೇಶಕ ಡಾ.ಮಹೇಂದ್ರ



ಮಂಡ್ಯ, ಡಿ.9– ಮೂಕ ಮತ್ತು ಕಿವುಡ ಮಕ್ಕಳಿಗೆ ಕಾಕ್ಲಿಯರ್ ಕಸಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದ್ದು, ಜಿಲ್ಲೆಯ ಮೂಕ ಹಾಗೂ ಕಿವುಡ ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಮಿಮ್ಸ್) ನಿರ್ದೇಶಕ ಡಾ.ಮಹೇಂದ್ರ ತಿಳಿಸಿದರು.

ಶನಿವಾರ ನಗರದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಇಎನ್‌ಟಿ ವಿಭಾಗ ಮಂಡ್ಯ ಹಾಗೂ ಎಒಐ ಕರ್ನಾಟಕ ಸಹಯೋಗದೊಂದಿಗೆ ಮಿಮ್ಸ್ ಆಸ್ಪತ್ರೆ ಆವರಣದಲ್ಲಿ ಆಯೋಜಿಸಿದ್ದ ಸಿಎಂಇ–2023 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇದು ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು, ಸಂಸ್ಥೆಯ ಇಎನ್‌ಟಿ ವಿಭಾಗವು 15 ಮಕ್ಕಳಿಗೆ ಕಾಕ್ಲಿಯರ್ ಕಸಿ ಶಸ್ತ್ರಚಿಕಿತ್ಸೆ ನಡೆಸುವಲ್ಲಿ ಯಶಸ್ವಿಯಾಗಿದೆ. ಈ ಶಸ್ತ್ರಚಿಕಿತ್ಸೆ ಉಚಿತವಾಗಿದ್ದು, ಬಡವರಿಗೆ ಇದು ಸಹಕಾರಿಯಾಗಲಿದೆ ಎಂದರು.

ಮಂಡ್ಯ ಸೇರಿದಂತೆ ವಿವಿಧ ಜಿಲ್ಲೆಗಳ 8 ಹೆಣ್ಣು ಮಕ್ಕಳು ಹಾಗೂ 7 ಗಂಡು ಮಕ್ಕಳು ಸೇರಿ ಒಟ್ಟು 15 ಮಕ್ಕಳಿಗೆ ಇಎನ್‌ಟಿ ತಜ್ಞ ಡಾ.ಶಂಕರ್ ಮಡಿಕೇರಿ ಮಾರ್ಗದರ್ಶನದಲ್ಲಿ ಕಾಕ್ಲಿಯರ್ ಕಸಿ ಶಸ್ತ್ರಚಿಕಿತ್ಸೆಯನ್ನು ಮಿಮ್ಸ್ ಇಎನ್‌ಟಿ ವಿಭಾಗದ ಸರ್ಜನ್‌ಗಳು ಯಶಸ್ವಿಯಾಗಿ ನಡೆಸಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಮಿಮ್ಸ್ ಇಎನ್‌ಟಿ ವಿಭಾಗದ ಮುಖ್ಯಸ್ಥ ಡಾ.ಡಿ.ರವಿ ಮಾತನಾಡಿ, ಭಾರತದಲ್ಲಿ ಜನಿಸುವ ಒಂದು ಸಾವಿರ ಮಕ್ಕಳ ಪೈಕಿ 4 ಮಕ್ಕಳಲ್ಲಿ ಹುಟ್ಟು ಕಿವುಡುತನ ಇರುತ್ತದೆ. ಈ ಶಸ್ತ್ರಚಿಕಿತ್ಸೆಯನ್ನು ಮಗು ಹುಟ್ಟಿದ 6 ವರ್ಷದೊಳಗೆ ಮಾಡುವುದು ಅಗತ್ಯವಾಗಿದೆ. ಕಿವುಡತನ ಹೊಂದಿರುವ ಮಕ್ಕಳಿಗೆ 2 ರಿಂದ 3 ವರ್ಷದೊಳಗೆ ಕಾಕ್ಲಿಯರ್ ಕಸಿ ಶಸ್ತ್ರಚಿಕಿತ್ಸೆ ಮಾಡಿಸಿದರೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ ಎಂದು ಹೇಳಿದರು.

ವೈದ್ಯ ಡಾ.ಶಂಕರ್ ಮಡಿಕೇರಿ ಮಾತನಾಡಿ, ಕಾಕ್ಲಿಯರ್ ಕಸಿ ಶಸ್ತ್ರಚಿಕಿತ್ಸೆಯನ್ನು ಖಾಸಗಿ ಆಸ್ಪತ್ರೆಗಳಲ್ಲಿ ಮಾಡಿಸುವುದಾದರೆ ಕನಿಷ್ಠ 8 ರಿಂದ 9 ಲಕ್ಷ ರೂ.ವರೆಗೆ ವೆಚ್ಚವಾಗಲಿದೆ. ಬಡವರಿಗೆ ಈ ಶಸ್ತ್ರಚಿಕಿತ್ಸೆ ಎಟುಕದಂತಾಗುತ್ತದೆ. ಇದೀಗ ಸರ್ಕಾರಿ ಆಸ್ಪತ್ರೆಗಳಲ್ಲೇ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಉಚಿತವಾಗಿ ನಡೆಸುತ್ತಿರುವುದು ಕಿವುಡುತನವಿರುವ ಬಡ ಮಕ್ಕಳಿಗೆ ಸಹಕಾರಿಯಾಗಲಿದೆ ಎಂದರು. ಕಾರ್ಯಕ್ರಮದಲ್ಲಿ ಮಿಮ್ಸ್ ನಿರ್ದೇಶಕ ಡಾ.ಮಹದೇವ್ ಪ್ರಸಾದ್, ಮಿಮ್ಸ್ ವೈದ್ಯಕೀಯ ಅಧೀಕ್ಷಕ ಡಾ.ಶ್ರೀಧರ್, ಡಾ.ರಾಮಲಿಂಗಯ್ಯ ಹಾಜರಿದ್ದರು.

ಜಲಜೀವನ್ ಮಿಷನ್ ಯೋಜನೆಯಡಿ

ಗ್ರಾಮೀಣ ಭಾಗಕ್ಕೆ ಶುದ್ಧ ಕುಡಿಯುವ ನೀರು ಪೂರೈಕೆ

ಶಾಸಕ ಹೆಚ್.ಟಿ.ಮಂಜು



ಕೆ.ಆರ್.ಪೇಟೆ, ಡಿ.9– ಜಲಜೀವನ್ ಮಿಷನ್ ಯೋಜನೆಯಡಿ ಗ್ರಾಮೀಣ ಭಾಗದ ಪ್ರತಿ ಮನೆಗಳಿಗೂ ಶುದ್ಧ ಕುಡಿಯುವ ನೀರು ಪೂರೈಕೆ ಮಾಡಲಾಗುವುದು ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ತಾಲೂಕಿನ ಅಗ್ರಹಾರ ಬಾಚಹಳ್ಳಿಯಲ್ಲಿ ಕೋಟಿ ರೂ. ವೆಚ್ಚದಲ್ಲಿ ಪಿಎಸ್‌ಎನ್ ಸಂಸ್ಥೆ ವತಿಯಿಂದ ಕೈಗೊಂಡಿರುವ ಜಲಜೀವನ್ ಮಿಷನ್ ಯೋಜನೆಯಡಿ ನೀರಿನ ಟ್ಯಾಂಕ್ ನಿರ್ಮಾಣ ಮತ್ತು ಪ್ರತಿಯೊಂದು ಮನೆಗೂ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದವರು.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಲ್ಲಿ ಜಲಜೀವನ್ ಮಿಷನ್ ಸಹ ಒಂದಾಗಿದೆ. ಗ್ರಾಮೀಣ ಭಾಗದಲ್ಲಿ ಇತ್ತೀಚಿನ ದಿನಗಳಲ್ಲಿ ಶುದ್ಧ ಕುಡಿಯುವ ನೀರಿನ ಸಮಸ್ಯೆಯಿಂದ ಜನರು ಅನಾರೋಗ್ಯಕ್ಕೆ ಒಳಗಾಗುತ್ತಿರುವುದು ಕಂಡು ಬಂದಿದೆ. ಈ ನಿಟ್ಟಿನಲ್ಲಿ ಗ್ರಾಮೀಣ ಭಾಗದ ಪ್ರತಿ ಮನೆಗೂ ಶುದ್ಧ ಕುಡಿಯುವ ನೀರು ಸರಬರಾಜು ಮಾಡುವ ಮೂಲಕ ಜನರ ಆರೋಗ್ಯ ಕಾಪಾಡುವುದು ನಮ್ಮ ಕರ್ತವ್ಯ. ಹೀಗಾಗಿ ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದ್ದು, ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಅಗ್ರಹಾರಬಾಚಹಳ್ಳಿ ಗ್ರಾಪಂ ಅಧ್ಯಕ್ಷ ಎ.ಸಿ.ದಿವಿಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪಿಡಿಓ ವಿನೋದ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಈ ಸಂದರ್ಭ ಜಿಪಂ ಇಂಜಿನಿಯರ್ ಇಲಾಖೆ ಜಲಜೀವನ್ ಮಿಷನ್ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರಶ್ಮಿ, ಸಹಾಯಕ ಇಂಜಿನಿಯರ್ ಬಿಂದು, ಪಿಎಸ್‌ಎನ್ ಸಂಸ್ಥೆ ವಿನಯ್, ಜಿಲ್ಲಾ ಜೆಡಿಎಸ್ ಉಪಾಧ್ಯಕ್ಷ ನಾಗೇಶ್, ಉಪಾಧ್ಯಕ್ಷೆ ಸುನೀತಾ, ಗ್ರಾಪಂ ಸದಸ್ಯರಾದ ಆರ್.ಶ್ರೀನಿವಾಸ್, ಆರ್.ರಮೇಶ್, ನಂಜೇಗೌಡ, ರೇವತಿ, ಹರೀಶ್, ಚನ್ನೇಗೌಡ, ಸಾವಿತ್ರಮ್ಮ, ರೇಣುಕಾ, ಸೊಸೈಟಿ ಅಧ್ಯಕ್ಷ ಎ.ಡಿ.ಮಹಾದೇವೇಗೌಡ, ಗ್ರಾಪಂ ಮಾಜಿ ಉಪಾಧ್ಯಕ್ಷ ಮಂಜೇಗೌಡ, ರೂಪೇಶಾಚಾರ್, ಶೀಳನೆರೆ ಗ್ರಾಪಂ ಸದಸ್ಯ ಸಿದ್ದೇಶ್, ಲೋಕೇಶ್, ಶಾಸಕರ ಆಪ್ತ ಸಹಾಯಕ ಪ್ರದೀಪ್, ಪ್ರತಾಪ್ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಶಂಭುಲಿಂಗೇಶ್ವರಸ್ವಾಮಿ ಜಾತ್ರಾ ಮಹೋತ್ಸವ

ಶ್ರೀರಂಗಪಟ್ಟಣ: ತಾಲೂಕಿನ ಪಾಲಹಳ್ಳಿಯಲ್ಲಿ ಕಡೇ ಕಾರ್ತಿಕ ಸೋಮವಾರ(ಡಿ.11) ಶಂಭುಲಿಂಗೇಶ್ವರ ಜಾತ್ರೆ ವಿಜೃಂಭಣೆಯಿಂದ ನಡೆಯಲಿದೆ. ಜಾತ್ರೆ ಹಿನ್ನೆಲೆಯಲ್ಲಿ ದೇವಸ್ಥಾನ ಆವರಣವನ್ನು ದೀಪಾಲಂಕಾರ, ತಳಿರು ತೋರಣಗಳಿಂದ ಅಲಂಕರಿಸಲಾಗುವುದು. ಬಳಿಕ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಸ್ವಾಮಿಯವರ ಮೆರವಣಿಗೆ ನಡೆಯಲಿದ್ದು, ಕೊನೆಯಲ್ಲಿ ಕೊಂಡೋತ್ಸವ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಭಾರತೀನಗರ ಅಭಿವೃದ್ಧಿಗೆ ಕ್ರಮ: ಶಾಸಕ ಉದಯ್

ಭಾರತೀನಗರ, ಡಿ.9– ಮದ್ದೂರು ಪಟ್ಟಣ ಮಾದರಿ ಭಾರತೀನಗರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು.


ಇಲ್ಲಿನ ಗ್ರಾಪಂ ಆವರಣದಲ್ಲಿ ಆಯೋಜಿಸಿದ್ದ ಇ–ಸ್ವತ್ತು ಆಂದೋಲನ ಉದ್ಘಾಟಿಸಿ ಮಾತನಾಡಿದ ಅವರು, ಜಿಪಂ ಸಿಇಓ, ತಾಪಂ ಇಓ ನೇತೃತ್ವದಲ್ಲಿ ಇ–ಸ್ವತ್ತು ಆಂದೋಲನಕ್ಕೆ ಕಳೆದ 15 ದಿನಗಳ ಹಿಂದೆ ಕದಲೂರು ಗ್ರಾಪಂನಲ್ಲಿ ಚಾಲನೆ ನೀಡಲಾಗಿತ್ತು. ಮದ್ದೂರು ಕ್ಷೇತ್ರದಲ್ಲೇ ಭಾರತೀನಗರ ದೊಡ್ಡ ಗ್ರಾಪಂ ಆಗಿದ್ದು, ಮದ್ದೂರಿಗಿಂತಲೂ ಎತ್ತರವಾಗಿ ಬೆಳೆಯುತ್ತಿದೆ. ಇದನ್ನು ಮತ್ತಷ್ಟು ಅಭಿವೃದ್ಧಿಗೊಳಿಸಲು ನನ್ನೊಂದಿಗೆ ಇಲ್ಲಿನ ಗ್ರಾಪಂ ಸದಸ್ಯರು, ಸ್ಥಳೀಯ ಪ್ರತಿನಿಧಿಗಳು ಕೈಜೋಡಿಸಬೇಕು ಎಂದು ತಿಳಿಸಿದರು.

ಇ–ಸ್ವತ್ತು ಆಂದೋಲನ ಈಗಾಗಲೇ ಮುಗಿಯಬೇಕಾಗಿತ್ತು. ಬೆಳಗಾವಿ ಅಧಿವೇಶನ ಇದ್ದ ಕಾರಣ ತಡವಾಗಿದೆ. ನಾನೇ ಈ ಗ್ರಾಪಂಗೆ ಖುದ್ದಾಗಿ ಬಂದು ಚಾಲನೆ ನೀಡಬೇಕೆಂಬ ಉದ್ದೇಶ ನನ್ನದಾಗಿತ್ತು ಎಂದರು.

ಇದೇ ವೇಳೆ ಸಾರ್ವಜನಿಕರ ಮತ್ತು ಸರ್ಕಾರಿ ಕಚೇರಿಗಳ ನೌಕರರಿಗೆ ಇ–ಸ್ವತ್ತು ವಿತರಣೆ ಮಾಡಲಾಯಿತು. ಗ್ರಾಪಂ ಅಧ್ಯಕ್ಷೆ ಎಂ.ಕೌಶಲ್ಯ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಇನ್ಸ್‌ಪೆಕ್ಟರ್ ಆನಂದ್, ಭಾರತೀನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಲಿಂಗೇಗೌಡ, ಉಪಾಧ್ಯಕ್ಷೆ ಸಿ.ಸುವರ್ಣ, ಮಾಜಿ ಅಧ್ಯಕ್ಷ ಎಂ.ಪಿ.ರವಿಚಂದ್ರ, ವೆಂಕಟೇಶ್, ಸೌಮ್ಯ, ಸದಸ್ಯರಾದ ಕೆ.ಟಿ.ಶ್ರೀನಿವಾಸ್, ರಾಘವೇಂದ್ರ ಕೆ.ವಿ.ಶ್ರೀನಿವಾಸ್, ಸಿದ್ದರಾಜು, ಸೌಭಾಗ್ಯಮ್ಮ, ಮಾಲಾ, ಅನಿತ, ಸವಿತ ಸೇರಿದಂತೆ ಹಲವರಿದ್ದರು.

ಲೀಲಾವತಿಯವರ ಹೆಸರು ಶಾಶ್ವತವಾಗಿ ಉಳಿಯಲು ಸರ್ಕಾರ ಮಟ್ಟದಲ್ಲಿ ಚರ್ಚಿಸಿ ತೀರ್ಮಾನ

ಡಿಸಿಎಂ ಡಿ.ಕೆ.ಶಿವಕುಮಾರ್ ಭರವಸೆ





ಬೆಂಗಳೂರು: ಹಿರಿಯ ನಟಿ ಲೀಲಾವತಿಯವರು ಕಷ್ಟಗಳನ್ನು ದಿಟ್ಟತನದಿಂದ ಎದುರಿಸಿ ಪರೋಪಕಾರ, ಸಮಾಜಸೇವೆ, ಕೃಷಿ ಚಟುವಟಿಕೆ ಮಾಡಿ ಮಾದರಿಯಾದವರು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಲೀಲಾವತಿಯವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದರು. ಲೀಲಾವತಿಯವರ ಹೆಸರು ಕನ್ನಡ ನಾಡಿನಲ್ಲಿ, ಚಿತ್ರರಂಗದಲ್ಲಿ ಶಾಶ್ವತವಾಗಿ ಉಳಿಯಲು ಏನು ಮಾಡಬೇಕೋ ಅದನ್ನು ನಮ್ಮ ಸರ್ಕಾರ ಮಾಡುತ್ತದೆ. ಈಗ ಹೇಳುವುದಿಲ್ಲ. ನಾವೆಲ್ಲರೂ ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆ ಎಂದರು.

ಅಂತಿಮ ದರ್ಶನದ ಬಳಿಕ ಮಾತನಾಡಿದ ಮಾಜಿ ಸಿಎಂ ಯಡಿಯೂರಪ್ಪ ಅವರು, ಮೇರು ನಟಿ ಲೀಲಾವತಿ ಯವರು ವಿಧಿವಶರಾಗಿದ್ದಾರೆ. ಸುಮಾರು 600ಕ್ಕೂ ಹೆಚ್ಚು ಚಿತ್ರದಲ್ಲಿ ನಟಿಸಿದ್ದಾರೆ. ಬೆಳ್ತಂಗಡಿಯ ಪುಟ್ಟ ಹಳ್ಳಿಯಲ್ಲಿ ಹುಟ್ಟಿ ಚಿತ್ರರಂಗದಲ್ಲಿ ಮಿಂಚಿದ್ದಾರೆ. ಅವರ ಕೊಡುಗೆ ಅಪಾರ. ಅವರನ್ನು ಕಳೆದುಕೊಂಡು ಕನ್ನಡ ನಾಡು ಬಡವಾಗಿದೆ. ಅವರ ಸಾವಿನ ನೋವು ಭರಿಸುವ ಶಕ್ತಿ ಕುಟುಂಬಕ್ಕೆ ನೀಡಲಿ ಎಂದರು.

ನನ್ನ 2ನೇ ತಾಯಿಯ ರೂಪದಲ್ಲಿ ನೋಡಿದ್ದೀನಿ



ಬೆಂಗಳೂರು: ನಟಿ ಲೀಲಾವತಿ ಅವರ ನಿಧನಕ್ಕೆ ಹಿರಿಯ ನಟ ಅನಂತ್‌ನಾಗ್ ಸಂತಾಪ ಸೂಚಿಸಿದ್ದಾರೆ. ಲೀಲಾವತಿ ಅವರನ್ನು ನನ್ನ ಎರಡನೇ ತಾಯಿಯ ರೂಪದಲ್ಲಿ ನೋಡಿದ್ದೀನಿ ಎಂದು ಅನಂತ್‌ನಾಗ್ ಅವರು ಲೀಲಾವತಿ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ. ಅವರೊಂದಿಗಿನ ಒಡನಾಟದ ದಿನಗಳನ್ನ ಸ್ಮರಿಸಿದ್ದಾರೆ. ನನ್ನ ಬದುಕಿನಲ್ಲಿ ಲೀಲಾವತಿ ಅವರನ್ನ ನನ್ನ ಎರಡನೇ ತಾಯಿಯ ರೂಪದಲ್ಲಿ ನೋಡಿದ್ದೀನಿ. ಅದೇ ರೀತಿಯ ಪ್ರೀತಿ ಮತ್ತು ಗೌರವವನ್ನು ಕೊಟ್ಟಿದ್ದೀನಿ. ಅವರ ಜೊತೆ ಸುಮಾರು 50 ವರ್ಷಗಳಿಂದ ನಟಿಸಿದ ನೆನಪುಗಳಿವೆ ಎಂದಿದ್ದಾರೆ ಅನಂತ್‌ನಾಗ್. ಕೆಲದಿನಗಳಿಂದ ಅವರಿಗೆ ಅನಾರೋಗ್ಯ ಎಂದು ತಿಳಿದಾಗ, ನಾನು ಮತ್ತು ಗಾಯಿತ್ರಿ ಅವರ ಮನೆಗೆ ಲೀಲಾವತಿ ಅಮ್ಮನವರೊಂದಿಗೆ 4–5 ಗಂಟೆಗಳ ಕಾಲ ಕಳೆದಿದ್ದೇನೆ ಎಂದು ಮಾತನಾಡಿದ್ದಾರೆ.

ಅಜ್ಜಿ ಬಗ್ಗೆ ಮೊಮ್ಮಗ ಯುವರಾಜ್ ಪ್ರತಿಕ್ರಿಯೆ

ಬೆಂಗಳೂರು: ಅಜ್ಜಿಯ ಜೊತೆ ಒಡನಾಟ ಚೆನ್ನಾಗಿತ್ತು. ನಮ್ಮ ಅಜ್ಜಿ ಆತ್ಮಕ್ಕೆ ಶಾಂತಿ ಸಿಗಲಿ. ಕೊನೆಯದಾಗಿ ಕೆಲ ದಿನಗಳ ಹಿಂದೆ ಮನೆಗೆ ಬಂದಾಗ ಅಜ್ಜಿಯನ್ನು ನೋಡಿದ್ದೆ. ನಾನು ದೂರ ಹೋಗುವವರೆಗೆ ನನ್ನನ್ನ ನೋಡಿದ್ದರು ಎಂದು ಕಡೆಯ ಭೇಟಿಯ ಬಗ್ಗೆ ಮೊಮ್ಮಗ ಯುವರಾಜ್ ಸ್ಮರಿಸಿದ್ದಾರೆ. ಅಂತ್ಯಕ್ರಿಯೆ ಮುಕ್ತಾಯದ ಬಳಿಕ ವಿನೋದ್‌ರಾಜ್ ಮಾಧ್ಯಮಕ್ಕೆ ಪ್ರತಿಕ್ರಿಯಿಸಿ, ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ಮುಗಿದಿದೆ. ನಾಳೆ ಹಾಲು ತುಪ್ಪ ಇರಲಿದೆ. ಇಡೀ ರಾಜ್ಯದ ಜನತೆಗೆ ಸರ್ಕಾರಕ್ಕೆ ನಮನ ಸಲ್ಲಿಸುತ್ತೇವೆ ಎಂದರು.

ಲೀಲಾವತಿ ಮಗನಾಗಿ ನಟಿಸಿದ್ದೇ ನನ್ನ ಭಾಗ್ಯ



ಬೆಂಗಳೂರು: ನಟಿ ಲೀಲಾವತಿ ಅವರಿಗೆ ಹಿರಿಯ ನಟ ದ್ವಾರಕೀಶ್ ಅಂತಿಮ ನಮನ ಸಲ್ಲಿಸಿದ್ದಾರೆ. ಲೀಲಾವತಿ ಅವರ ಜೊತೆ ನಾನು ಮಗನಾಗಿ ನಟಿಸಿದ್ದೇ ನನ್ನ ಭಾಗ್ಯ ಎಂದಿದ್ದಾರೆ. ವಿನೋದ್ ರಾಜ್– ಲೀಲಾವತಿ ದೇವರು ಮಾಡಿಸಿದ ತಾಯಿ, ಮಗ ಎಂದು ಅವರ ಬಾಂಧವ್ಯದ ಬಗ್ಗೆ ದ್ವಾರಕೀಶ್ ಮಾತನಾಡಿದ್ದಾರೆ.

ಲೀಲಾವತಿ ಮಾಡಿದ ಪಾತ್ರವೆಲ್ಲವೂ ಶ್ರೇಷ್ಠ ಪಾತ್ರವಾಗಿದೆ. ನಾಯಕಿ ಪಾತ್ರವಲ್ಲ, ಪೋಷಕ ಪಾತ್ರದಲ್ಲೂ ಲೀಲಾವತಿ ಜೀವ ತುಂಬಿದ್ದಾರೆ. ಡಾ.ರಾಜ್‌ಕುಮಾರ್–ಲೀಲಾವತಿ ಜೋಡಿಯೆಂದರೆ ಅತ್ಯಂತ ಜನಪ್ರಿಯ ಜೋಡಿ. ಆ ಜೋಡಿಯ ಹಾಗೇ ಮತ್ತೆ ಸಿನಿಮಾಗಳು ಬರಲೇ ಇಲ್ಲ. 60ರ ದಶಕದಲ್ಲಿ ಅವರು ನಟಿಸಿದ ಸಿನಿಮಾವೆಲ್ಲವೂ ಯಶಸ್ವಿಯಾಗಿವೆ.


ಕನ್ಯಾ ರತ್ನ, ಮಲ್ಲಿ ಮದುವೆ, ಭಕ್ತ ಕುಂಬಾರ, ನಾ ನಿನ್ನ ಮರೆಯಲಾರೆ ಸೇರಿದಂತೆ ಸಾಕಷ್ಟು ಸಿನಿಮಾಗಳಲ್ಲಿ ಲೀಲಾವತಿ ನಟಿಸಿದ್ದಾರೆ. ಲೀಲಾವತಿ ಮಗನಾಗಿ ನಟಿಸಿದ್ದು ನನ್ನ ಭಾಗ್ಯ, ಅವರ ಜೊತೆ ಎರಡು ಸಿನಿಮಾಗಳಲ್ಲಿ ನಟಿಸಿದ್ದೇನೆ. ಮೊದಲ ಸಿನಿಮಾ 'ಡ್ಯಾನ್ಸ್ ರಾಜ ಡ್ಯಾನ್ಸ್', ವಿನೋದ್ ರಾಜ್ ಜೊತೆ ಮಾಡಿದೆ. 'ಕೃಷ್ಣ ನೀ ಕುಣಿದಾಗ' ಸಿನಿಮಾದಲ್ಲಿ ನಟಿಸಿ ದ್ದೀನಿ. ಲೀಲಾವತಿ ಮತ್ತು ವಿನೋದ್‌ರಾಜ್ ದೇವರು ಮಾಡಿಸಿದ ತಾಯಿ, ಮಗ. ಇಬ್ಬರೂ ಜೊತೆಯಾಗಿಯೇ ಇರೋರು, ಒಬ್ಬರನ್ನು ಬಿಟ್ಟು ಇನ್ನೊಬ್ಬರು ಇರುತ್ತಿರಲಿಲ್ಲ ಎಂದು ದ್ವಾರಕೀಶ್ ಮಾತನಾಡಿ ದ್ದಾರೆ. ಇಂತಹ ಸಂದರ್ಭದಲ್ಲಿ ವಿನೋದ್‌ರಾಜ್‌ಗೆ ದೇವರು ಧೈರ್ಯ ಕೊಟ್ಟು ಕಾಪಾಡಲಿ ಎಂದು ಕೇಳಿಕೊಳ್ಳುತ್ತೇನೆ ಎಂದಿದ್ದಾರೆ.

ರವೀಂದ್ರ ಕಲಾಕ್ಷೇತ್ರಕ್ಕೆ ಆಗಮಿಸಿದ ನಟ, ನಿರ್ದೇಶಕ ಎಸ್.ನಾರಾಯಣ್, ನಟಿ ಶ್ರುತಿ, ಸುಧಾರಾಣಿ, ಶ್ರೀನಾಥ್, ಪೂಜಾ ಗಾಂಧಿ, ಮಾಳವಿಕಾ ಅವಿನಾಶ್, ಉಪೇಂದ್ರ ಸೇರಿದಂತೆ ಹಲವರು ಲೀಲಾವತಿ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದಿದ್ದಾರೆ.

ಕಾವೇರಿಯ ರಮ್ಯ ನೋಟ ನೀವೂ ನೋಡ ಬನ್ನಿ...!

ದಸರಾ ವಸ್ತುಪ್ರದರ್ಶನದಲ್ಲಿ ಜೀವನದಿಯ ಸುಂದರ ದೃಶ್ಯ ವೈಭವ

● ಮೋಹನ್ ಕಾಯಕ



> ಪ್ರತಿಯೊಬ್ಬರಿಗೂ ಅತ್ಯಂತ ಅಗತ್ಯವಾದ ನೀರಿನ ಸದ್ಬಳಕೆ ಬಗ್ಗೆ ಅರಿವಿರಬೇಕು. ಮುಖ್ಯವಾಗಿ ರೈತರು ಬೇಸಾಯಕ್ಕೆ ಯಾವ ವಿಧಾನದಲ್ಲಿ ನೀರನ್ನು ಬಳಸಿದರೆ ಸೂಕ್ತವೆಂಬುದನ್ನು ತಿಳಿಯುವುದು ಅವಶ್ಯವಾಗಿದೆ. ಈ ದೃಷ್ಟಿಯಲ್ಲಿ ಪೂರಿಗಾಲಿ ಸಮಗ್ರ ಹನಿ ಮತ್ತು ತುಂತುರು ನೀರಾವರಿ ಯೋಜನೆ ಕುರಿತು ತಿಳಿಸುವ ಮೂಲಕ ಜಾಗೃತಿ ಮೂಡಿಸುವ ಪ್ರಯತ್ನ ಮಾಡಲಾಗಿದೆ. ಹಾಗೆಯೇ 'ಕಾವೇರಿ'ನದಿಯ ಜಲಾನಯನ ಪ್ರದೇಶ ಒಂದು ಪಕ್ಷಿ ನೋಟವನ್ನು ಅನಾವರಣಗೊಳಿಸಲಾಗಿದೆ.
>
> – ಎಂ.ವೇಣುಗೋಪಾಲ್, ಸಹಾಯಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ



ಮೈಸೂರು, ಡಿ.9– 'ಕನ್ನಡ ನಾಡಿನ ಜೀವನದಿ', 'ಪಾವನೆ ಪುಣ್ಯ ನದಿ', 'ಧನ್ಯ ನದಿ', 'ದಕ್ಷಿಣ ಗಂಗೆ', 'ಮಮತೆಯ ಮಾತೆ' ಎಂದೆಲ್ಲಾ ಕರೆಸಿಕೊಳ್ಳುವ 'ಕಾವೇರಿ'ಯ ಜಲಾನಯನ ಪ್ರದೇಶದ ರಮಣೀಯ ದೃಶ್ಯ... ಕನ್ನಂಬಾಡಿ ಅಣೆಕಟ್ಟೆಯ ವೈಭವ ಕಣ್ತುಂಬಿಕೊಳ್ಳಬೇಕಿದ್ದರೆ ಹತ್ತಿರದ ದಸರಾ ವಸ್ತುಪ್ರದರ್ಶನಕ್ಕೊಮ್ಮೆ ಭೇಟಿ ನೀಡಿ...!

ಹೌದು! ಹಳೇ ಮೈಸೂರು ಭಾಗಕ್ಕೆ 'ಕಾವೇರಿ' ನದಿ ಎಷ್ಟು ಮುಖ್ಯವೆಂಬುದು ಪ್ರತಿಯೊಬ್ಬರಿಗೂ ತಿಳಿದಿದೆ. 'ಕಾವೇರಿ' ತುಂಬಿ ಹರಿದರಷ್ಟೇ ಸಂತೋಷದ ಸಕ್ಕರೆ ಎಂಬ ಹಾಡಿನ ಸಾಲು ಕನ್ನಡಿಗರ ಎದೆಯಾಳದಲ್ಲಿ ಬೇರೂರಿದೆ. ಇದರ ನಡುವೆ ಅನೇಕ ವರ್ಷಗಳಿಂದ 'ಕಾವೇರಿ' ನದಿ ನೀರಿನ ಹಂಚಿಕೆ ವಿವಾದ, ಹೋರಾಟ, ಪ್ರತಿಭಟನೆಗಳು ಸಾಕ್ಷಿಯಾಗುತ್ತಿದೆ. ಈ ವರ್ಷವಂತೂ ಬರಗಾಲದ ಬೇಗೆ ತಣಿಸಲು 'ಕಾವೇರಿ' ನೀರನ್ನು ತಮಿಳುನಾಡಿಗೆ ಹರಿಸಲೇ ಬಾರದೆಂಬ ಕೂಗು ರಾಷ್ಟ್ರವ್ಯಾಪಿ ಆವರಿಸಿದೆ. ಇಷ್ಟೆಲ್ಲಾ ಜನಮಾನಸಗೊಂಡ 'ಕಾವೇರಿ'ಯ ವಿಶಾಲ ಜಲಾನಯನ ಪ್ರದೇಶವನ್ನು ಒಮ್ಮೆಗೆ ಕಣ್ತುಂಬಿಕೊಳ್ಳುವ ಸದವಕಾಶ ದಸರಾ ವಸ್ತುಪ್ರದರ್ಶನದಲ್ಲಿ ದೊರಕಿದೆ.

ಹಚ್ಚ ಹಸಿರಿನಿಂದ ಕೂಡಿರುವ 'ಕಾವೇರಿ' ಜಲಾನಯನ ಪ್ರದೇಶದ ಜೊತೆಗೆ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಅವರ ಶ್ರಮದ ಬಳುವಳಿಯಾದ 'ಕೃಷ್ಣರಾಜ ಸಾಗರ ಜಲಾಶಯ'(ಕನ್ನಂಬಾಡಿ ಅಣೆಕಟ್ಟೆ) ವೈಭವ ನೋಡುವ ಅವಕಾಶವನ್ನು ಸಮೀಪದಲ್ಲೇ ನೀಡಲಾಗಿದೆ.

ಕಾವೇರಿ ನೀರಾವರಿ ನಿಗಮ ನಿಯಮಿತ ಹಾಗೂ ಜಲಸಂಪನ್ಮೂಲ ಇಲಾಖೆ ವತಿಯಿಂದ ದಸರಾ ವಸ್ತುಪ್ರದರ್ಶನ ಆವರಣದಲ್ಲಿ 100*80 ಅಡಿ ವಿಸ್ತೀರ್ಣದಲ್ಲಿ ನಿರ್ಮಾಣ ಮಾಡಿರುವ 'ಕೃಷ್ಣರಾಜ ಸಾಗರ ಅಣೆಕಟ್ಟು' ಮಾದರಿ ಮಳಿಗೆ ನೆಚ್ಚಿನ ಆಕರ್ಷಣೆಯಾಗಿದೆ. ಸುಮಾರು 67 ಲಕ್ಷ ರೂ.ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಮಳಿಗೆಯೊಳಗೆ 'ಕಾವೇರಿ' ನದಿಯ ವಿಶಾಲ ಜಲಾನಯನ ಪ್ರದೇಶದ ರಮಣೀಯ ದೃಶ್ಯ ಹಾಗೂ 'ಪೂರಿಗಾಲಿ ಸಮಗ್ರ ಹನಿ ಮತ್ತು ತುಂತುರು ನೀರಾವರಿ ಯೋಜನೆ' ಕುರಿತು ಮಾಹಿತಿ ನೀಡಲಾಗಿದೆ.

ಕಾವೇರಿ ನೀರಾವರಿ ನಿಗಮ ನಿಯಮಿತ ಕಾರ್ಯಪಾಲಕ ಇಂಜಿನಿಯರ್ ಭಾಸ್ಕರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಯಶವಂತೇಗೌಡ, ಸಹಾಯಕ ಇಂಜಿನಿಯರ್‌ಗಳಾದ ಎಂ.ವೇಣುಗೋಪಾಲ್, ಯತೀಶ್ ಕುಮಾರ್ ಅವರ ಮಾರ್ಗದರ್ಶನ, ಕಲಾವಿದ ರಂಗಸ್ವಾಮಿ ಕೈಚಳಕದಲ್ಲಿ ನಿರ್ಮಿಸಿರುವ ಸುಮಾರು 35 ಅಡಿ ಎತ್ತರದ 'ಕೃಷ್ಣರಾಜ ಸಾಗರ ಅಣೆಕಟ್ಟು' ಮಾದರಿ ಮಳಿಗೆ ನಯನ ಮನೋಹರವಾಗಿದ್ದು, ಕಾವೇರಿ ತಾಯಿ ಕೊಡದಲ್ಲಿ ನೀರು ಸುರಿಯುತ್ತಿರುವ ಪ್ರತಿಮೆ ಹಾಗೂ ಅಣೆಕಟ್ಟೆಯ ಎರಡು ಕಡೆಯಲ್ಲಿ ಕಲ್ಲು ಬಂಡೆಗಳ ಮೇಲೆ ಹರಿಯುವ ನೀರಿನ ಜರಿ ನೋಡುಗರ ಗಮನ ಸೆಳೆಯುತ್ತಿದೆ. ಅಣೆಕಟ್ಟೆಯ ಬಾಗಿಲುಗಳಿಂದ ಹರಿಯುವ ನೀರು, ಬೃಂದಾವನದ ಕಾರಂಜಿ ಪ್ರವಾಸಿಗರ ಸೆಲ್ಫಿ ಸ್ಪಾಟ್ ಆಗಿ ಮಾರ್ಪಾಡಾಗಿದೆ. ಹಾಗೆಯೇ ಎರಡು ಬದಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಅವರ ಪುತ್ಥಳಿ ವಿಶೇಷ ಆಕರ್ಷಣೆಯಾಗಿದೆ.

ರಮಣೀಯ ದೃಶ್ಯ: ಕನ್ನಂಬಾಡಿ ಅಣೆಕಟ್ಟೆ ಮಾದರಿ ಮಳಿಗೆ ಎದುರು ಫೋಟೊ ಕ್ಲಿಕ್ಕಿಸಿಕೊಂಡು ಮಳಿಗೆಯೊಳಗೆ ಪ್ರವೇಶ ಮಾಡಿದರೆ ರಮಣೀಯ ದೃಶ್ಯ ನೋಡಬಹುದಾಗಿದೆ. 81155 ಚದರ ಕಿಲೋ ಮೀಟರ್ 'ಕಾವೇರಿ' ಜಲಾನಯನ ಪ್ರದೇಶ(ದೇಶದ ಪ್ರತಿಶತ 2.71 ರಷ್ಟು ಭೌಗೋಳಿಕ ಪ್ರದೇಶ)ವನ್ನು ಒಮ್ಮೆಗೆ ಪ್ರತ್ಯೇಕ್ಷವಾಗಿ(ನದಿ ನೀರು ಹರಿಯುತ್ತಿರುವಂತೆಯೇ) ಕಣ್ತುಂಬಿಕೊಳ್ಳಬಹುದು. ಮುಖ್ಯವಾಗಿ ರಾಜ್ಯದಲ್ಲಿನ 36240 ಚ.ಕಿ.ಮೀ ಜಲಾನಯನ ಪ್ರದೇಶವನ್ನು ಸಂಕ್ಷಿಪ್ತವಾಗಿ ತೋರಿಸಲಾಗಿದ್ದು, 'ಕಾವೇರಿ'ನದಿ ಹರಿಯುವ ಮಾರ್ಗ, ಪ್ರಮುಖ ಉಪ ನದಿಗಳು(ಹೇಮಾವತಿ, ಕಬಿನಿ, ಸುವರ್ಣಾವತಿ, ಲಕ್ಷ್ಮಣ ತೀರ್ಥ, ಶಿಂಷಾ ಮತ್ತು ಅರ್ಕಾವತಿ), ಪ್ರಮುಖ ಅಣೆಕಟ್ಟುಗಳು(ತಾರಕ ಅಣೆಕಟ್ಟು, ಕಬಿನಿ, ನುಗು, ಚಿಕ್ಲಿಹೊಳೆ, ಹಾರಂಗಿ, ಹೇಮಾವತಿ, ಯಗಚಿ, ಕೃಷ್ಣರಾಜ ಸಾಗರ, ಮಂಚನಬೆಲೆ, ಮಾರ್ಕೋನಹಳ್ಳಿ, ಸುವರ್ಣಾವತಿ, ಕಣ್ವ, ಭವಾನಿಸಾಗರ, ಭವಾನಿ, ಗ್ಲೆನ್ ಮಾರ್ಗನ್ ಫೋರ್ಬೆ ಹಾಗೂ ಮೆಟ್ಟೂರು ಅಣೆಕಟ್ಟು ಮಾದರಿಗಳು) ಹಾಗೂ ಅವುಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಿಳಿದುಕೊಳ್ಳಬಹುದಾಗಿದೆ.

ಪೂರಿಗಾಲಿ ಸಮಗ್ರ ಹನಿ ಮತ್ತು ತುಂತುರು ನೀರಾವರಿ ಯೋಜನೆ: ಮಳಿಗೆಯೊಳಗೆ ಒಂದು ಬದಿಯಲ್ಲಿ 'ಕಾವೇರಿ' ನದಿ ಜಲಾಯನ ಪ್ರದೇಶದ ದೃಶ್ಯ ವಿನ್ಯಾಸವಿದ್ದರೆ, ಮತ್ತೊಂದು ಬದಿಯಲ್ಲಿ ಮಹತ್ವಾಕಾಂಕ್ಷಿ ಯೋಜನೆಯಾದ ಪೂರಿಗಾಲಿ ಸಮಗ್ರ ತುಂತುರು ನೀರಾವರಿ ಯೋಜನೆಯ ಪಕ್ಷಿನೋಟವಿದೆ. ವಿಶ್ವೇಶ್ವರಯ್ಯ ನಾಲಾ ಜಾಲದ ಕೊನೆಯಲ್ಲಿರುವ ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿಗೆ ಸೇರಿದ 51 ಗ್ರಾಮಗಳ 25327 ಎಕರೆ ಪ್ರದೇಶಕ್ಕೆ ಹನಿ ಹಾಗೂ ತುಂತುರು ನೀರಾವರಿ ಮೂಲಕ ನಿಯತಕಾಲಿಕವಾಗಿ ಅಗತ್ಯ ನೀರು ಪೂರೈಕೆ ಮಾಡುವ ಹಾಗೂ 16 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಇದಾಗಿದೆ. ಸದ್ಯ ಈ ಯೋಜನೆಯಡಿ ಕೆರೆಗಳಿಗೆ ಮಾತ್ರ ನೀರು ತುಂಬಿಸಲಾಗುತ್ತಿದ್ದು, ಹನಿ ಮತ್ತು ತುಂತುರು ನೀರಾವರಿ ಪದ್ಧತಿ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಕಾವೇರಿ ನೀರಾವರಿ ನಿಗಮ ನಿಯಮಿತ ಸಹಾಯಕ ಇಂಜಿನಿಯರ್ ಎಂ.ವೇಣುಗೋಪಾಲ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ತುಂಬಾ ಚೆನ್ನಾಗಿದೆ, ಸಮಗ್ರ ಅರಿವು: 'ಕೃಷ್ಣರಾಜ ಸಾಗರ ಅಣೆಕಟ್ಟು' ಮಾದರಿ ಮಳಿಗೆ ತುಂಬಾ ಚೆನ್ನಾಗಿದ್ದು, ಸಮಗ್ರ ಮಾಹಿತಿ ನೀಡಿದ್ದಾರೆ. ಅಲ್ಲದೆ ಹನಿ ಮತ್ತು ತುಂತುರು ನೀರಾವರಿ ಬಗ್ಗೆಯೂ ಮಾಹಿತಿ ನೀಡಿರುವುದು ರೈತರಿಗೆ ಅನುಕೂಲವಾಗಲಿದೆ. ಕಾವೇರಿ ಕನ್ನಡ ನಾಡಿನ ಜೀವನದಿ ಎಂಬುದನ್ನು ಸಾಕ್ಷೀಕರಿಸಲಾಗಿದೆ ಎಂದು ಮೈಸೂರಿನ ಉದಯಗಿರಿ ನಿವಾಸಿ ಶಫಿ ಅಹಮದ್, ಕೆ.ಸಿ.ಲೇಔಟ್‌ನ ಅಮೂಲ್ಯ ತಿಳಿಸಿದರು.

ಸೃಜನಾತ್ಮಕ ಚಿಂತನೆ ಮೂಡಿಸುವ ಶೈಕ್ಷಣಿಕ ವಸ್ತುಪ್ರದರ್ಶನ




ಮೈಸೂರು, ಡಿ. 9–ವಿಜ್ಞಾನ, ತಂತ್ರಜ್ಞಾನ ಮತ್ತು ಕಲಾ ಪ್ರದರ್ಶನವು ಮಕ್ಕಳಲ್ಲಿ ಸೃಜನಾತ್ಮಕ ಚಿಂತನೆ ಮೂಡುವಂತೆ ಮಾಡುತ್ತದೆ ಎಂದು ಶಿಕ್ಷಣ ಸಂಯೋಜನಾಧಿಕಾರಿ ಮನೋಹರ್ ಹೇಳಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಪ್ರಾಯೋಗಿಕ ಪ್ರಾಥಮಿಕ ಶಾಲೆಯಲ್ಲಿ 2023–24ನೇ ಸಾಲಿನ ಶೈಕ್ಷಣಿಕ ವಸ್ತುಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಸ್ತುಪ್ರದರ್ಶನದಲ್ಲಿ ಮಕ್ಕಳಲ್ಲಿರುವ ಸುಪ್ತ ಪ್ರತಿಭೆಗಳನ್ನು ಹೊರತರುವುದಕ್ಕಾಗಿ, ಕಲಿಕೆಯಲ್ಲಿ ಆಸಕ್ತಿಯನ್ನು ಮತ್ತು ನಾವೀನ್ಯತೆಯನ್ನು ಉಂಟುಮಾಡಲು ಈ ಶೈಕ್ಷಣಿಕ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಕಲೆ, ವಿಜ್ಞಾನ, ಪ್ರಾಚೀನ ವಸ್ತು, ಕರಕುಶಲತೆ, ಚಿತ್ರಕಲೆ ಹೀಗೆ ಹತ್ತು ಹಲವು ವಿಷಯಗಳನ್ನೊಳಗೊಂಡಿತ್ತು. ವಿದ್ಯಾರ್ಥಿಗಳು ವಿವಿಧ ಮಾದರಿಗಳನ್ನು ತಯಾರಿಸಿತರುವುದರ ಜೊತೆಗೆ ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲ ಅತಿಥಿಗಳಿಗೆ, ಸಿಬ್ಬಂದಿ ವರ್ಗದವರಿಗೆ ಮತ್ತು ಪೋಷಕರಿಗೆ ಅಚ್ಚುಕಟ್ಟಾಗಿ ಶಾಲೆಯ ಮಕ್ಕಳು ವಿವರಣೆಯನ್ನು ನೀಡಿರುವುದು ಸಂತಸ ಉಂಟಾಗುತ್ತದೆ ಎಂದು ಹೇಳಿದರು. ಶಿಕ್ಷಣ ಸಮುಚ್ಚಯ ಸಂಪನ್ಮೂಲ ಅಧಿಕಾರಿ ಪ್ರಕಾಶ್, ಶಾಲೆಯ ಮುಖ್ಯ ಶಿಕ್ಷಕ ಗುರುಸ್ವಾಮಿ, ಬೋಧಕ, ಬೋಧಕೇತರ ಸಿಬ್ಬಂದಿ ಹಾಜರಿದ್ದರು.



ಮೈಸೂರಿನ ದಕ್ಷಿಣ ಕೈಗಾರಿಕಾ ಪ್ರದೇಶದಲ್ಲಿರುವ ಕೆನರಾ ಬ್ಯಾಂಕ್‌ನ ಶಾಖಾ ಕಚೇರಿ ನೂತನ ಕಟ್ಟಡಕ್ಕೆ ಸ್ಥಳಾಂತರಗೊಂಡಿದ್ದು, ಅದನ್ನು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಉದ್ಘಾಟಿಸಿದರು. ಈ ವೇಳೆ ಕೆನರಾ ಬ್ಯಾಂಕ್ ಡೆಪ್ಯುಟಿ ಜನರಲ್ ಮ್ಯಾನೇಜರ್ ಪ್ರಮೋದ್ ಶರಾಫ್, ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಎಸ್. ರಾಜಶೇಖರ್ ಮತ್ತಿತರರು ಉಪಸ್ಥಿತರಿದ್ದರು.



ಖಾಸಗಿ ಕಾರ್ಯಕ್ರಮದ ನಿಮಿತ್ತ ಮೈಸೂರಿಗೆ ಆಗಮಿಸಿದ್ದ ಗೃಹಮಂತ್ರಿ ಡಾ.ಜಿ. ಪರಮೇಶ್ವರ್ ಅವರನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿನಂದಿಸಿದರು. ಈ ವೇಳೆ ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್, ಭೈರಪ್ಪ, ಹರೀಶ್ ಉಪಸ್ಥಿತರಿದ್ದರು.



2023–24ನೇ ಸಾಲಿನ ದಕ್ಷಿಣ–ಪೂರ್ವ ವಲಯ ಪುರುಷರ ಅಂತರ ವಿಶ್ವವಿದ್ಯಾನಿಲಯ ಫುಟ್ಬಾಲ್ ಪಂದ್ಯಾವಳಿಯು ಡಿ. 11ರಿಂದ 15ರವರೆಗೆ ಮಂಗಳೂರು ಯೆನೆಪೋಯ್ ವಿಶ್ವವಿದ್ಯಾನಿಲಯದಲ್ಲಿ ನಡೆಯಲಿದೆ. ಸದರಿ ಪಂದ್ಯಾವಳಿಗೆ ಮೈಸೂರು ವಿಶ್ವವಿದ್ಯಾನಿಲಯದ ಪುರುಷರ ಫುಟ್‌ಬಾಲ್ ತಂಡ ಭಾಗವಹಿಸಲಿದೆ. ಚಿತ್ರದಲ್ಲಿ (ನಿಂತಿರುವವರು–ಎಡದಿಂದ) ಚೌ ಮೇಥೋ ಸಿಂಗಿ, ಶೇಕ್ ಅರ್ಬಾಜ್, ಗಗನ್ ಆರ್ ಪಟೇಲ್ , ಅಹ್ಮದ್ ಉನ್ನೈಸ್, ಅವಿನಾಶ.ಎನ್, ಉದಯಕುಮಾರ್, ರೂಪೇಶ್ ಎಂ ಎಸ್, ಮುಬಾಸಿರ್, ಕಿಯಾಂಗ್ ಚಿಂಗ್ ಮೊಂಗ್, ಸುಜಿತ್ ಕೆ, ಮೊಹ್ಮದ್ ರೈಸ್, ಮೊಹ್ಮದ್ ಅಜ್ಮಲ್ (ಕುಳಿತಿರುವವರು): ಸೋಮೇಶ್ ಎಂಆರ್ (ನಾಯಕ), ಡಾ.ಸಿ. ವೆಂಕಟೇಶ್, ನಿರ್ದೇಶಕರು, ಮಂಜು.ಎಸ್ (ವ್ಯವಸ್ಥಾಪಕರು) ಶಾಶ್ವತ್. ಎಂ (ತರಬೇತುದಾರರು) ಕಾಣಬಹುದು.



ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವದ ಅಂಗವಾಗಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಮೈಸೂರು ನಗರದ ಅನಂತಗೀತ ವಿದ್ಯಾಲಯದ ವಿದ್ಯಾರ್ಥಿಗಳಾದ 9 ನೇ ತರಗತಿ ಪ್ರೇರಣ್ ಎಂ ಮತ್ತು 10ನೇ ತರಗತಿ ಕುಶಾಲ್ ರಾಜ್ ಭಾಗವಹಿಸಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ವಿಜೇತ ವಿದ್ಯಾರ್ಥಿಗಳನ್ನು ಮೈಸೂರು ಜಿಲ್ಲೆಯ ಉಪ ನಿರ್ದೇಶಕ ಪಾಂಡು, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಅರುಣ್ ಕುಮಾರ್, ಶಾಲೆಯ ಉಪಪ್ರಾಂಶುಪಾಲ ಹರದೂರು ಲೋಕೇಶ್ ಅಭಿನಂದಿಸಿದರು.



2023–24ನೇ ಸಾಲಿನ ದಕ್ಷಿಣ–ಪಶ್ಚಿಮ ವಲಯ ಪುರುಷರ ಅಂತರ ವಿಶ್ವವಿದ್ಯಾನಿಲಯ ಆರ್ಚರಿ ಪಂದ್ಯಾವಳಿಯು ಡಿ.19 ರಿಂದ 22 ರವರೆಗೆ ಪಂಜಾಬ್‌ನ ಗುರುಕಾಶಿ ವಿಶ್ವವಿದ್ಯಾನಿಲಯದಲ್ಲಿ ನಡೆಯಲಿದೆ. ಸದರಿ ಪಂದ್ಯಾವಳಿಗೆ ಮೈಸೂರು ವಿಶ್ವವಿದ್ಯಾನಿಲಯದ ಪುರುಷರ ಆರ್ಚರಿ ತಂಡ ಭಾಗವಹಿಸಲಿದೆ. ಚಿತ್ರದಲ್ಲಿ (ನಿಂತಿರುವವರು) : ಸುಜಿತ್ ಕೆ.ಎಸ್, ಅರ್ಜುನ್ ಕೆ ಎ, ಅರುಣ ಜಿ.ಎಂ, ಅಭಿಷೇಕ್ ಕೆ, ನರೇಶ್ ಆರ್, ರಂಜಿತ್ ಕುಮಾರ್, ಯಶವಂತ ನಾಯಕ. (ಕುಳಿತಿರುವವರು) ರಘು ವಿ, (ತರಬೇತುದಾರರು) ಡಾ.ಸಿ. ವೆಂಕಟೇಶ್, ನಿರ್ದೇಶಕರು, ಕಿರಣ್ ರಾವತ್ ಎಸ್ (ವ್ಯವಸ್ಥಾಪಕರು) ಚಂದು.ಡಿ.ಕೆ, (ನಾಯಕ) ಅವರನ್ನು ಕಾಣಬಹುದು.

ಸೈಬರ್ ಕ್ರೈಂ, ಸರಗಳ್ಳತನದಲ್ಲಿ ಮಹಿಳೆಯರೇ ಬಲಿಪಶುಗಳಾಗುತ್ತಿದ್ದಾರೆ

● ಅಡಿಷನಲ್ ಎಸ್ಪಿ ಡಾ.ಬಿ.ಎನ್.ನಂದಿನಿ ವಿಷಾದ ● ಭ್ರೂಣ ಹತ್ಯೆ ಪ್ರಕರಣದಲ್ಲಿ ಪುರುಷರ ಹೊಣೆ ಮಾಡುವುದು ಸರಿಯಲ್ಲ

ಮೈಸೂರು, ಡಿ.9(ಎಸ್‌ಪಿಎನ್)–ಇತ್ತೀಚಿನ ದಿನಗಳಲ್ಲಿ ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಸಮಾನ ಹಕ್ಕುಗಳು ದೊರಕುತ್ತಿವೆ ಎಂಬ ಸಂತೋಷವಿದ್ದರೂ ಸೈಬರ್ ಕ್ರೈಂ, ಸರಗಳ್ಳತನದಲ್ಲಿ ಮಹಿಳೆಯರೇ ಹೆಚ್ಚು ಟಾರ್ಗೆಟ್ ಆಗುತ್ತಿರುವುದು ಬೇಸರದ ಸಂಗತಿ ಎಂದು ಮೈಸೂರು ಹೆಚ್ಚುವರಿ ಪೊಲೀಸ್ ಅಧೀಕ್ಷಕಿ ಡಾ.ಬಿ.ಎನ್.ನಂದಿನಿ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದ ಜೆಎಸ್‌ಎಸ್ ಕಾನೂನು ಕಾಲೇಜು ಸಭಾಂಗಣದಲ್ಲಿ ಪ್ರಜ್ಞಾ ಮಹಿಳಾ ಸಮಾಜ ವತಿಯಿಂದ ಆಯೋಜಿಸಿದ್ದ 30ನೇ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಹಿಳೆಯರಿಗೆ ರಾಜಕೀಯ, ಶೈಕ್ಷಣಿಕ, ಉದ್ಯಮ ಸೇರಿದಂತೆ ಸರ್ಕಾರಿ ವಲಯದ ಎಲ್ಲಾ ಕ್ಷೇತ್ರಗಳಲ್ಲಿ ಸಮಾನತೆ, ಅಭಿವ್ಯಕ್ತಿ ಸ್ವಾತಂತ್ರ್ಯ ದೊರಕಿದೆ. ಆದರೆ, ಮಹಿಳೆಯರು ಮೊಬೈಲ್ ಶಾಪಿಂಗ್‌ನಿಂದಾಗಿ ಸೈಬರ್ ಕ್ರೈಂ, ಮೈಮೇಲೆ ಚಿನ್ನ ಪ್ರದರ್ಶನದಿಂದಾಗಿ ಸರಗಳ್ಳತನ ಹೆಚ್ಚಾಗುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಸುಧಾರಣೆಯಾಗಿದೆ: ಕಳೆದ 75 ವರ್ಷಗಳ ಹಿಂದೆ ಮಹಿಳೆಯರ ಸ್ಥಿತಿ ಹೇಗಿತ್ತು. 21ನೇ ಶತಮಾನದಲ್ಲಿ ಮಹಿಳೆಯರ ಪರಿಸ್ಥಿತಿ ಹೇಗಿದೆ ಎಂಬುದಕ್ಕೆ ಇತಿಹಾಸವಿದೆ. ಒಂದು ಕಾಲಕ್ಕೆ ಮಹಿಳೆಯರು ತಮ್ಮ ಮತದಾನ ಹಕ್ಕು ಪಡೆಯಲು ಹೋರಾಟ ನಡೆಸುವ ಪರಿಸ್ಥಿತಿ ಇತ್ತು. ಈ ಹಕ್ಕಿಗಾಗಿ ಲಂಡನ್‌ನಲ್ಲಿ ಮಹಿಳೆಯರು ಹೋರಾಟ ಮಾಡಿ ಪಡೆದ ಸಂದರ್ಭವನ್ನು ವಿವರಿಸಿದರು.

ಪುರುಷರನ್ನು ಹೆಚ್ಚು ಹೊಣೆಯಾಗಿಸುವುದು ಬೇಡ: ಕಳೆದ ಹದಿನೈದು ದಿನಗಳಿಂದ ಮಾಧ್ಯಮಗಳಲ್ಲಿ ಹೆಚ್ಚು ಚರ್ಚೆಯಾಗುತ್ತಿರುವ ಹೆಣ್ಣು ಭ್ರೂಣ ಹತ್ಯೆ ಪ್ರಕರಣದಲ್ಲಿ ಪುರುಷರನ್ನೇ ಹೆಚ್ಚು ಹೊಣೆಯಾಗಿಸಿ,



ಚರ್ಚೆ ಮಾಡುವುದು ತಪ್ಪಾಗುತ್ತದೆ. ಅದರ ಬದಲು ವ್ಯವಸ್ಥೆಯನ್ನು ಹೆಚ್ಚು ಹೊಣೆಯಾಗಿಸುವುದು ಸೂಕ್ತ ಎನ್ನುವುದು ನನ್ನ ಭಾವನೆ. ಇದರಲ್ಲಿ ಹೆಂಗಸರು, ಗಂಡಸರು, ಸಮಾಜದಲ್ಲಿ ಅತೀ ಗಣ್ಯ ವ್ಯಕ್ತಿಗಳು, ಶ್ರೀಮಂತರು ಸಹಾ ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂದರು.

65 ಬಾಲ್ಯವಿವಾಹ ಪ್ರಕರಣ: ಇಂದಿಗೂ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಬಾಲ್ಯವಿವಾಹ ಪದ್ಧತಿ ರೂಢಿಯಲ್ಲಿದೆ. 1961ರಲ್ಲಿ ಬಾಲ್ಯವಿವಾಹ ಪದ್ಧತಿ ರದ್ದುಗೊಳಿಸಿ, ಕಾನೂನು ಜಾರಿಗೊಳಿಸಿದ್ದರೂ ಈ ಪದ್ಧತಿ ಸಮಾಜದಲ್ಲಿ ಜಾರಿಯಲ್ಲಿರುವುದು ಆತಂಕದ ವಿಷಯ. ಅಲ್ಲದೆ, ಈ ವರ್ಷದಲ್ಲಿ 65ಕ್ಕೂ ಹೆಚ್ಚು ಬಾಲ್ಯವಿವಾಹ ಪ್ರಕರಣಗಳನ್ನು ದಾಖಲಿಸಲಾಗಿದೆ. ಕಳೆದ ಹದಿನೈದು ದಿನದ ಹಿಂದೆಯೂ 2 ಬಾಲ್ಯ ವಿವಾಹ ಪ್ರಕರಣ ದಾಖಲಿಸಲಾಗಿದೆ. ಈ ಸಂದರ್ಭದಲ್ಲಿ ಕಾನೂನು ಪಾಲನೆ ಮಾಡುವಾಗ ಭಾವನಾತ್ಮಕ ಸಂಬಂಧ, ಆ ಕುಟುಂಬದ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ನೋಡಿದರೆ ಆ ಕ್ಷಣ ನಿಭಾಯಿಸುವುದು ಪೊಲೀಸರಿಗೆ ಸವಾಲಿನ ಕ್ಷಣವಾಗಿರುವ ಕುರಿತು ಘಟನಾವಳಿ ವಿವರಿಸಿ ಹೇಳಿದರು.

ಬಾಲ್ಯವಿವಾಹ ನಿಷೇಧವಿದ್ದರೂ ಬಡತನದಲ್ಲಿರುವ ಪೋಷಕರು ಆದಷ್ಟು ಬೇಗ ಹೆಣ್ಣು ಮಕ್ಕಳ ಜವಾಬ್ದಾರಿ ಕಳೆದುಕೊಳ್ಳಬೇಕೆಂದು ತೀರ್ಮಾನಿಸಿ, ತಮ್ಮ ಮಗಳಿಗೆ 14 ವರ್ಷ ಅಥವಾ 16 ವರ್ಷ ತುಂಬುವುದರೊಳಗೆ ಗುಟ್ಟಾಗಿ ಮದುವೆ ಮಾಡುತ್ತಾರೆ. ಈ ಘಟನೆ ಪೊಲೀಸರಿಗೆ ತಿಳಿದು, ಪ್ರಕರಣ ದಾಖಲಿಸಿ, ಆ ಪೋಷಕರನ್ನೆ ಬಂಧಿಸಿದಾಗ ಆ ಹೆಣ್ಣು ಮಕ್ಕಳ ಮುಂದಿನ ಭವಿಷ್ಯ ಏನು? ಆ ಕುಟುಂಬದ ಮನೆ ಯಜಮಾನ ಜೈಲು ಪಾಲಾದರೆ, ಕುಟುಂಬ ನಿರ್ವಹಣೆ ಹೇಗೆ ಎಂಬ ಹಲವು ಪ್ರಶ್ನೆಗಳು ಪೊಲೀಸರೆದುರಿಗೆ ದುಪ್ಪನೆ ಬಂದು ನಿಲ್ಲುತ್ತವೆ ಎಂದು ತಿಳಿಸಿದರು.

ಶಿಕ್ಷಣ, ಆರ್ಥಿಕ ಸ್ವಾವಲಂಬಯೇ ಮಾರ್ಗೋಪಾಯ: ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳ ಏಳಿಗೆಗೆ ಸರ್ಕಾರದಿಂದ ಸಾಕಷ್ಟು ಸವಲತ್ತು ಒದಗಿಸುತ್ತಿದೆ. ಅದರಲ್ಲಿ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ಹಾಗೂ ಆರ್ಥಿಕ ಸವಲತ್ತು ನೀಡಲು ಉದ್ಯೋಗದಲ್ಲಿ ಮಹಿಳಾ ಮೀಸಲಾತಿ ಜಾರಿ, ರಾಜಕೀಯ ಸ್ವಾವಲಂಬನೆಗೆ ಹೆಚ್ಚು ಒತ್ತು ನೀಡುತ್ತಿದೆ ಎಂದ ಅವರು, ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳು ಶಿಕ್ಷಣ ಪಡೆಯುತ್ತಿರುವುದರಿಂದ ವರದಕ್ಷಿಣೆ ಕಿರುಕುಳ, ಮಹಿಳಾ ದೌರ್ಜನ್ಯ ಪ್ರಕರಣಗಳು ಕಡಿಮೆಯಾಗುತ್ತಿವೆ. ಹಾಗಂತ ಮೈಮರೆಯುವುದು ಅಪಾಯ ಸಂಗತಿ. ಹೆಣ್ಣಿಗೆ ಯಾವುದೇ ಆದಾಯ ಮೂಲ ಇಲ್ಲದಿದ್ದಾಗ ಬದುಕಿನ ಯಾವುದೇ ದಾರಿಯಲ್ಲೂ ಬೆಳಕು ಕಾಣದಿದ್ದಾಗ ಅನಿವಾರ್ಯವಾಗಿ ಆ ಹೆಣ್ಣು ಮಗು ಆತ್ಮಹತ್ಯೆಯಂತಹ ಕಠಿಣ ದಾರಿ ಹಿಡಿಯಲು ಮನಸ್ಸು ಮಾಡುತ್ತಾರೆ ಎಂದು ಪ್ರಕರಣವೊಂದನ್ನು ಉಲ್ಲೇಖಿಸಿ, ತಿಳಿಸಿದರು.

112 ಸಹಾಯವಾಣಿಗೆ ಕರೆ ಮಾಡಿ: ಪ್ರಜ್ಞಾ ಮಹಿಳಾ ಸಮಾಜದ ಪದಾಧಿಕಾರಿಗಳು, ಕಳೆದ ಮೂವತ್ತು ವರ್ಷಗಳಿಂದ ಮಹಿಳೆಯರ ಸಬಲೀಕರಣಕ್ಕಾಗಿ ಶ್ರಮಿಸುತ್ತಿದ್ದು, ಮುಂದೆಯೂ ಮಹಿಳೆಯರ ಕಷ್ಟಗಳಿಗೆ ಸ್ಪಂದಿಸಲಿ ಹಾಗೂ ಮಹಿಳೆಯರ ಸಹಾಯಕ್ಕಾಗಿ ಸಹಾಯವಾಣಿ 112ಕ್ಕೆ ಕರೆ ಮಾಡಿ, ಸಹಾಯ ಪಡೆಯಬಹುದು. ಅಲ್ಲದೆ, ಕಷ್ಟ ಸಂದರ್ಭದಲ್ಲಿ ನನ್ನ ದೂರವಾಣಿಗೆ ಕರೆ ಮಾಡಿ, ಸಲಹೆ ಪಡೆಯುವಂತೆಯೂ ಮನವಿ ಮಾಡಿದರು. ಈ ವೇಳೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮೈಸೂರು ವಿವಿ ಗಣಕ ವಿಜ್ಞಾನ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ ಡಾ.ಕೆ.ಆರ್.ದಾಕ್ಷಾಯಿಣಿ, ಅಧ್ಯಕ್ಷೆ ಶೈಲಾ ನಾಗರಾಜ್, ಉಪಾಧ್ಯಕ್ಷೆ ನೀಲಾಂಬಿಕಾದೇವಿ ನಾಗರಾಜ್, ಕಾರ್ಯದರ್ಶಿ ಸುಜಾತ ಸತೀಶ್, ಕೋಶಾಧ್ಯಕ್ಷೆ ಭ್ರಮರಾಂಭ ಸ್ವಾಮಿ, ಸಹ ಕಾರ್ಯದರ್ಶಿ ವಸಂತ ಮಹೇಂದ್ರ ಉಪಸ್ಥಿತರಿದ್ದರು.

ಮಹಾಜನ ಕಾಲೇಜಿನಲ್ಲಿ 'ಭಾರತೀಯ ಭಾಷಾ ಉತ್ಸವ'

ಮೈಸೂರು, ಡಿ. 9– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾರತೀಯ ಭಾಷಾ ಸಂಸ್ಥಾನ ಮತ್ತು ರಾಷ್ಟ್ರೀಯ ಅನುವಾದ ಮಿಷನ್‌ನ ಸಹಯೋಗದೊಂದಿಗೆ ಭಾರತೀಯ ಭಾಷಾ ಉತ್ಸವ ಹಮ್ಮಿಕೊಳ್ಳಲಾಗಿತ್ತು.



ಸಭೆಯನ್ನು ಉದ್ದೇಶಿಸಿ ಯುಜಿಸಿ ಕೇರ್ ಜರ್ನಲ್ Translation today ಸಂಪಾದಕ ಡಾ. ತಾರಿಕ್ ಖಾನ್ ಮಾತನಾಡಿ, ಸೆಪ್ಟೆಂಬರ್ 28 ರಿಂದ ಡಿಸೆಂಬರ್ 11 ರವರೆಗೆ 75 ದಿನಗಳ ಕಾಲ ನಡೆಯುವ 'ಭಾರತೀಯ ಭಾಷಾ ಉತ್ಸವ'ದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ವರ್ಚುವಲ್ ಮೋಡ್‌ನಲ್ಲಿ ಸಭೆಯನ್ನು ಕುರಿತು ಮಾತನಾಡಿದ, ಮುಂಬೈ ಮೂಲದ ಲೇಖಕಿ ಮತ್ತು ಅಂಕಣಕಾರರಾದ ಶ್ರೀಮತಿ ವೈಶಾಲಿ ಶ್ರಾಫ್ ಅವರು ಭಾಷೆ, ಅದರ ಹುಟ್ಟು, ಕಲಿಕೆಯ ಘಟಕ, ಕ್ರಾಂತಿ ಮತ್ತು ಸಾವಿನ ಬಗ್ಗೆ ಮಾತನಾಡಿ, ಕೆಲವು ಭಾಷೆಗಳನ್ನು ಬಳಸದೆ ಇರುವುದರಿಂದ ಭಾಷೆಗಳು ಸಾವನ್ನಪ್ಪುತ್ತಿವೆ ಎಂದು ಹೇಳಿ ಅವರು ರಚಿಸಿರುವ 'ತಾತುಂಗ್ ತಾತುಂಗ್' ಕೃತಿಯನ್ನು ಕುರಿತು ವಿವರಿಸುತ್ತಾ, ತಂತ್ರಜ್ಞಾನವನ್ನು ಸರಿಯಾಗಿ ಬಳಸಿದಾಗ ಅಳಿವಿನಂಚಿನಲ್ಲಿರುವ ಭಾಷೆಯನ್ನು ಉಳಿಸಲು ಸಹಾಯ ಮಾಡುತ್ತದೆ ಎಂದರು. ಭಾರತೀಯ ಭಾಷೆಯ ಕೀಬೋರ್ಡ್‌ಗಳನ್ನು ಬಳಸುವುದು ಮತ್ತು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು ಭಾರತೀಯ ಭಾಷೆಗಳನ್ನು ಉಳಿಸಲು ಉತ್ತಮ ಮಾರ್ಗವಾಗಿವೆ ಎಂದು ನುಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ನಿಗದಿತ ಪಠ್ಯಕ್ರಮವನ್ನು ಓದಿದರೆ ಸಾಲದು, ಪಠ್ಯದ ಜೊತೆಗೆ ಸಮಾಜದಲ್ಲಿ ಅತ್ಯುನ್ನತ ಸಾಧನೆ ಮಾಡಿರುವ ವ್ಯಕ್ತಿಗಳ ಜೀವನ ಚರಿತ್ರೆಗಳನ್ನು, ಕಥೆ–ಕಾದಂಬರಿಗಳನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡಬೇಕು. ವಿದ್ಯಾರ್ಥಿಗಳು ಪ್ರತಿ ಸೆಮಿಸ್ಟರ್‌ಗೆ ಕನಿಷ್ಠ ಒಂದು ಪುಸ್ತಕವನ್ನು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ಬೇರೆ ಬೇರೆ ಭಾಷೆಗಳನ್ನು ಕಲಿತು ನೀವು ಜ್ಞಾನವಂತರಾಗಬೇಕು. ಆದರೆ ಮಾತೃಭಾಷೆಯನ್ನು ಮಾತ್ರ ಯಾವ ಕಾರಣಕ್ಕೂ ಮರೆಯಬಾರದೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ ಅವರು, ಆಧುನಿಕ ಕಾಲದಲ್ಲಿ ತಂತ್ರಜ್ಞಾನವನ್ನು ಬಳಸಿ ಭಾಷೆಯನ್ನು ಕಲಿಯಬೇಕಾಗಿದೆ. ಆ ನಿಟ್ಟಿನಲ್ಲಿ ತಂತ್ರಜ್ಞಾನವನ್ನು ಬಳಸುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಭಾರತೀಯ ಭಾಷೆಗಳು, ಸಂಪ್ರದಾಯಗಳು ಮತ್ತು ಸಂಸ್ಕೃತಿಯನ್ನು ಕುರಿತು ರಸಪ್ರಶ್ನೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ ಸ್ವಾಗತಿಸಿದರು. ಭಾಷಾ ಸಂಸ್ಥಾನದ ಸಂಪನ್ಮೂಲ ವ್ಯಕ್ತಿ ಜ್ಞಾನಮೂರ್ತಿ ವಂದಿಸಿದರು. ಸಮಾರಂಭದಲ್ಲಿ ಸಹಾಯಕ ಪ್ರಾಧ್ಯಾಪಕರು ಹಾಗೂ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಗೀತಾ ಡಿ, ಹಿಂದಿ ವಿಭಾಗದ ಮುಖ್ಯಸ್ಥ ಪರಮೇಶ್ವರ ಹೆಗಡೆ, ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ. ಶ್ರೀನಿವಾಸ್, ಕನ್ನಡ ಸಹಾಯಕ ಪ್ರಾಧ್ಯಾಪಕರಾದ ನಾಗೇಶ ಎಂ, ಕಿರಣಕುಮಾರ್ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

'ಸನ್ನಿತಿ ಪ್ರಶಸ್ತಿ' ಪ್ರದಾನ

ಮೈಸೂರು, ಡಿ.9–ನಗರದ ಬೋಗಾದಿಯ ಸನ್ನಿತಿ ಪ್ರಕಾಶನದ ವತಿಯಿಂದ ನೀಡಲಾಗುವ ರಾಜ್ಯ ಮಟ್ಟದ 'ಸನ್ನಿತಿ ಪ್ರಶಸ್ತಿ'ಗೆ ವಿವಿಧ ಕ್ಷೇತ್ರದ ಏಳು ಮಂದಿ ಗಣ್ಯ ಸಾಧಕರು ಆಯ್ಕೆಯಾಗಿದ್ದಾರೆ ಎಂದು ಪ್ರಕಾಶನದ ಅಧ್ಯಕ್ಷ ಬಸಪ್ಪ ಸಿ. ಸಾಲುಂಡಿ ಮತ್ತು ಸಂಚಾಲಕ ಸಿ.ಟಿ. ಕೀರ್ತಿಕುಮಾರ್ ತಿಳಿಸಿದ್ದಾರೆ.

ಮಂಡ್ಯ ಜಿಲ್ಲಾ ಯುವ ಬರಹಗಾರರ ಬಳಗದ ಅಧ್ಯಕ್ಷ ಹಾಗೂ ಸಾಹಿತಿ ಟಿ. ಸತೀಶ್ ಜವರೇಗೌಡ, ಮಹಾರಾಣಿ ವಾಣಿಜ್ಯ ನಿರ್ವಹಣಾ ಕಾಲೇಜಿನ ಪ್ರಾಧ್ಯಾಪಕ ಪ್ರೊ.ಎನ್. ನಾಗೇಂದ್ರ, ಶೇಷಾದ್ರಿಪುರಂ ಪದವಿ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕಿ ಡಾ.ಸಿ.ಪಿ. ಲಾವಣ್ಯ, ಶ್ರೀರಂಗಪಟ್ಟಣದ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಲಕ್ಷ್ಮೀಶ ಶರ್ಮಾ, ಕಲಿಸು ಫೌಂಡೇಶನ್ ಅಧ್ಯಕ್ಷ ಎಂ.ಎಂ. ನಿಖಿಲೇಶ್, ಬೆಂಗಳೂರಿನ ಯೂಟ್ಯೂಬರ್ ಧರ್ಮೇಂದ್ರಕುಮಾರ್, ಮೈಸೂರು ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎ.ಸಿ. ಮಂಜುನಾಥ್ ಅವರು ಸನ್ನಿತಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಡಿ.17ರಂದು ಬೆಳಗ್ಗೆ 10.30ಕ್ಕೆ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ ಸಂಸ್ಥೆಯಲ್ಲಿ ನಡೆಯಲಿರುವ ಲೋಕಾರ್ಪಣೆ ಸಮಾರಂಭದಲ್ಲಿ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಸುತ್ತೂರು ಜಾತ್ರೆ: ಉಚಿತ ಸಾಮೂಹಿಕ ವಿವಾಹ

ಮೈಸೂರು, ಡಿ. 9– ಸುತ್ತೂರು ಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವವು ಫೆ. 6 ರಿಂದ 11 ರವರೆಗೆ ಜರುಗಲಿದ್ದು, ಇದರ ಅಂಗವಾಗಿ ಫೆ.7ರಂದು ಉಚಿತ ಸಾಮೂಹಿಕ ವಿವಾಹ ಆಯೋಜಿಸಲಾಗಿದೆ.

ಸಮಾಜದ ಎಲ್ಲಾ ವರ್ಗದವರಿಗೂ ಮುಕ್ತ ಅವಕಾಶವಿದೆ. ವಧುವಿಗೆ ಮಾಂಗಲ್ಯ, ಸೀರೆ, ಕುಪ್ಪಸ, ಕಾಲುಂಗುರ ಹಾಗೂ ವರನಿಗೆ ಪಂಚೆ, ವಲ್ಲಿ, ಷರ್ಟ್ ನೀಡಲಾಗುತ್ತದೆ. ವಧು–ವರರು ಹಾಗೂ ಜೊತೆಯಲ್ಲಿ ಬರುವ ಬಂಧು ವರ್ಗದವರಿಗೆ ಪ್ರಸಾದ ವ್ಯವಸ್ಥೆ ಇರುತ್ತದೆ. ವಿವಾಹವಾಗಲು ಬಯಸುವವರು ನಿಗದಿತ ಅರ್ಜಿ ಪಡೆದು ಪೂರ್ಣ ವಿವರ ಹಾಗೂ ಅಗತ್ಯ ದಾಖಲಾತಿ ನೀಡಿ 2024ರ ಜ.25 ರೊಳಗೆ ಜಾತ್ರಾ ಮಹೋತ್ಸವ ಕಾರ್ಯಾಲಯ ಹಾಗೂ ಸುತ್ತೂರಿನ ಜೆಎಸ್‌ಎಸ್ ಸಂಸ್ಥೆ ಆಡಳಿತ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬಹುದು. ವಿವರವನ್ನು ಮಹಾವಿದ್ಯಾಪೀಠದ ಆರ್.ಕುಮಾರಸ್ವಾಮಿ, ವೀರಭದ್ರಯ್ಯ ಮತ್ತು ಸಿ.ಮಹದೇವ ಪ್ರಸಾದ್ ದೂ. 0821–2548212, ಮೊ. 94486 74702, 97413–42222 ಮೂಲಕ ಸಂಪರ್ಕಿಸಿ ನೋಂದಾಯಿಸಿಕೊಳ್ಳಬಹುದು ಎಂದು ಸಂಚಾಲಕ ಆರ್.ಕುಮಾರಸ್ವಾಮಿ ತಿಳಿಸಿದ್ದಾರೆ.

ಶಾರದಾ ವಿಲಾಸ ಕಾಲೇಜಿನಲ್ಲಿ ಕಲಾ ಶಾರದಾ–2023 ಬಹುಮಾನ ವಿತರಣೆ

ಮೈಸೂರು, ಡಿ. 9– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಪದವಿಪೂರ್ವ ಕಾಲೇಜಿನ ವತಿಯಿಂದ ನಡೆದ ಕಲಾ ಶಾರದಾ–2023 ಅಂತರ ಕಾಲೇಜು ಸಾಂಸ್ಕೃತಿಕ ಕಾರ್ಯಕ್ರಮದ ಬಹುಮಾನ ವಿತರಣಾ ಸಮಾರಂಭ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ನಡೆಯಿತು.



ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ನಾಗೇಶ್ ವಿ ಬೆಟ್ಟಕೋಟೆ ಭಾಗವಹಿಸಿ ಮಾತನಾಡಿ, ಸಾಂಸ್ಕೃತಿಕ ಸ್ಪರ್ಧೆಗಳು ವಿದ್ಯಾರ್ಥಿ ಜೀವನದ ಯಶಸ್ಸಿಗೆ ಮೈಲಿಗಲ್ಲು. ವ್ಯಕ್ತಿಯ ವ್ಯಕ್ತಿತ್ವ ವಿಕಸನಗೊಳ್ಳಲು ಪ್ರತಿಭಾ ವೇದಿಕೆಗಳು ಸಹಕಾರಿ. ಸ್ಪರ್ಧೆಯಲ್ಲಿ ಭಾಗವಹಿಸುವುದು ಮುಖ್ಯವೇ ಹೊರತು ಬಹುಮಾನ ಪ್ರಶಸ್ತಿಗಳಲ್ಲ. ವಿದ್ಯಾರ್ಥಿಯಾದವನು ಪಠ್ಯಪುಸ್ತಕದ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ ನಾಯಕತ್ವ ಗುಣ ಹಾಗೂ ಧೈರ್ಯ ಹೊರಬರಲು ಸಾಧ್ಯವಾಗಿ ತನ್ನ ಪ್ರತಿಭೆಯನ್ನು ಗಮನಿಸಿ ಹತ್ತಾರು ಜನ ಪ್ರೋತ್ಸಾಹಿಸುತ್ತಾರೆ ಎಂದ ಅವರು, ಸಂಸ್ಕೃತಿ ಮತ್ತು ಕಲೆಗಳನ್ನು ಮೈಗೂಡಿಸಿಕೊಂಡರೆ ಜೀವನ ಪರ್ಯಂತ ಕಲೆಗಾರನಾಗಿ ಉಳಿಯಲು ಸಾಧ್ಯ ಎಂದರು.

ಭಾರತೀಯ ಸಂಸ್ಕೃತಿಯಲ್ಲಿ ರಾಮಾಯಣ, ಮಹಾಭಾರತಗಳು ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡಿದೆ. ಇಲ್ಲಿ ಬರುವ ಆದರ್ಶ ವ್ಯಕ್ತಿಗಳ ಹಾಗೂ ಸರಳ ಜೀವನ ನಮಗೆಲ್ಲರಿಗೂ ಸ್ಫೂರ್ತಿ. ನಮ್ಮಲ್ಲಿ ಐಐಟಿ ಮಾಡಿರುವ ಶೇ.76ರಷ್ಟು ಪ್ರತಿಭಾವಂತರು ಹೊರದೇಶದಲ್ಲಿ ಇದ್ದಾರೆ. ಶೇ.24 ರಷ್ಟು ಮಾತ್ರ ಭಾರತದಲ್ಲಿಯೇ ಉಳಿದು ದೇಶಸೇವೆ ಮಾಡುತ್ತಿದ್ದಾರೆ. ಆದ್ದರಿಂದ ಎಲ್ಲರೂ ಇಲ್ಲೇ ಉಳಿದು ದೇಶಕ್ಕಾಗಿ ದುಡಿದರೆ ದೇಶ ಮತ್ತಷ್ಟು ಮುಂದುವರಿಯಲು ಸಾಧ್ಯವಾಗುತ್ತದೆ ಎಂದು ವಿಶೇಷ ಆಹ್ವಾನಿತರಾಗಿದ್ದ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್, ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಕಲಾ ಶಾರದಾ ಒಂದು ವಿಶೇಷವಾದ ವೇದಿಕೆ ಇದನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಸಿ.ಕೆ.ಅಶೋಕ್ ಕುಮಾರ್ ವಹಿಸಿ ಮಾತನಾಡಿ, ವಿದ್ಯೆ ಮತ್ತು ವಿವೇಕಕ್ಕೆ ಪ್ರಥಮ ಸ್ಥಾನವನ್ನು ನಮ್ಮ ಸಂಸ್ಥೆ ನೀಡುತ್ತಾ ಬಂದಿದೆ. ಪಾಶ್ಚಿಮಾತ್ಯ ಸಂಸ್ಕೃತಿ ಬಿಟ್ಟು ಭಾರತೀಯ ಸಂಸ್ಕೃತಿಯನ್ನು ಹೆಚ್ಚು ಬಳಸಿ ಉಳಿಸಬೇಕು ಎಂದು ತಿಳಿಸಿದರು. ವೇದಿಕೆಯಲ್ಲಿ ಕಲಾ ಶಾರದಾ ಸಂಚಾಲಕರಾದ ರಾಜೇಂದ್ರ ಪ್ರಸಾದ್ ಹೊನ್ನಲಗೆರೆ, ಕಾಲೇಜಿನ ಸಾಂಸ್ಕೃತಿಕ ವೇದಿಕೆಯ ಸಂಚಾಲಕರಾದ ವಿದುಷಿ ಕಾವ್ಯಶ್ರೀ, ಉಪನ್ಯಾಸಕರಾದ ಹೆಚ್.ಆರ್.ಪರಮೇಶ್, ಎ.ಶಿಲ್ಪಾ, ಡಾ.ಪೂಜಾ, ಡಾ.ಲಾವಣ್ಯ, ವಿಂದ್ಯಾ, ಮಧುರ, ಮನೋಜ್‌ಕುಮಾರ್, ಕೃಷ್ಣಮೂರ್ತಿ ಉಪಸ್ಥಿತರಿದ್ದರು. ಮೈಸೂರು ನಗರ ಮಟ್ಟದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗೆ 27 ಕಾಲೇಜುಗಳು ಭಾಗವಹಿಸಿದ್ದವು.

ಇದರಲ್ಲಿ ಭರತನಾಟ್ಯ, ಸಮೂಹ ನೃತ್ಯ, ಚಿತ್ರಗೀತೆ, ಭಾವಗೀತೆ, ಜನಪದ ಗೀತೆ, ಶಾಸ್ತ್ರೀಯ ಸಂಗೀತ ಸ್ಪರ್ಧೆಗಳು ನಡೆದವು. ಈ ಸ್ಪರ್ಧೆಗಳಲ್ಲಿ ಅತೀ ಹೆಚ್ಚು ಅಂಕ ಹಾಗೂ ಬಹುಮಾನವನ್ನು ಪಡೆದ ಸದ್ವಿದ್ಯಾ ಸೆಮಿ ರೆಸಿಡೆನ್ಸಿ ಪದವಿ ಪೂರ್ವ ಕಾಲೇಜಿಗೆ ಶಾರದಮ್ಮ ಕಲಾ ಶಾರದಾ ಪರ್ಯಾಯ ಪಾರಿತೋಷಕ ಲಭಿಸಿತು.


ಮೈವಿವಿ ಅಥ್ಲೆಟಿಕ್ ಕ್ರೀಡಾಕೂಟ–ಸ್ನಾತಕೋತ್ತರ ಕ್ರೀಡಾಮಂಡಳಿ, ಟೆರೇಷಿಯನ್ ಕಾಲೇಜಿಗೆ ಸಮಗ್ರ ಪ್ರಶಸ್ತಿ

ಮೈಸೂರು, ಡಿ. 9–ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಓವೆಲ್ ಮೈದಾನದಲ್ಲಿ ನಡೆದ 2023–24ನೇ ಸಾಲಿನ ಅಂತರ ಕಾಲೇಜುಗಳ 94ನೇ ಅಥ್ಲೆಟಿಕ್ಸ್ ಕ್ರೀಡಾಕೂಟದ ಪುರುಷರ ವಿಭಾಗದಲ್ಲಿ ಮಾನಸ ಗಂಗೋತ್ರಿ ಸ್ನಾತಕೋತ್ತರ ಕ್ರೀಡಾ ಮಂಡಳಿ, ಮಹಿಳೆಯರ ವಿಭಾಗದಲ್ಲಿ ಟೆರೇಷಿಯನ್ ಕಾಲೇಜು ತಂಡ ಪ್ರಶಸ್ತಿ ಗಳಿಸಿವೆ.

ಮೂರು ದಿನಗಳ ಈ ಕ್ರೀಡಾಕೂಟದಲ್ಲಿ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳ 800ಕ್ಕೂ ಹೆಚ್ಚು ಪುರುಷ ಮತ್ತು ಮಹಿಳಾ ಕ್ರೀಡಾಪಟುಗಳು ಭಾಗವಹಿಸಿದ್ದರು.

ಈ ಕ್ರೀಡಾಕೂದಲ್ಲಿ ಪುರುಷರ ವಿಭಾಗದಲ್ಲಿ ಮಾನಸ ಗಂಗೋತ್ರಿ ಸ್ನಾತಕೋತ್ತರ ಕ್ರೀಡಾ ಮಂಡಳಿ 60 ಅಂಕಗಳು ಹಾಗೂ ಮಹಿಳೆಯರ ವಿಭಾಗದಲ್ಲಿ ಟೆರೇಷಿಯನ್ ಕಾಲೇಜು 82 ಅಂಕಗಳನ್ನು ಗಳಿಸಿ ಸಮಗ್ರ ತಂಡ ಪ್ರಶಸ್ತಿಯನ್ನು ಪಡೆದವು.

ಪುರುಷರ ವಿಭಾಗದಲ್ಲಿ ಸ್ನಾತಕೋತ್ತರ ಕ್ರೀಡಾ ಮಂಡಳಿಯ ಬಿ. ಮಹಾಂತೇಶ್





954, ಮಹಿಳೆಯರ ವಿಭಾಗದಲ್ಲಿ ಹಾಸನ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಕಾವ್ಯಾ 728 ಅಂಕಗಳನ್ನು ಪಡೆದು ಬೆಸ್ಟ್ ಅಥ್ಲೆಟ್ ಆಗಿ ಹೊರಹೊಮ್ಮಿದರು.

ಶನಿವಾರ ನಡೆದ ಅಥ್ಲೆಟಿಕ್ಸ್ ಕ್ರೀಡಾಕೂಟದ ಬಹುಮಾನ ವಿತರಣಾ ಸಮಾರಂಭದಲ್ಲಿ ಸಿಂಡಿಕೇಟ್ ಸದಸ್ಯರಾದ ಡಾ.ಟಿ.ಆರ್. ಚಂದ್ರಶೇಖರ್, ಗೋಕುಲ್ ಗೋವರ್ಧನ್, ಕ್ರೀಡಾ ಮಂಡಳಿ ಸದಸ್ಯರಾದ ಪ್ರೊ.ಬಿ.ಎಸ್.ವಿಶ್ವನಾಥ್, ಅಂಶಿ ಪ್ರಸನ್ನಕುಮಾರ್, ಮುಖ್ಯ ಅತಿಥಿಗಳಾಗಿದ್ದರು. ಮೈವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ಅಧ್ಯಕ್ಷತೆ ವಹಿಸಿದ್ದರು. ಈ ಬಾರಿಯ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಕ್ರೀಡಾಪಟುಗಳ ಸಾಧನೆ ಉತ್ತಮವಾಗಿದ್ದು, ನೀವು ಕೂಡ ಆ ರೀತಿಯ ಸಾಧನೆಯ ಗುರಿ ಇಟ್ಟುಕೊಂಡು ಮುಂದೆ ಸಾಗುವಂತೆ ಗಣ್ಯರು ಸಲಹೆ ಮಾಡಿದರು. ಹೊಸ ವಿವಿಗಳ ಸ್ಥಾಪನೆಯ ನಂತರ ಮೈಸೂರು ವಿವಿಯು ಜಿಲ್ಲೆಗೆ ಸೀಮಿತವಾಗಿದ್ದು, ವಿತ್ತೀಯ ಕೊರತೆ ಎದುರಿಸುತ್ತಿದೆ. ಹೀಗಿದ್ದರೂ ಕ್ರೀಡಾ ಚಟುವಟಿಕೆಗಳಿಗೆ ಕಳೆದ ಬಾರಿಯಂತೆ ಹಣಕಾಸು ನೆರವು ನೀಡಿದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಕುಲಸಚಿವೆ ವಿ.ಆರ್. ಶೈಲಜಾ, ಈ ದಿಸೆಯಲ್ಲಿ ಪ್ರಯತ್ನ ಮಾಡಿದ ಸಿಂಡಿಕೇಟ್ ಸದಸ್ಯರಾದ ಡಾ.ಟಿ.ಆರ್. ಚಂದ್ರಶೇಖರ್, ಗೋಕುಲ್ ಗೋವರ್ಧನ್, ಕ್ರೀಡಾ ಸಮಿತಿಯ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಿದರು.

ಕೂಟ ದಾಖಲೆ ನಿರ್ಮಿಸಿದ ಕ್ರೀಡಾಪಟುವಿಗೆ ಅಂತಾರಾಷ್ಟ್ರೀಯ ಅಥ್ಲೆಟ್ ಎಂ. ಯೋಗೇಂದ್ರ, ಸಮಗ್ರ ತಂಡ ಪ್ರಶಸ್ತಿ ಪಡೆದ ಸ್ನಾತಕೋತ್ತರ ಕ್ರೀಡಾ ಮಂಡಳಿಗೆ ಸಹಾಯ ನಿರ್ದೇಶಕ ರವಿ ಅವರು ನಗದು ಬಹುಮಾನ ನೀಡಿದರು.

ಡಿ.20, ಗೋಣಿಕೊಪ್ಪದಲ್ಲಿ ಕೊಡವ ಕವಿಗೋಷ್ಠಿ



ವಿರಾಜಪೇಟೆ, ಡಿ.9– ಪೊಂಬೊಳಚ್ಚ ಕೂಟದ ವತಿಯಿಂದ ಡಿ.20 ರಂದು ಗೋಣಿಕೊಪ್ಪದ ಇಗ್ಗುತಪ್ಪ ಕೊಡವ ಸಂಘದಲ್ಲಿ ಕೊಡವ ಜನಾಂಗಕ್ಕೆ ಸೀಮಿತವಾಗುವಂತೆ 'ಜಿಲ್ಲಾಮಟ್ಟದ ಕೊಡವ ಕವಿಗೋಷ್ಠಿ' ಯನ್ನು ಆಯೋಜಿಸಲಾಗಿದೆ.

ಕೂಟದ ಅಧ್ಯಕ್ಷ ಮಾಳೇಟಿರ ಶ್ರೀನಿವಾಸ್ ವಿರಾಜಪೇಟೆ ಪ್ರೆಸ್‌ಕ್ಲಬ್‌ನಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿ ಪೊಂಬೊಳಚ್ಚ ಕೂಟ ಪ್ರಾರಂಭಗೊಂಡು ಮೂರು ವರ್ಷ ಕಳೆದಿದ್ದು, 109 ಸದಸ್ಯರಿದ್ದಾರೆ. ಸಹಕಾರಿ ನಿಯಮದಡಿಯಲ್ಲಿ ನೋಂದಾವಣಿ ಗೊಂಡಿದೆ. ಈಗಾಗಲೇ 40ಕ್ಕೂ ಅಧಿಕ ಕಾರ್ಯಕ್ರಮಗಳನ್ನು ನಡೆಸಲಾಗಿದೆ ಎಂದರು.

ಕೊಡವ ಭಾಷೆ ಸಂಸ್ಕೃತಿ ಆಚಾರ ವಿಚಾರ ಪದ್ಧತಿ ಪರಂಪರೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕೂಟವು ಕಾರ್ಯ ಪ್ರವೃತವಾಗಿದೆ. ಕೊಡವ ಜನಾಂಗಕ್ಕೆ ಸೀಮಿತವಾದ ಕವಿಗೋಷ್ಠಿಯಲ್ಲಿ ಕವಿಗಳು ಯಾವುದೇ ವಯೋಮಿತಿಯ ನಿರ್ಬಂಧವಿಲ್ಲದೆ ಭಾಗವಹಿಸಬಹುದು. ಹಿರಿಯ ಸಾಹಿತಿ ಮಂಡೇಪಂಡ ಗೀತಾ ಮಂದಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಪೊಂಬೊಳಚ್ಚ ಕೂಟದ ಸ್ಥಾಪಕ ಅಧ್ಯಕ್ಷ ಕೋಟೇರ ಉದಯ್ ಪೂಣಚ್ಚ ಮಾತನಾಡಿ, ಕಳೆದ ಬಾರಿ ಕಾಕೋಟುಪರಂಬು ಕಾಲಭೈರವ ದೇವಾಲಯದ ಸಭಾಂಗಣದಲ್ಲಿ ಕೂಟದ ಸದಸ್ಯರಿಗೆ ಮಾತ್ರ ಕವಿಗೋಷ್ಠಿ ಆಯೋಜಿಸಲಾಗಿತ್ತು ಈ ಬಾರಿ ಜಿಲ್ಲಾಮಟ್ಟದ ಕೊಡವ ಕವಿಗಳಿಗೆ ಅವಕಾಶ ನೀಡಲಾಗಿದೆ. ಗೋಷ್ಠಿಯಲ್ಲಿ ಭಾಗವಹಿಸುವ ಕವಿಗಳು ಡಿ.15 ರೊಳಗೆ ತಮ್ಮ ಹೆಸರನ್ನು ಕೋಟೇರ ಉದಯ್ ಪೂಣಚ್ಚ 9741351964, ಮಲ್ಲರ [illegible] 9686092250 ಇವರುಗಳಲ್ಲಿ ನೋಂದಾಯಿಸಿ ಕೊಳ್ಳಬಹುದಾಗಿದೆ ಎಂದರು.

ಗೋಷ್ಠಿಯಲ್ಲಿ ಉಪಾಧ್ಯಕ್ಷೆ ಕಿಕ್ಕೇರಿಯಂಡ ಲೀಲಾ ಅಯ್ಯಪ್ಪ, ಖಜಾಂಚಿ ಮುಂಡ್ಯೋಳಂಡ ಧರಣಿ ಜಗದೀಶ್ ಉಪಸ್ಥಿತರಿದ್ದರು.

ಬಾಳೋಪಾಟ್, ಬೊಳಕಾಟ್ ಪಡಿಪು ಕಾರ್ಯಕ್ರಮ

ಕೂಟದ ಕಾರ್ಯದರ್ಶಿ ಚಂಗೇಟಿರ ಸೋಮಣ್ಣ ಮಾತನಾಡಿ, ಜ.10ರಿಂದ 31 ರವರೆಗೆ ಪ್ರತಿ ಶನಿವಾರ ಮತ್ತು ಭಾನುವಾರ ನಾಪೋಕ್ಲು ಕೊಡವ ಸಮಾಜದಲ್ಲಿ ಬಾಳೋಪಾಟ್ ಹಾಗೂ ಬೊಳಕಾಟ್ ಪಡಿಪು ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕೊಡವ ಮೂಲ ಸಂಸ್ಕೃತಿ, ಪದ್ಧತಿ, ಪರಂಪರೆ ನಶಿಸಿ ಹೋಗುತ್ತಿರುವ ನಿಟ್ಟಿನಲ್ಲಿ ಪ್ರತಿಯೊಂದು ಕುಟುಂಬದಲ್ಲಿ ಬಾಳೋಪಾಟ್ ಮತ್ತು ಬೊಳಕಾಟ್ ಹಾಡುವ ಆಟವೆಂದು ಕೂಟದಿಂದ ಪ್ರಥಮ ಪ್ರಯತ್ನವಾಗಿದೆ. ಮುಂದಿನ ದಿನಗಳಲ್ಲಿ ವಿರಾಜಪೇಟೆ, ಪೊನ್ನಂಪೇಟೆ, ಅಮ್ಮತ್ತಿ ಶ್ರೀಮಂಗಲ ಸೇರಿದಂತೆ ಜಿಲ್ಲೆಯ ಇತರೆಡೆಗಳಲ್ಲಿ ಪಡಿಪು ಕಾರ್ಯಕ್ರಮವನ್ನು ನಡೆಸಲಾಗುವುದು. ಭಾಗವಹಿಸಲು ಇಚ್ಛಿಸುವವರು ಡಿ.25 ರೊಳಗೆ ಕೂಟದ ಕಾರ್ಯದರ್ಶಿ ಚಂಗೇಟಿರ ಸೋಮಣ್ಣ ಅವರಲ್ಲಿ ಹೆಸರು ನೋಂದಾಯಿಸಿಕೊಳ್ಳುವಂತೆ ಕೋರಿದರು.

ಕರಿಕೆ ಗ್ರಾಮದ ವ್ಯಾಪ್ತಿಯಲ್ಲಿ ಕಾಡಾನೆ ಹಾವಳಿ

ಕರಿ ಮೆಣಸು, ಬಾಳೆ, ಅಡಿಕೆ ಫಸಲು, ಸ್ಪ್ರಿಂಕ್ಲರ್‌ಗಳ ನಾಶ




ಮಡಿಕೇರಿ,ಡಿ.9– ಕೊಡಗಿನ ಗಡಿ ಕರಿಕೆ ಗ್ರಾಮದ ಪಚ್ಚೆಪಿಲಾವು ಭಾಗದಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದೆ.

ತೋಟಗಳಿಗೆ ನುಗ್ಗಿ ಕೃಷಿ ಫಸಲನ್ನು ನಾಶಪಡಿಸುತ್ತಿರುವ ಗಜಹಿಂಡು ಗ್ರಾಮದಲ್ಲಿ ಆತಂಕ ಸೃಷ್ಟಿಸಿದೆ. ಸ್ಥಳೀಯ ನಿವಾಸಿ ಹೆಚ್.ಎಂ.ನಂಜುಂಡ ಎಂಬುವವರ ತೋಟಕ್ಕೆ ನುಗ್ಗಿರುವ ಕಾಡಾನೆಗಳು ಕರಿಮೆಣಸು, ಬಾಳೆ, ಅಡಿಕೆ ಮರಗಳು ಮತ್ತು ಸ್ಪ್ರಿಂಕ್ಲರ್‌ಗಳನ್ನು ನಾಶ ಪಡಿಸಿವೆ. ಅಕ್ಕಪಕ್ಕದ ತೋಟಗಳಿಗೂ ಲಗ್ಗೆ ಇಟ್ಟಿರುವ ವನ್ಯಜೀವಿಗಳು ನಷ್ಟವನ್ನುಂಟು ಮಾಡಿವೆ.

ಪ್ರತಿವರ್ಷ ಕೈಗೆ ಬಂದ ತುತ್ತು ಬಾಯಿಗೆ ಬಾರದ ಪರಿಸ್ಥಿತಿ ಎದುರಾಗುತ್ತಿದ್ದು, ಫಸಲು ಕಾಡಾನೆಗಳ ಹೊಟ್ಟೆ ಸೇರುತ್ತಿದೆ ಎಂದು ಕೃಷಿಕರು ಬೇಸರ ವ್ಯಕ್ತಪಡಿಸಿದ್ದಾರೆ. ಗ್ರಾಮದಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳನ್ನು ಕಾಡಿಗಟ್ಟಬೇಕು. ದಾಳಿಯನ್ನು ನಿಯಂತ್ರಿಸಲು ಆನೆ ಕಂದಕಗಳನ್ನು ನಿರ್ಮಿಸಬೇಕು ಮತ್ತು ಆನೆಗಳಿಂದ ಉಂಟಾದ ಬೆಳೆ ನಷ್ಟಕ್ಕೆ ಶೀಘ್ರ ಪರಿಹಾರ ವಿತರಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಉರುಳಿದ ಕಾರು: ಮೂವರಿಗೆ ಗಾಯ



ಮಡಿಕೇರಿ,ಡಿ.9– ಸುಂಟಿಕೊಪ್ಪ ಸಮೀಪದ ಕೆದಕಲ್ ಬಸ್ ನಿಲ್ದಾಣದ ಬಳಿ ಚಾಲಕನ ನಿಯಂತ್ರಣ ಕಳೆದುಕೊಂಡು ಕಾರೊಂದು ಉರುಳಿ ಬಿದ್ದ ಘಟನೆ ನಡೆದಿದೆ. ಈ ಘಟನೆಯಲ್ಲಿ ಚಾಲಕ ಸೇರಿದಂತೆ ಮೂವರು ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಕ್ಕೊಳಗಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಪಘಾತದಲ್ಲಿ ಕಾರು ಸಂಪೂರ್ಣ ಜಖಂ ಆಗಿದೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದರು.

ಶ್ರೀ ರಾಮ ಟ್ರಸ್ಟ್ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ಕರಾಟೆಯಲ್ಲಿ ಸಾಧನೆ



ನಾಪೋಕ್ಲು, ಡಿ.9– ಇಲ್ಲಿನ ಶ್ರೀ ರಾಮ ಟ್ರಸ್ಟ್ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ಕರಾಟೆಯಲ್ಲಿ ಸಾಧನೆ ಮಾಡಿದ್ದಾರೆ.

ಮಡಿಕೇರಿಯ ನೆಹರು ಯುವ ಕೇಂದ್ರದ ವತಿಯಿಂದ ಮೈಸೂರಿನ ಫಿಲೋಮಿನಾ ಸಭಾಂಗಣದಲ್ಲಿ ನಡೆದ ರಾಷ್ಟ್ರಮಟ್ಟದ ಮುಕ್ತ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಶ್ರೀರಾಮ ಟ್ರಸ್ಟ್ ವಿದ್ಯಾಸಂಸ್ಥೆಯ 5ನೇ ತರಗತಿ ವಿದ್ಯಾರ್ಥಿನಿ ಪ್ರಾರ್ಥನಾ ಪೊನ್ನಮ್ಮ ಬಿ.ಎ ಕತಾ ವಿಭಾಗದಲ್ಲಿ ಪ್ರಥಮ ಹಾಗೂ ಕುಮಿಟೆ ವಿಭಾಗದಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ.

ಎಂಟನೇ ತರಗತಿಯ ವಿದ್ಯಾರ್ಥಿನಿಯರಾದ ಗಂಗಮ್ಮ ಹಾಗೂ ಆಯುಷ್ಯ ಕೆ. ಕತಾ ವಿಭಾಗದಲ್ಲಿ ಕ್ರಮವಾಗಿ ದ್ವಿತೀಯ ಮತ್ತು ದ್ವಿತೀಯ ಸ್ಥಾನ ಗಳಿಸಿದ್ದಾರೆ. ಈ ವಿದ್ಯಾರ್ಥಿಗಳು ಸೆನ್ ಸಾಯಿ ಚಂದನ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.

ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕ ಬಲಿಷ್ಠಗೊಳಿಸಲು ನಿರ್ಧಾರ



ಪೊನ್ನಂಪೇಟೆ, ಡಿ.9– ಕಾಂಗ್ರೆಸ್ ಪಕ್ಷದ ಬೆನ್ನೆಲುಬಾಗಿರುವ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕವನ್ನು ಕೊಡಗು ಜಿಲ್ಲೆಯಲ್ಲಿ ಮತ್ತಷ್ಟು ಬಲಿಷ್ಠಗೊಳಿಸಲು ತೀರ್ಮಾನ ತೆಗೆದುಕೊಳ್ಳಲಾಗಿದೆ. ಕೊಡಗು ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಪಿ.ಎ. ಹನೀಫ್ ಅವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲೆಯ ವಿವಿಧ 6 ಬ್ಲಾಕ್‌ಗಳ ನೂತನ ಅಧ್ಯಕ್ಷರ ಸಮಾಲೋಚನಾ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಬೇರೆ ಬೇರೆ ಕಾರಣಗಳಿಗಾಗಿ ಪಕ್ಷದ ಸಂಘಟನಾ ಕಾರ್ಯಗಳಿಂದ ದೂರವಿರುವ ಅಲ್ಪಸಂಖ್ಯಾತ ಮುಖಂಡರನ್ನು ಮತ್ತೆ ಒಂದೆಡೆ ಸೇರಿಸಿ ಅವರನ್ನು ಪಕ್ಷದ ಕಾರ್ಯ ಚಟುವಟಿಕೆಗಳಿಗೆ ತೊಡಗಿಸಿಕೊಳ್ಳುವಂತೆ ಮಾಡಬೇಕು. ಇದರಿಂದ ಪಕ್ಷದ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಅಲ್ಲದೆ, ರಾಜ್ಯ ಸರ್ಕಾರ ಜಾರಿಗೆ ತಂದಿರುವ ವಿವಿಧ ಜನೋಪಯೋಗಿ ಯೋಜನೆಗಳ ಕುರಿತು ಮತದಾರರಿಗೆ ಜಾಗೃತಿ ಮೂಡಿಸಬೇಕು ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ ವಿವಿಧ ಬ್ಲಾಕ್ ಸಮಿತಿ ಅಧ್ಯಕ್ಷರು, ಈ ಮೂಲಕ ಮುಂಬರುವ ಲೋಕಸಭೆ ಸೇರಿದಂತೆ ಜಿಪಂ ಮತ್ತು ತಾಪಂ ಚುನಾವಣೆಗೆ ಅಲ್ಪಸಂಖ್ಯಾತರ ಘಟಕವನ್ನು ಮತ್ತಷ್ಟು ಸಜ್ಜುಗೊಳಿಸಲು ಸಲಹೆ ನೀಡಿದರು.

ಸಮಾಲೋಚನಾ ಸಭೆಯಲ್ಲಿ ವ್ಯಕ್ತಗೊಂಡ ಅಭಿಪ್ರಾಯದಂತೆ, ಲೋಕಸಭಾ ಚುನಾವಣೆ ಇದೀಗ ಸಮೀಪಿಸುತ್ತಿರುವುದರಿಂದ ಅರ್ಹರನ್ನು ಮತದಾರರ ಪಟ್ಟಿಗೆ ಸೇರಿಸಲು ಬ್ಲಾಕ್ ಸಮಿತಿ ಅಧ್ಯಕ್ಷರು ವಿಶೇಷ ಜವಾಬ್ದಾರಿ ತೆಗೆದುಕೊಳ್ಳಬೇಕು. ಎಲ್ಲಾ ಮುಖಂಡರನ್ನು ಮತ್ತು ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೂಡಲೇ ಎಲ್ಲಾ ಬ್ಲಾಕ್ ಸಮಿತಿಯನ್ನು ಪೂರ್ಣ ಪ್ರಮಾಣದಲ್ಲಿ ರಚಿಸಬೇಕು. ಬ್ಲಾಕ್ ಸಮಿತಿ ರಚನೆ ಕಾರ್ಯ ಪೂರ್ಣಗೊಂಡ ಬಳಿಕ ಆಯಾ ವ್ಯಾಪ್ತಿಯ ವಲಯ ಸಮಿತಿಗಳಿಗೆ ಪದಾಧಿಕಾರಿಗಳನ್ನು ನೇಮಿಸುವ ಪ್ರಕ್ರಿಯೆಯನ್ನು ಶೀಘ್ರದಲ್ಲೇ ಪೂರ್ಣಗೊಳಿಸಬೇಕು. ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಸಂಘಟಿಸಲು ಎಲ್ಲಾ ಬ್ಲಾಕ್ ಮಟ್ಟದಲ್ಲಿ ಅಗತ್ಯ ರೂಪುರೇಷೆಗಳನ್ನು ಸಿದ್ಧಪಡಿಸಬೇಕು ಎಂದು ಪಿ.ಎ. ಹನೀಫ್ ಸೂಚಿಸಿದರು.

ಸಭೆಯಲ್ಲಿ ಘಟಕದ ಪ್ರಧಾನ ಕಾರ್ಯದರ್ಶಿ ಕೆ.ಎಂ.ಸಯ್ಯದ್ ಭಾವ, ಮಡಿಕೇರಿ ಬ್ಲಾಕ್ ಅಧ್ಯಕ್ಷರಾದ ಕೆ.ಜಿ. ಪೀಟರ್, ವಿರಾಜಪೇಟೆ ಬ್ಲಾಕ್ ಅಧ್ಯಕ್ಷರಾದ ಕೋಳುಮಂಡ ರಫೀಕ್, ಪೊನ್ನಂಪೇಟೆ ಬ್ಲಾಕ್ ಅಧ್ಯಕ್ಷರಾದ ಎಂ.ಎ. ಶಮೀರ್, ಕುಶಾಲನಗರ ಬ್ಲಾಕ್ ಅಧ್ಯಕ್ಷರಾದ ಕೆ.ಇ. ಅಬ್ದುಲ್ ರಜಾಕ್, ನಾಪೋಕ್ಲು ಬ್ಲಾಕ್ ಅಧ್ಯಕ್ಷರಾದ ಎ.ಎಂ. ಉಮ್ಮರ್, ಸೋಮವಾರಪೇಟೆ ಬ್ಲಾಕ್ ಅಧ್ಯಕ್ಷರಾದ ಅಕ್ಮಲ್ ಪಾಷ ಉಪಸ್ಥಿತರಿದ್ದರು.

ಗುಡ್ಡೆಹೊಸೂರು ಶಾಲೆಯಲ್ಲಿ ಶಾರದಾ ಪೂಜೆ



ಗುಡ್ಡೆಹೊಸೂರು, ಡಿ.9– ಇಲ್ಲಿನ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಶಾರದ ಪೂಜೆ ನಡೆಸಲಾಯಿತು. ಕುಶಾಲನಗರ ಸೋಮೇಶ್ವರ ದೇವಸ್ಥಾನದ ಅರ್ಚಕರಾದ ಮಂಜುನಾಥ್ ಭಟ್ ಅವರು ಪೂಜೆ ನೆರವೇರಿಸಿದರು. ಈ ಸಂಧರ್ಭ ಎಸ್‌ಡಿಎಂಸಿಯ ಎಲ್ಲಾ ಪದಾಧಿಕಾರಿಗಳು, ಶಾಲಾ ಶಿಕ್ಷಕ ವೃಂದ ಮತ್ತು ಪೋಷಕರು ಹಾಜರಿದ್ದರು.

ನಾಳೆ ರೈತ ಸಂಘದಿಂದ ಸಭೆ

ಗೋಣಿಕೊಪ್ಪ, ಡಿ.9– ಕರ್ನಾಟಕ ರೈತ ಸಂಘದ ಜಿಲ್ಲಾ ಘಟಕ ವತಿಯಿಂದ ಡಿ.11 ಮತ್ತು 13 ರಂದು ರೈತರು, ತಹಸೀಲ್ದಾರ್, ಸರ್ವೆ ಇಲಾಖೆ, ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ಆಯೋಜಿಸಲಾಗಿದೆ ಎಂದು ರೈತ ಸಂಘದ ಅಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಡಿ.11 ರಂದು ವಿರಾಜಪೇಟೆ ಡಿಎಫ್‌ಓ ಕಚೇರಿಯಲ್ಲಿ ಬೆಳಗ್ಗೆ 10.30 ಗಂಟೆಗೆ ಸಭೆ ನಡೆಯಲಿದೆ. ಅರಣ್ಯ ಇಲಾಕೆಗೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಅಧಿಕಾರಿಗಳಿಗೆ ತಿಳಿಸಬಹುದಾಗಿದೆ. ಡಿ.13 ರಂದು ವಿರಾಜಪೇಟೆ ತಹಸೀಲ್ದಾರ್ ಕಚೇರಿಯಲ್ಲಿ ಕಂದಾಯ, ಸರ್ವೇ ಇಲಾಖೆಗಳ ಸಭೆ ನಡೆಯಲಿದೆ. ಸಾರ್ವಜನಿಕರು ಕಡತ ವಿಲೇವಾರಿ ಸೇರಿದಂತೆ ಇಲಾಕೆಗೆ ಒಳಪಡುವ ಸಮಸ್ಯೆಗಳನ್ನು ಸ್ಥಳದಲ್ಲಿಯೇ ತಿಳಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್‌ನಲ್ಲಿ ಚಿನ್ನದ ಪದಕ

ಮಡಿಕೇರಿ: ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ನಲ್ಲಿ ಬೊಳ್ಳಂಡ ಉನ್ನತಿ ಅಯ್ಯಪ್ಪ ಅವರು ಚಿನ್ನದ ಪದಕ ಪಡೆಯುವ ಮೂಲಕ ಉನ್ನತ ಸಾಧನೆ ಮಾಡಿದ್ದಾರೆ. ಕೊಡಗಿನ ಬೊಳ್ಳಂಡ ಉನ್ನತಿ ಅವರು 20 ವಯೋಮಾನ ಕೆಳಗಿನ 100 ಮೀಟರ್ ಹರ್ಡಲ್ಸ್ ಓಟದಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿ ಚಿನ್ನದ ಪದಕ ಗಳಿಸಿದ್ದಾರೆ.

100 ಮೀ. ಓಟವನ್ನು 13.98 ಸೆಕೆಂಡಿನಲ್ಲಿ ಕ್ರಮಿಸಿದ್ದಾರೆ. ತಮಿಳುನಾಡಿನ ಕೊಯಮತ್ತೂರಿನಲ್ಲಿ ನಡೆಯುತ್ತಿರುವ 38ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿ ಈ ಸಾಧನೆ ಮಾಡಿದ್ದಾರೆ. ಇವರು ಮೂಲತ ಮಡಿಕೇರಿ ನಿವಾಸಿ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ರಾಷ್ಟ್ರೀಯ ಅಥ್ಲೆಟ್ ತರಬೇತುದಾರ ಬೊಳ್ಳಂಡ ಅಯ್ಯಪ್ಪ ಹಾಗೂ ಮಾಜಿ ಒಲಂಪಿಯನ್ ಪ್ರಮೀಳ ಅಯ್ಯಪ್ಪ ದಂಪತಿಯ ಪುತ್ರಿಯಾಗಿದ್ದಾಳೆ.

ಚಾ.ನಗರದಲ್ಲಿ ಮೆಗಾ ಲೋಕ ಅದಾಲತ್ ಯಶಸ್ವಿ

ಹಲವು ಪ್ರಕರಣಗಳು ಇತ್ಯರ್ಥ

ಚಾಮರಾಜನಗರ, ಡಿ.9– ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲೂ ಶನಿವಾರ ನಡೆದ ಮೆಗಾ ಲೋಕ ಅದಾಲತ್‌ನಲ್ಲಿ ಹಲವು ಪ್ರಕರಣಗಳು ಇತ್ಯರ್ಥಗೊಂಡು, ಯಶಸ್ವಿಯಾಯಿತು.

ಜಿಲ್ಲಾ ಸೆಷನ್ಸ್ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶೆ ಬಿ.ಎಸ್.ಭಾರತಿ ಅವರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ ನಡೆದ ಲೋಕ ಅದಾಲತ್‌ನಲ್ಲಿ ಬಾಕಿ ಇರುವ ಬ್ಯಾಂಕ್ ವಸೂಲಾತಿ ಪ್ರಕರಣ, ಮೋಟಾರ್ ವಾಹನ ಅಪಘಾತ ಪ್ರಕರಣ, ಕೌಟುಂಬಿಕ ಪ್ರಕರಣಗಳು, ಕಾರ್ಮಿಕ ಸಂಬಂಧಿತ ವಿವಾದಗಳು, ಚೆಕ್ ಬೌನ್ಸ್ ಪ್ರಕರಣ, ಹಣ ವಸೂಲಾತಿ ಪ್ರಕರಣ, ಎಂಎಂಡಿಆರ್ ಕಾಯ್ದೆ ಪ್ರಕರಣ ಜನನ ನೋಂದಣಿ ಪ್ರಕರಣಗಳು, ಪಾಲು ವಿಭಾಗ, ದಾವೆ ಹಾಗೂ ಸಿವಿಲ್ ಪ್ರಕರಣಗಳು, ಕಂದಾಯ ಪ್ರಕರಣಗಳು ಸೇರಿದಂತೆ ಸಾವಿರಾರು ಪ್ರಕರಣಗಳನ್ನು ಯಶಸ್ವಿಯಾಗಿ ಇತ್ಯರ್ಥ ಪಡಿಸಲಾಯಿತು.

ಇತ್ಯರ್ಥಗೊಂಡ ಪ್ರಕರಣಗಳ ನಿಖರ ಸಂಖ್ಯೆ ಸದ್ಯಕ್ಕೆ ತಿಳಿದು ಬಂದಿಲ್ಲ. ನ್ಯಾಯಾಲಯದಲ್ಲಿರುವ ಬಾಕಿ ಪ್ರಕರಣ, ವ್ಯಾಜ್ಯ ಪೂರ್ವ ಪ್ರಕರಣ ಸೇರಿದಂತೆ 16 ಸಾವಿರಕ್ಕೂ ಹೆಚ್ಚು ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಗುರಿ ಹೊಂದಲಾಗಿತ್ತು ಹೀಗಾಗಿ,



ಸೋಮವಾರ ಅಥವಾ ಮಂಗಳವಾರ ಇತ್ಯರ್ಥಗೊಂಡ ಪ್ರಕರಣಗಳ ನಿಖರ ಮಾಹಿತಿ ತಿಳಿಯಲಿದ್ದು, ಗುರಿ ತಲುಪುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಉಳಿದಂತೆ ಜಿಲ್ಲೆಯ ಕೊಳ್ಳೇಗಾಲ, ಗುಂಡ್ಲುಪೇಟೆ, ಯಳಂದೂರಿನ ನ್ಯಾಯಾಲಯಗಳಲ್ಲೂ ಅದಾಲತ್ ಶನಿವಾರ ಯಶಸ್ವಿಯಾಗಿ ನಡೆದಿದ್ದು, ಸಾಕಷ್ಟು ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಳಿಸಲಾಗಿದೆ.

ಮೆಗಾ ಲೋಕ ಅದಾಲತ್ ಹಿನ್ನೆಲೆಯಲ್ಲಿ ಜಿಲ್ಲೆಯ ವಿವಿಧೆಡೆಯಿಂದ ಕಕ್ಷಿದಾರರು ನ್ಯಾಯಾಲಯಕ್ಕೆ ಬೆಳಗ್ಗೆಯೇ ಆಗಮಿಸಿದ್ದರು. ಬೆಳಗ್ಗೆ 11 ಗಂಟೆ ವೇಳೆಗೆ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಅದಾಲತ್ ಆರಂಭವಾಯಿತು. ವಕೀಲರು, ಕಕ್ಷಿದಾರರ ಸಮ್ಮುಖದಲ್ಲಿ ನ್ಯಾಯಾಧೀಶರು ಪ್ರಕರಣಗಳ ವಿಚಾರಣೆ ಮಾಡಿ ಬಹುತೇಕ ಪ್ರಕರಣಗಳನ್ನು ಸ್ಥಳದಲ್ಲೇ ಇತ್ಯರ್ಥಗೊಳಿಸಿದರು. ಉಳಿದಂತೆ ರಾಜಿಗೆ ಸಮ್ಮತಿಯಾಗದ ಪ್ರಕರಣಗಳಿಗೆ ಮುಂದಿನ ದಿನಾಂಕ ನೀಡಿದರು.

ಈ ವೇಳೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಬಿ.ಎಸ್.ಭಾರತಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಇಂದುಶೇಖರ್, ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷಸ್ವಾಮಿ ಸೇರಿದಂತೆ ಹಿರಿಯ ಹಾಗೂ ಕಿರಿಯ ವಕೀಲರು, ನ್ಯಾಯಾಲಯದ ಸಿಬ್ಬಂದಿ ಹಾಜರಿದ್ದರು.

10 ವರ್ಷದಿಂದ ಬಾಕಿ ಉಳಿದಿದ್ದ ಪ್ರಕರಣ ಇತ್ಯರ್ಥ

2012 ರಲ್ಲಿ ಆಸ್ತಿ ಹಂಚಿಕೆ ಸಂಬಂಧ ಹೂಡಿದ್ದ ದಾವೆಯೊಂದನ್ನು ಚಾಮರಾಜನಗರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ನಿವೇದಿತಾ ಅವರ ಸಮ್ಮುಖದಲ್ಲಿ ಇತ್ಯರ್ಥಪಡಿಸಲಾಯಿತು. ಈ ಮೂಲಕ ಸುಮಾರು 10 ವರ್ಷಗಳಿಂದ ನ್ಯಾಯಾಲಯದಲ್ಲಿದ್ದ ಪ್ರಕರಣ ಮುಕ್ತಾಯವಾಯಿತು.

3 ತಿಂಗಳ ಹಿಂದೆ ಅಪ್ರಾಪ್ತನೊಬ್ಬ ಬೈಕ್ ಚಾಲನೆ ಮಾಡಿದ ಸಂಬಂಧ ಚಾಮರಾಜನಗರ ಪೊಲೀಸರು ಆನ್‌ಲೈನ್ ಮೂಲಕ ಪ್ರಕರಣ ದಾಖಲಿಸಿಕೊಂಡಿದ್ದರು. ಈ ಸಂಬಂಧ ಅದಾಲತ್‌ನಲ್ಲಿ ಅಪ್ರಾಪ್ತನ ತಂದೆ ನ್ಯಾಯಾಲಯದಲ್ಲಿ ದಂಡ ಪಾವತಿಸಿ ಪ್ರಕರಣ ಇತ್ಯರ್ಥ ಪಡಿಸಿಕೊಂಡರು.

ಇದೇ ರೀತಿ ಜಿಲ್ಲಾ ನ್ಯಾಯಾಲಯದಲ್ಲಿ ಚೆಕ್ ಬೌನ್ಸ್, ಕೌಟುಂಬಿಕ, ಆಸ್ತಿ ವಿಭಾಗ ಸಂಬಂಧಿತ ಪ್ರಕರಣಗಳನ್ನು ಇತ್ಯರ್ಥಪಡಿಸುವ ಮೂಲಕ ಹಲವು ವರ್ಷಗಳಿಂದ ನ್ಯಾಯಾಲಯದಲ್ಲಿ ಬಾಕಿ ಉಳಿದಿದ್ದ ಪ್ರಕರಣಗಳನ್ನು ಮುಕ್ತಾಯಗೊಳಿಸಲಾಯಿತು.

ಗ್ರಾಮೀಣ ಜನರ ಆರೋಗ್ಯದ ದೃಷ್ಟಿಯಿಂದ

ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜನೆ: ಸುತ್ತೂರುಶ್ರೀ



ಗುಂಡ್ಲುಪೇಟೆ, ಡಿ.9– ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಗ್ರಾಮೀಣ ಜನರ ಆರೋಗ್ಯದ ದೃಷ್ಟಿಯಿಂದ ತಾಲೂಕು ಮಟ್ಟದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಸುತ್ತೂರು ಮಠಾಧ್ಯಕ್ಷ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಜೆಎಸ್‌ಎಸ್ ಅನುಭವ ಮಂಟಪದಲ್ಲಿ ಶನಿವಾರ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಈ ಹಿಂದೆ ನೈಸರ್ಗಿಕ ಆಹಾರ ಬಳಕೆಯಿಂದ ಗಟ್ಟಿ ಮುಟ್ಟಾಗಿದ್ದ ಜನರು ಇತ್ತೀಚಿನ ದಿನಗಳಲ್ಲಿ ರಾಸಾಯನಿಕಯುಕ್ತ ಆಹಾರ ಬಳಕೆಯಿಂದ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಆದರೆ ಎಷ್ಟೋ ಜನರು ತಮಗೆ ಏನಾದರೂ ಆಸ್ಪತ್ರೆಗೆ ಹೋಗದೆ ಮತ್ತಷ್ಟು ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಜೆಎಸ್‌ಎಸ್ ಆಸ್ಪತ್ರೆ ಕಳೆದ ಒಂದು ವರ್ಷದಿಂದ ತಾಲೂಕು ಮಟ್ಟದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿ ಇಲ್ಲಿವರೆಗೆ 6 ಸಾವಿರ ಮಂದಿಗೆ ಉಚಿತವಾಗಿ ತಪಾಸಣೆ ನಡೆಸಿದೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದವರಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡುತ್ತಿದೆ. ಮುಂದಿನ ದಿನಗಳಲ್ಲಿ ಮೈಸೂರಿನಲ್ಲಿ ಕ್ಯಾನ್ಸರ್ ಆಸ್ಪತ್ರೆ ಆರಂಭಿಸುವ ಚಿಂತನೆ ಇದ್ದು, ಗ್ರಾಮ ಮಟ್ಟದಲ್ಲಿ ಉಚಿತ ಆರೋಗ್ಯ ಶಿಬಿರ ಆಯೋಜಿಸಲು ಚಿಂತಿಸಲಾಗಿದೆ ಎಂದರು.

ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿ, ಉಚಿತ ಆರೋಗ್ಯ ತಪಾಸಣಾ ಶಿಬಿರಗಳು ಒಂದೆರಡು ದಿನಗಳಿಗೆ ಸೀಮಿತಗೊಳ್ಳುತ್ತಿದ್ದರೂ, ಜೆಎಸ್‌ಎಸ್ ಸಂಸ್ಥೆ ತಾಲೂಕಿನ ಜನರ ಬಗ್ಗೆ ಕಾಳಜಿ ಹೊಂದಿ ಕಳೆದ ವರ್ಷ ಕ್ಯಾಂಪ್ ನಡೆಸಿದೆ ಈ ವೇಳೆ ಸುಮಾರು 6 ಸಾವಿರ ಜನರಿಗೆ ಆರೋಗ್ಯ ತಪಾಸಣೆ ನಡೆಸಿ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡುತ್ತಿದೆ. ಕೊರೊನಾ ಸಂದರ್ಭ ಉತ್ತಮ ಸೇವೆ ಸಲ್ಲಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಜಿ ಶಾಸಕ ಸಿ.ಎಸ್.ನಿರಂಜನ ಕುಮಾರ್ ಮಾತನಾಡಿ, ಸುತ್ತೂರು ಮಠ ಗ್ರಾಮೀಣ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಜೊತೆಗೆ ಜನರ ಆರೋಗ್ಯ ತಪಾಸಣೆ ಮೂಲಕ ನೆರವಾಗುತ್ತಿದೆ ಎಂದ ಅವರು, ಇದೇ ವೇಳೆ ತಾಲೂಕಿನಲ್ಲಿ ಒಂದು ಆಸ್ಪತ್ರೆ ಆರಂಭಿಸಿ ಉತ್ತಮ ಆರೋಗ್ಯ ಸೌಲಭ್ಯ ದೊರಕುವಂತೆ ಮಾಡಬೇಕು ಎಂದು ಶ್ರೀಗಳನ್ನು ಮನವಿ ಮಾಡಿದರು.

ಈ ವೇಳೆ ಜೆಎಸ್‌ಎಸ್ ಆಸ್ಪತ್ರೆಯ ಡಾ.ಸಿ.ಪಿ. ಮಧು, ಚಿಕ್ಕತುಪ್ಪೂರು ಶಿವಪೂಜಾ ಮಠಾಧ್ಯಕ್ಷ ಚನ್ನವೀರಸ್ವಾಮೀಜಿ, ಕಾಡಾ ಮಾಜಿ ಅಧ್ಯಕ್ಷ ನಂಜಪ್ಪ, ಜಿಪಂ ಮಾಜಿ ಸದಸ್ಯ ಕೆ.ಎಸ್.ಮಹೇಶ್, ಪದವಿ ಕಾಲೇಜಿನ ಪ್ರಾಂಶುಪಾಲೆ ಡಾ.ಮಹದೇವಮ್ಮ, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಹೆಚ್.ಪಿ.ಬಸವರಾಜಪ್ಪ ಹಾಗೂ ಕಾಲೇಜಿನ ಸಿಬ್ಬಂದಿ ಭಾಗವಹಿಸಿದ್ದರು.

ಜಿಗುಪ್ಸೆ: ವ್ಯಕ್ತಿ ಆತ್ಮಹತ್ಯೆ

ಚಾಮರಾಜನಗರ: ಜೀವನದಲ್ಲಿ ಜಿಗುಪ್ಸೆಗೊಂಡ ವ್ಯಕ್ತಿಯೋರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶುಕ್ರವಾರ ತಾಲೂಕಿನ ಹೊನ್ನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ವಸಂತ್‌ಕುಮಾರ್ ಆತ್ಮಹತ್ಯೆ ಮಾಡಿಕೊಂಡವರು. ಈತ ಕಳೆದ 2 ವರ್ಷಗಳಹಿಂದೆಬೆಂಗಳೂರಿನಜ್ಯೋತಿ ಎಂಬಾಕೆಯನ್ನು ವಿವಾಹವಾಗಿದ್ದರು. ಆದರೆ ದಂಪತಿ ನಡುವೆ ಮನಸ್ತಾಪವಾಗಿ ದೂರವಾಗಿದ್ದರು. ಪತ್ನಿ ಜ್ಯೋತಿ ಬೆಂಗಳೂರಿನಲ್ಲಿದ್ದರೇ, ವಸಂತ್ ಕುಮಾರ್ ಸ್ವಗ್ರಾಮದಲ್ಲೇ ಇದ್ದರು. ಇದರಿಂದ ಮನನೊಂದಿದ್ದ ವಸಂತ್ ಮನನೊಂದು ಶುಕ್ರವಾರ ಮಧ್ಯಾಹ್ನ ಮನೆಯಿಂದ ಹೊರ ಹೋದವರು ಮನೆಗೆ ವಾಪಸ್ಸಾಗಿರಲಿಲ್ಲ. ಅಮರಹಳೆ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಸಂಬಂಧ ಮೃತನ ತಂದೆ ಮಹದೇವಚಾರಿ ನೀಡಿದ ದೂರಿನ ಮೇರೆಗೆ ಚಾ.ನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾವಯವ ಕೃಷಿಕರು, ಸಾವಯವ ಆಹಾರ ಬಳಸುವ ಗ್ರಾಹಕರ ಸಭೆ

ಚಾಮರಾಜನಗರ, ಡಿ.9– ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರ ಕನಸಿನ ಕೂಸಾದ ನಮ್ಮ ನೈಸರ್ಗಿಕ, ಸಹಜ, ಸಾವಯವ ಕೃಷಿ ಮಾರುಕಟ್ಟೆಯನ್ನು ಇನ್ನಷ್ಟು ಸಶಕ್ತವಾಗಿ ಬೆಳೆಸಬೇಕು. ಇಲ್ಲಿ ಸಿಗುವ ರಾಸಾಯನಿಕ ಮುಕ್ತ, ಕೀಟನಾಶಕ ಮುಕ್ತ ತರಕಾರಿ ಸೊಪ್ಪುಗಳ ಬಳಕೆಯಿಂದ ಗ್ರಾಹಕರಿಗೆ ಬಹಳ ಅನುಕೂಲವಾಗಿದೆ ಎಂದು ಗ್ರಾಹಕರು ತಿಳಿಸಿದರು.

ಶನಿವಾರ ನಗರದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ನಮ್ಮ ಅಂಗಡಿ ಮಳಿಗೆ ಆವರಣದಲ್ಲಿ ಸಾವಯವ ಕೃಷಿಕರು ಹಾಗೂ ಸಾವಯವ ಆಹಾರ ಬಳಸುವ ಗ್ರಾಹಕರ ಸಭೆಯಲ್ಲಿ ಗ್ರಾಹಕರಾದ ರೇಖಾ ಪ್ರಶಾಂತ್, ನಮ್ಮ ಅಂಗಡಿಯಲ್ಲಿ ನಾವು ಸಾವಯವ ಬೆಲ್ಲ, ತರಕಾರಿ ಸೊಪ್ಪು ಕೊಳ್ಳುತ್ತೇವೆ. ನಮಗೆ ರಾಸಾಯನಿಕ ಮುಕ್ತ ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆದ



ಪದಾರ್ಥ ಮಾರಾಟ ಮಾಡುತ್ತಿದ್ದಾರೆ. ಸಾವಯವ ಸಂತೆಯನ್ನು ವಾರದಲ್ಲಿ 2 ದಿನ ಆಯೋಜಿಸಬೇಕು. ಮಾರಾಟದ ಸಮಯ ನಿಗದಿಸಬೇಕು ಎಂದರು.

ಮತ್ತೊಬ್ಬ ಗ್ರಾಹಕರಾದ ಶಿಲ್ಪಕಲಾ ಮಾತನಾಡಿ, ನಮ್ಮ ಅಂಗಡಿಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ಆಹಾರ ಪದಾರ್ಥ ನಮಗೆ ದೊರಕುತ್ತಿರುವುದು ನಮ್ಮ ಆರೋಗ್ಯ ಸುಧಾರಣೆಗೆ ಪೂರಕವಾಗಿದೆ. ಈಗ ವಾರಕ್ಕೊಮ್ಮೆ ಸಂತೆ ಮಾಡಲಾಗುತ್ತಿದೆ. ಜೊತೆಗೆ ಪ್ರತಿ ದಿನವೂ ನಮ್ಮ ಅಂಗಡಿ ತೆರೆದಾಗ ಸಾವಯವ ಆಹಾರ ಪದಾರ್ಥ ಕೊಳ್ಳುವವರ ಸಂಖ್ಯೆ ಹೆಚ್ಚುತ್ತದೆ ಎಂದರು.

ಸಭೆ ಅಧ್ಯಕ್ಷತೆ ವಹಿಸಿದ್ದ ನಮ್ಮ ಮಾರುಕಟ್ಟೆ ನಿರ್ದೇಶಕ ಹೊನ್ನೂರು ಪ್ರಕಾಶ್ ಮಾತನಾಡಿ, ಸಾವಯವ ಕೃಷಿ ಮಾಡುವುದು ಹಿರಿಯ ರೈತ ಚೇತನ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರ ಕನಸಿನ ಕೂಸು. ಅವರ ಕನಸನ್ನು ನನಸು ಮಾಡುವುದೇ ನಮ್ಮ ಅಂಗಡಿ ಉದ್ದೇಶ. ಹಿಂದೆ ಮಳೆ ಆಶ್ರಯದಲ್ಲಿ ಒಂದು ಎಕರೆ ಭೂಮಿಯಲ್ಲಿ ನಾನಾ ಬೆಳೆ ಬೆಳೆಯುತ್ತಿದ್ದರು. ಯಾವುದೇ ರಾಸಾಯನಿಕ ಗೊಬ್ಬರ ಹಾಕುತ್ತಿರಲಿಲ್ಲ. ಪ್ರಸ್ತುತ ಎಲ್ಲಾ ಬೆಳೆಗೂ ರಾಸಾಯನಿಕ ಗೊಬ್ಬರ ಹಾಕುತ್ತಿದ್ದು, ತಿನ್ನುವ ಆಹಾರ ಕಲುಷಿತವಾಗುತ್ತಿದ್ದು, ನಮ್ಮ ಆರೋಗ್ಯದ ಜೊತೆಗೆ ಪರಿಸರವು ಹಾಳಾಗುತ್ತಿದೆ. ಹಾಗಾಗಿ ಸಹಜ ನೈಸರ್ಗಿಕ ಕೃಷಿ ಅನಿವಾರ್ಯ ಎಂದರು.

ರೈತರು ತಮ್ಮ ಬೆಳೆಯನ್ನು ಮೌಲ್ಯವರ್ಧನೆ ಮಾಡಬೇಕು. ಉದಾಹರಣೆಗೆ ರಾಗಿಯಿಂದ ಹಪ್ಪಳ, ಮಾಲ್ಟ್ ಮಾಡಿ ಮಾರಿದಾಗ ಹೆಚ್ಚಿನ ದರ ರೈತನಿಗೆ ಸಿಗುತ್ತದೆ. ಜೊತೆಗೆ ಗ್ರಾಹಕರಿಗೆ ವಿಷಮುಕ್ತ ಆಹಾರ ಒದಗಿಸಿದ ತೃಪ್ತಿ ಸಿಗುತ್ತದೆ ಎಂದರು.

ಅರ್ಧ ಎಕರೆ ಕೃಷಿ ಭೂಮಿ ಹೊಂದಿರುವ ರೈತರನ್ನು ಸಾವಯವ ಕೃಷಿಗೆ ಒಳಪಡಿಸಬೇಕು ಎಂಬ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಗ್ರಾಮಕ್ಕೆ 5 ಮಂದಿಯಂತೆ ಸದಸ್ಯರನ್ನಾಗಿ ಮಾಡಲು ಚಿಂತಿಸಲಾಗಿದೆ. ಗ್ರಾಹಕರು ಅಥವಾ ಕೃಷಿಕರು 1100 ರೂ. ಶುಲ್ಕ ಪಾವತಿಸಿ ಸದಸ್ಯತ್ವ ಪಡೆಯಬಹುದು. ರೈತರ ಉಳಿವಿಗೆ ಗ್ರಾಹಕರು ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಸಾವಯವ ಕೃಷಿಕ ಬಂದಿಗೌಡನಹಳ್ಳಿ ನಟರಾಜು ಮಾತನಾಡಿ, ಗ್ರಾಹಕರಿಗೆ ಉತ್ತಮ ಸಾವಯವ ಆಹಾರ ಪದಾರ್ಥಗಳನ್ನು ಪೂರೈಸಬೇಕಾದರೆ ಸಾವಯವ ಪದ್ಧತಿಯಲ್ಲಿ ಬೆಳೆಯುವ ರೈತರ ಸಂಖ್ಯೆ ಹೆಚ್ಚಾಗಬೇಕು ಎಂದರು.

ಸಭೆಯಲ್ಲಿ ಗ್ರಾಹಕ ಲೋಕಾಮೂರ್ತಿ ಮಾತನಾಡಿದರು. ಸಾವಯವ ಕೃಷಿಕರಾದ ಶಶಿಕುಮಾರ್, ದೇಪಾಪುರ ನಿಶ್ಚಯ್, ದೊಳ್ಳಿಪುರ ಕೃಷ್ಣ, ಸಂಜೀವ ಕುಮಾರ್, ಶಿವಾನಂದ್, ಮುತ್ತಣ್ಣ, ರವಿಕುಮಾರ್, ನಮ್ಮ ಅಂಗಡಿಯ ಲಕ್ಷ್ಮೀಸಾಗರ್ ಹಾಜರಿದ್ದರು.

ಕಣ್ಣ ಚಿತೆಯೊಳಗೆ ಉರಿವ ಕನಸು ಕವನ ಸಂಕಲನ ಬಿಡುಗಡೆ



ಕೊಳ್ಳೇಗಾಲ, ಡಿ.9– ಕೊಳ್ಳೇಗಾಲದ ಸಾಹಿತ್ಯ ಮಿತ್ರಕೂಟ ಸಹಯೋಗದಲ್ಲಿ ಅರುಣಾಲೇಶ್ವರ ಸಭಾಂಗಣದಲ್ಲಿ ಡಾ. ಕವಿತ ಡಿ.ಎಲ್. ಅವರ ಕಣ್ಣ ಚಿತೆಯೊಳಗೆ ಉರಿವ ಕನಸು ಕವನ ಸಂಕಲನವನ್ನು ಮೈಸೂರು ವಿಶ್ವ ವಿದ್ಯಾನಿಲಯ ಪ್ರಾಧ್ಯಾಪಕಿ ವಿಜಯಕುಮಾರಿ ಎಸ್. ಕರಿಕಲ್ ಬಿಡುಗಡೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಸಂಘರ್ಷದ ಬದುಕಿನಲ್ಲಿ ನಾವು ಜಂಜಾಟದ ಜೀವನ ನಡೆಸುತ್ತಿದ್ದೇವೆ. ಲೇಖನಕ್ಕೆ ಅಗಾಧ ಶಕ್ತಿ ಇದೆ. ಸಮಾಜದಲ್ಲಿನ ಆಗು–ಹೋಗುಗಳನ್ನು ಪ್ರಶ್ನಿಸುವ ಎದೆಗಾರಿಕೆಯೂ ಇದೆ. ಬದುಕು ಸಂಘರ್ಷವೇ ಸರಿ. ಇಲ್ಲಿ ಅನೇಕ ಏಳು ಬೀಳುಗಳನ್ನು ನಾವು ಕಾಣುತ್ತಿದ್ದು, ಅವುಗಳನ್ನು ಎದುರಿಸಿ ನಿಲ್ಲಲು ಬಲ ನೀಡುವುದೇ ನಿಜವಾದ ಸಾಹಿತ್ಯ ಎಂದರು.

ಈ ವೇಳೆ ವಿಶ್ರಾಂತ ಪ್ರಾಧ್ಯಾಪಕರು ಮಹದೇವ ಶಂಕನಪುರ, ಸಾಹಿತ್ಯ ಮಿತ್ರಕೂಟ ಅಧ್ಯಕ್ಷ ಮದ್ದೂರು ದೊರೆಸ್ವಾಮಿ, ಹಿರಿಯ ನಿರ್ದೇಶಕ ಚನ್ನಮಾದೇಗೌಡ, ಅರುಣಾಚಲ ಟ್ರಸ್ಟ್ ಕಾರ್ಯದರ್ಶಿ ಸುಂದ್ರೇಶ್ ಕುಮಾರ್, ಪಾಳ್ಯ ವಸತಿ ಶಾಲೆ ಪ್ರಾಂಶುಪಾಲ ಲಿಂಗರಾಜು, ಸತೀಶ್ ಇನ್ನಿತರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಯಳಂದೂರು: ಯಳಂದೂರು ವಿದ್ಯುತ್ ವಿತರಣಾ ಕೇಂದ್ರ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಡಿ.10ರಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ಯಳಂದೂರು ಪಟ್ಟಣ, ಯರಿಯೂರು, ಮದ್ದೂರು, ಆಲ್ಕೆರೆ, ಅಗ್ರಹಾರ ಬೂದಿತಿಟ್ಟು, ಎ.ದೇವರಹಳ್ಳಿ, ಟಿ.ಹೊಸೂರು, ವೈ.ಕೆ.ಮೋಳೆ, ಹೆಗ್ಗಡೆಹುಂಡಿ, ದಾಸನಹುಂಡಿ, ಕೆ.ದೇವರಹಳ್ಳಿ, ಕೃಷ್ಣಾಪುರ, ಗುಂಬಳ್ಳಿ, ಯರಗಂಬಳ್ಳಿ, ಬಿಳಿಗಿರಿರಂಗನಬೆಟ್ಟ, ಗೌಡಹಳ್ಳಿ, ಗಣಿಗನೂರು, ವಡಗೆರೆ, ಕೊಮಾರನಪುರ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಗೊಬ್ಬಳಿಪುರ ಹೊಸ ಕಂದಾಯ ಗ್ರಾಮ ರಚನೆ: ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

ಚಾಮರಾಜನಗರ: ಕೊಳ್ಳೇಗಾಲ ತಾಲೂಕು, ಕಸಬಾ ಹೋಬಳಿ, ತೇರಂಬಳ್ಳಿ ಮೂಲ ಕಂದಾಯ ಗ್ರಾಮದಿಂದ ಬೇರ್ಪಡಿಸಿ ಗೊಬ್ಬಳಿಪುರ ಎಂಬ ಹೊಸ ಕಂದಾಯ ಗ್ರಾಮ ರಚಿಸುವ ಸಂಬಂಧ ತೇರಂಬಳ್ಳಿ ಗ್ರಾಮದ ಸರ್ವೇ ನಂಬರ್ 38/ಬಿ ರಲ್ಲಿ 3–69 ಎಕರೆ ಪ್ರದೇಶಕ್ಕೆ ಜಿಲ್ಲಾಧಿಕಾರಿಯವರು ನಮೂನೆ 2ಇ ಅಧಿಸೂಚನೆ ಹೊರಡಿಸಿರುತ್ತಾರೆ. ಈ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ 15 ದಿನಗಳಲ್ಲಿ ಕೊಳ್ಳೇಗಾಲ ತಾಲೂಕು ತಹಸೀಲ್ದಾರ್ ಅವರಿಗೆ ಸಲ್ಲಿಸುವಂತೆ ತಹಸೀಲ್ದಾರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಭಾನುವಾರ 10 ಡಿಸೆಂಬರ್ 2023

ತೆಲಂಗಾಣ: ಕಾಂಗ್ರೆಸ್‌ನ 6 ಗ್ಯಾರಂಟಿಗಳ ಪೈಕಿ ಎರಡು ಯೋಜನೆಗಳಿಗೆ ಚಾಲನೆ ನೀಡಿದ ಸಿಎಂ ರೇವಂತ್ ರೆಡ್ಡಿ



ಹೈದರಾಬಾದ್, ಡಿ.9– ತೆಲಂಗಾಣ ವಿಧಾನಸಭಾ ಚುನಾವಣೆಗೂ ಮುನ್ನಾ ಕಾಂಗ್ರೆಸ್ ಘೋಷಿಸಿದ್ದ ಆರು ಗ್ಯಾರಂಟಿ ಯೋಜನೆಗಳ ಪೈಕಿ 2ಕ್ಕೆ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಶನಿವಾರ ಚಾಲನೆ ನೀಡಿದರು. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಮತ್ತು ಬಡವರಿಗೆ 10 ಲಕ್ಷ ರೂ. ಆರೋಗ್ಯ ವಿಮೆ ಒದಗಿಸುವ ಯೋಜನೆಗಳನ್ನು ಉದ್ಘಾಟಿಸಲಾಯಿತು.

ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಜನ್ಮದಿನದಂದು ಇಲ್ಲಿನ ಶಾಸಕಾಂಗ ಸಭಾಂಗಣದಲ್ಲಿ ಉಪಮುಖ್ಯಮಂತ್ರಿ ಮಲ್ಲು ಭಟ್ಟಿ ವಿಕ್ರಮಾರ್ಕ, ಹಲವಾರು ಸಚಿವರು, ಹಂಗಾಮಿ ಸ್ಪೀಕರ್ ಆಗಿರುವ ಎಐಎಂಐಎಂ ಶಾಸಕ ಅಕ್ಬರುದ್ದೀನ್ ಓವೈಸಿ ಅವರ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ರೇವಂತ್ ರೆಡ್ಡಿ ಎರಡು ಯೋಜನೆಗಳಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ, ತೆಲಂಗಾಣ ರಾಜ್ಯ ರಚನೆಯ ಭರವಸೆಯನ್ನು ಸೋನಿಯಾ ಗಾಂಧಿ ಅವರು ಈಡೇರಿಸಿದ ರೀತಿಯಲ್ಲಿ, ಕಾಂಗ್ರೆಸ್ ಸರ್ಕಾರ 100 ದಿನಗಳಲ್ಲಿ ಆರು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ತೆಲಂಗಾಣವನ್ನು ಜನರ ಕಲ್ಯಾಣ ಮತ್ತು ಅಭಿವೃದ್ಧಿಗೆ ಹೆಸರುವಾಸಿಯಾದ ರಾಜ್ಯವನ್ನಾಗಿ ಮಾಡಲು ಶ್ರಮಿಸುತ್ತದೆ ಎಂದರು. 2009ರ ಡಿಸೆಂಬರ್ 9 ರಂದು ಆಗಿನ ಯುಪಿಎ ಸರ್ಕಾರ ತೆಲಂಗಾಣ ರಾಜ್ಯವನ್ನು ಘೋಷಿಸಿದ್ದರಿಂದ ಡಿಸೆಂಬರ್ 9 ತೆಲಂಗಾಣಕ್ಕೆ ಹಬ್ಬದ ದಿನ ಎಂದು ಬಣ್ಣಿಸಿದರು. ರಾಜೀವ್ ಆರೋಗ್ಯಶ್ರೀ ಆರೋಗ್ಯ ಯೋಜನೆಯಡಿ ಬಡವರಿಗೆ 10 ಲಕ್ಷ ರೂ. ವಿಮೆ ಒದಗಿಸಲಾಗುತ್ತಿದೆ. ಮಹಾಲಕ್ಷ್ಮಿ ಯೋಜನೆಯಡಿ, ಮಹಿಳೆಯರು ಸರ್ಕಾರಿ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದಾಗಿದೆ.

ಇದೇ ಸಂದರ್ಭದಲ್ಲಿ ರೇವಂತ್ ರೆಡ್ಡಿ, ರಾಜ್ಯ ಸರ್ಕಾರದ ಪರವಾಗಿ ಕುಸ್ತಿಪಟು ನಿಖತ್ ಜರೀನ್ ಅವರಿಗೆ 2 ಕೋಟಿ ರೂ. ಚೆಕ್‌ನ್ನು ಹಸ್ತಾಂತರಿಸಿದರು.

ಮಂಗಳೂರು: ಇಬ್ಬರು ಡ್ರಗ್ಸ್ ಪೆಡ್ಲರ್‌ಗಳ ಬಂಧನ; ಆರು ಲಕ್ಷ ರೂ. ಮೌಲ್ಯದ ಡ್ರಗ್ಸ್ ವಶಕ್ಕೆ

ಮಂಗಳೂರು, ಡಿ.9– ನಗರದಲ್ಲಿ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ನಿಷೇಧಿತ ಮಾದಕ ವಸ್ತುವನ್ನು ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಇಬ್ಬರನ್ನು ಬಂಧಿಸಿರುವ ಇಲ್ಲಿನ ಕೇಂದ್ರ ಅಪರಾಧ ವಿಭಾಗದ ಪೊಲೀಸರು, ಅವರ ಬಳಿಯಿದ್ದ 6 ಲಕ್ಷ ರೂ. ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಪೊಲೀಸರು ನಗರದ ಕದ್ರಿ ಪಾರ್ಕ್‌ನಲ್ಲಿ ದಾಳಿ ನಡೆಸಿ ಇಬ್ಬರು ಆರೋಪಿಗಳಿಂದ ಮಾದಕ ವಸ್ತುವನ್ನು ವಶಪಡಿಸಿಕೊಂಡಿದ್ದಾರೆ. ಬಂಧಿತರನ್ನು ಕೇರಳದ ಕಾಸರಗೋಡು ಜಿಲ್ಲೆಯ ಮಂಜೇಶ್ವರದ ನವಾಝ್ (40) ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಅಜರುದ್ದೀನ್ ಅಲಿಯಾಸ್ ಅಜರ್ (39) ಎಂದು ಗುರುತಿಸಲಾಗಿದೆ.

ಆರೋಪಿಗಳಿಂದ 6 ಲಕ್ಷ ರೂ. ಮೌಲ್ಯದ 120 ಗ್ರಾಂ ಎಂಡಿಎಂಎಯನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಮೂರು ಮೊಬೈಲ್ ಫೋನ್‌ಗಳು, ಡಿಜಿಟಲ್ ತೂಕದ ಮಾಪಕ ಮತ್ತು ಮಾದಕ ದ್ರವ್ಯ ಮಾರಾಟಕ್ಕೆ ಬಳಸಲಾದ ಸ್ಕೂಟರ್ ಅನ್ನು ಸಹ ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಂಡ ವಸ್ತುಗಳ ಒಟ್ಟು ಮೌಲ್ಯ 6,83,120 ರೂ. ಎಂದು ಅಂದಾಜಿಸಲಾಗಿದೆ.

ಒಂದನೇ ಪುಟದಿಂದ

ಮಣ್ಣಲ್ಲಿ ಮಣ್ಣಾದ ಕನ್ನಡದ 'ಕುಲವಧು'

ಸಾಧುಕೋಕಿಲ, ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು, ಯುವ ನಟ ನವೀನ್ ಶಂಕರ್, ಭವ್ಯ, ಶ್ರುತಿ, ಉಮಾಶ್ರೀ, ಪೋಷಕ ನಟ ಹೊನ್ನವಳ್ಳಿ ಕೃಷ್ಣ, ಶ್ರೀನಿವಾಸ್ ಮೂರ್ತಿ, ರಮೇಶ್ ಭಟ್, ನಿರ್ದೇಶಕ ನಾಗಣ್ಣ, ಕನ್ನಡ ಹೋರಾಟಗಾರ ವಾಟಾಳ್ ನಾಗರಾಜ್, ಬ್ರಹ್ಮಾಂಡ ಗೂರೂಜಿ, ಪೋಷಕ ನಟರಾದ ಶಿವಕುಮಾರ್, ರಕ್ಷಾ, ಅಭಿನಯ, ಶೈಲಶ್ರೀ ಸೇರಿದಂತೆ ಸಾಕಷ್ಟು ಕಲಾವಿದರು, ಸಾರ್ವಜನಿಕರು, ಅಭಿಮಾನಿಗಳು ಲೀಲಾವತಿಯವರ ದರ್ಶನ ಪಡೆದರು. ನಾಲ್ಕೂವರೆ ದಶಕಗಳ ಕಾಲ ಕನ್ನಡ ಚಿತ್ರರಂಗದಲ್ಲಿ ಬಹುಬೇಡಿಕೆ ನಟಿಯಾಗಿ ಮಿಂಚಿದ್ದ ಹಿರಿಯ ನಟಿ ಲೀಲಾವತಿ ಅವರು ಬರೋಬ್ಬರಿ 600ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ. ಇವರ ಅಮೋಘ ಅಭಿನಯಕ್ಕೆ ಅಪಾರ ಸಂಖ್ಯೆಯ ಸಿನಿಪ್ರೇಮಿಗಳು ಮನಸೋತಿದ್ದರು. ಆದರೆ ಕೆಲವು ವರ್ಷಗಳಿಂದ ವಯೋಸಹಜ ಅನಾರೋಗ್ಯದಿಂದ ಅವರು ಬಳಲುತ್ತಿದ್ದರು. ಮನೆಯಲ್ಲೇ ಚಿಕಿತ್ಸೆ ಮುಂದುವರಿಸಲಾಗಿತ್ತು. ಇತ್ತೀಚೆಗೆ ಚಿತ್ರರಂಗ ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯಾತಿಗಣ್ಯರು ಲೀಲಾವತಿ ಅವರ ನಿವಾಸಕ್ಕೆ ಆಗಮಿಸಿ, ಆರೋಗ್ಯ ವಿಚಾರಿಸಿದ್ದರು. ಆದರೆ ಶುಕ್ರವಾರ ಸಂಜೆ ನೆಲಮಂಗಲದ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದರು.

ಸಿ.ಎಂ.ಇಬ್ರಾಹಿಂ, ಸಿ.ಕೆ.ನಾಣು ಉಚ್ಛಾಟನೆ

ಚುನಾವಣೆಯನ್ನು ಮೈತ್ರಿಕೂಟದೊಂದಿಗೆ ಎದುರಿಸುವುದು ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚಿಸುವ ನಿರ್ಧಾರಗಳನ್ನು ಕೈಗೊಂಡಿದ್ದಾರೆ. ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಉಚ್ಛಾಟನೆ ಮಾಹಿತಿ ನೀಡಿದ ದೇವೇಗೌಡರು, ಕೇಂದ್ರ ಚುನಾವಣಾ ಆಯೋಗದ ಸೂಚನೆಯಂತೆ ಇನ್ನು ಒಂದು ವರ್ಷದೊಳಗೆ ಪಕ್ಷದ ರಾಷ್ಟ್ರೀಯ ಘಟಕವನ್ನು ಪುನರ್ ರಚಿಸಲಾಗುವುದು. ಸಾಂಸ್ಥಿಕ ಚುನಾವಣೆಗೂ ಮುನ್ನ ರಾಷ್ಟ್ರಾದ್ಯಂತ ಸದಸ್ಯತ್ವ ನೋಂದಣಿ ಮಾಡಲಾಗುವುದು, ರಾಷ್ಟ್ರಾಧ್ಯಕ್ಷರು ಬದುಕಿರುವಾಗಲೇ ಉಪಾಧ್ಯಕ್ಷ ನಾಣು ಪರ್ಯಾಯ ಸಭೆ ನಡೆಸಲು ಮುಂದಾಗಿದ್ದರು ಇವರಿಗೆ ಈ ಅಧಿಕಾರ ಕೊಟ್ಟವರು ಯಾರು, ಇವರಿಗೆ ಯಾವ ನಿಯಮದಡಿ ಅವಕಾಶ ಇದೆ ಎಂಬ ಆಧಾರದ ಮೇಲೆ ಪಕ್ಷದಿಂದ ಉಚ್ಛಾಟನೆ ಮಾಡಲಾಗಿದೆ ಎಂದರು.

ಶಂಕಿತ ಭಯೋತ್ಪಾದಕನ ಬಂಧನ

ಈತನಿಂದ ಲ್ಯಾಪ್‌ಟ್ಯಾಪ್, ಮೊಬೈಲ್ ಫೋನ್, 16 ಲಕ್ಷ ರೂ. ನಗದು ಹಾಗೂ ಕೆಲವು ದಾಖಲೆಗಳನ್ನು ಎನ್‌ಐಎ ವಶಪಡಿಸಿಕೊಂಡಿದೆ. ಸ್ಥಳೀಯರ ಪ್ರಕಾರ, ಅಬ್ಬಾಸ್ ಕೆಲವು ವರ್ಷಗಳ ಹಿಂದೆ ಮುಂಬೈನಿಂದ ಆಗಮಿಸಿದ್ದು, ಟ್ಯಾನರಿ ರಸ್ತೆಯಲ್ಲಿ ವಾಸವಿದ್ದು, ಎಲ್ಲರೊಂದಿಗೂ ಸೌಮ್ಯದಿಂದ ಇರುತ್ತಿದ್ದ, ಯಾರೊಂದಿಗೂ ಹೆಚ್ಚು ಬೆರೆಯುತ್ತಿರಲಿಲ್ಲ. ಅಂಗಡಿ–ಮುಂಗಟ್ಟುಗಳಿಗೂ ಹೆಚ್ಚಾಗಿ ಹೋಗುತ್ತಿರಲಿಲ್ಲ. ಉರ್ದು ಶಾಲೆ ನಡೆಸುವ ಜೊತೆಗೆ ಸ್ಥಳೀಯರನ್ನು ಸೇರಿಸಿಕೊಂಡು ವಾಟ್ಸ್ ಆಪ್ ಗ್ರೂಪ್ ಮಾಡುತ್ತಿದ್ದ. ಈ ಗ್ರೂಪ್‌ನಲ್ಲಿ ತನ್ನ ಪರವಾಗಿ ಮಾತನಾಡುವವರನ್ನು ಮತ್ತೊಂದು ಗುಂಪಿಗೆ ಸೇರಿಸಿ ನಂತರ ಅದರ ಮೂಲಕ ಪ್ರಚೋದನೆ ನೀಡುವ ಹೇಳಿಕೆಗಳನ್ನು ಕಳುಹಿಸುತ್ತಿದ್ದ. ತುಂಬಾ ಹತ್ತಿರದವರಿಗೆ ವಾಟ್ಸ್ ಆಪ್ ಉಪಯೋಗಿಸಬೇಡಿ ಅದರ ಬದಲು, ಸುರಕ್ಷತೆಗಾಗಿ ಟೆಲಿಗ್ರಾಫ್ ಬಳಸುವಂತೆ ಪ್ರೇರೇಪಿಸುತ್ತಿದ್ದ. ತನಿಖಾಧಿಕಾರಿಗಳು ಬೆಳ್ಳಂ ಬೆಳಗ್ಗೆಯಿಂದಲೇ ಈ ಪ್ರದೇಶವನ್ನು ಸುತ್ತುವರಿದು ವಶಕ್ಕೆ ಪಡೆದರು. ಬೆಂಗಳೂರು ಅಷ್ಟೇ ಅಲ್ಲದೆ, ಮಹಾರಾಷ್ಟ್ರದ 43 ಕಡೆ ಎನ್‌ಐಎ ಏಕಕಾಲಕ್ಕೆ ದಾಳಿ ನಡೆಸಿ ಶಂಕಿತರನ್ನು ವಶಕ್ಕೆ ಪಡೆದಿದೆ.

ರಸ್ತೆ ದರೋಡೆ

ಹಣ ಮತ್ತು ಕಾರಿನೊಂದಿಗೆ ಪರಾರಿಯಾಗಿದ್ದಾರೆ. ಕತ್ತಲಾದ್ದರಿಂದ ಅವರಿಬ್ಬರು ತಾವು ಎಲ್ಲಿದ್ದೇವೆ ಎಂಬುದು ತಿಳಿಯದೆ ಒಂದೂವರೆ ಕಿ.ಮೀ ದೂರ ನಡೆದುಕೊಂಡು ಮುಖ್ಯ ರಸ್ತೆಗೆ ಬಂದಿದ್ದಾರೆ. ಮುಂಜಾನೆ ಸುಮಾರು 4 ಗಂಟೆಯಲ್ಲಿ ಪತ್ರಿಕೆ ಸಾಗಿಸುವ ವಾಹನವೊಂದರ ಸಹಾಯದಿಂದ ವಿರಾಜಪೇಟೆ ಪೊಲೀಸ್ ಠಾಣೆಗೆ ಬಂದು ನಡೆದ ಘಟನೆಯನ್ನು ವಿವರಿಸಿದ್ದಾರೆ ಎಂದು ಹೇಳಲಾಗಿದೆ.

ಇವರಿಬ್ಬರನ್ನು ದರೋಡೆಕೋರರು ಬಿಟ್ಟು ಹೋದ ಸ್ಥಳ ಗೋಣಿಕೊಪ್ಪ ಸಮೀಪದ ದೇವರಪುರ ಎಂದು ತಿಳಿದು ಬಂದಿದೆ. ನಂತರ ವಿರಾಜಪೇಟೆ ಪೊಲೀಸರೇ ಗೋಣಿಕೊಪ್ಪ ಪೊಲೀಸ್ ಠಾಣೆಗೆ ಅವರಿಬ್ಬನ್ನು ಕರೆದೊಯ್ದಿದ್ದಾರೆ. ಅಲ್ಲಿ ದೂರು ದಾಖಲಿಸಿದ್ದೇವೆ ಎಂದು ಶವ್ಜದ್ ಹೇಳಿಕೊಂಡಿದ್ದಾರೆ. ದೂರಿನನ್ವಯ ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ತಪಾಸಣೆ ನಡೆಸಿದಾಗ ಅಪಹರಿಸಲ್ಪಟ್ಟಿದ್ದ ಕಾರು ವಿರಾಜಪೇಟೆ ಬಳಿಯ ಕೊಳತೋಡು ಗ್ರಾಮ ವ್ಯಾಪ್ತಿಯಲ್ಲಿ ಪತ್ತೆಯಾಗಿದೆ. ಕಾರನ್ನು ಜಪ್ತಿಗೊಳಿಸಲಾಗಿದ್ದು, ಸ್ಥಳಕ್ಕೆ ಐಜಿ ಡಾ.ಬೋರಲಿಂಗಯ್ಯ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಭೇಟಿ ನೀಡಿ ಪರಿಶೀಲಿಸಿದರು.

ವಿಶೇಷ ತಂಡ ರಚನೆ: ಪ್ರಕರಣದ ತನಿಖೆಗೆ ವಿಶೇಷ ತಂಡವನ್ನು ರಚಿಸಲಾಗಿದ್ದು, ತಮ್ಮ ನೇತೃತ್ವದಲ್ಲಿ, ಹೆಚ್ಚುವರಿ ಎಸ್‌ಪಿ ಮತ್ತು ಡಿವೈಎಸ್‌ಪಿ ಮಾರ್ಗದರ್ಶನದಲ್ಲಿ ಮೂವರು ಇನ್ಸ್‌ಪೆಕ್ಟರ್‌ಗಳು ಹಾಗೂ 7 ಮಂದಿ ಸಬ್ ಇನ್ಸ್‌ಪೆಕ್ಟರ್‌ಗಳು ಕಾರ್ಯಾಚರಣೆ ನಡೆಸಲಿದ್ದಾರೆ ಎಂದು ಕೆ.ರಾಮರಾಜನ್ ತಿಳಿಸಿದ್ದಾರೆ.

ಕೂಚ್ ಬೆಹಾರ್ ಟ್ರೋಫಿ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿ

ಕರ್ನಾಟಕ ಮೊದಲ ಇನ್ನಿಂಗ್ಸ್‌ನಲ್ಲಿ 234ಕ್ಕೆ ಆಲೌಟ್

ಎರಡನೇ ಇನ್ನಿಂಗ್ಸ್‌ನಲ್ಲಿ 47 ರನ್‌ಗೆ 3 ವಿಕೆಟ್ ಕಳೆದುಕೊಂಡ ಉತ್ತರಪ್ರದೇಶ

ಮೈಸೂರು, ಡಿ.9(ಎಂಟಿವೈ)– ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಕರ್ನಾಟಕ ಹಾಗೂ ಉತ್ತರ ಪ್ರದೇಶದ ನಡುವೆ ನಡೆಯುತ್ತಿರುವ ಕೂಚ್ ಬೆಹಾರ್ ಟ್ರೋಫಿ ರಾಷ್ಟ್ರೀಯ ಪಂದ್ಯಾವಳಿಯ ಎರಡನೇ ದಿನದ ಆಟದಲ್ಲಿ ಕರ್ನಾಟಕ ಮೊದಲ ಇನ್ನಿಂಗ್ಸ್‌ನಲ್ಲಿ 78 ಓವರ್‌ನಲ್ಲಿ 234 ರನ್‌ಗಳಿಗೆ ಆಲೌಟ್ ಆದರೆ, ಎರಡನೇ ಇನ್ನಿಂಗ್ಸ್ ಆರಂಭಿಸಿರುವ ಉತ್ತರ ಪ್ರದೇಶ ದಿನದ ಅಂತ್ಯಕ್ಕೆ 23 ಓವರ್‌ನಲ್ಲಿ 3 ವಿಕೆಟ್ ಕಳೆದುಕೊಂಡು 47 ರನ್ ಗಳಿಸುವ ಮೂಲಕ 52 ರನ್‌ಗಳ ಮುನ್ನಡೆ ಕಾಯ್ದುಕೊಂಡಿದೆ.

ಉತ್ತರ ಪ್ರದೇಶದ ಸಂಘಟಿತ ಬೌಲಿಂಗ್ ದಾಳಿಗೆ ಹಾರ್ದಿಕ್ ರಾಜ್ ಅಜೇಯ 67ರನ್, ಕೆ.ಪಿ.ಕಾರ್ತಿಕೇಯ 49 ರನ್ ತಕ್ಕ ಉತ್ತರ ನೀಡಿದ್ದರೂ, ಉಳಿದ ಬ್ಯಾಟ್ಸ್‌ಮನ್‌ಗಳು ನಿರೀಕ್ಷಿತ ಪ್ರದರ್ಶನ ನೀಡುವಲ್ಲಿ ತತ್ತರಿಸಿದರು. ಇದರಿಂದ ಬೌಲರ್ ಶುಭಂ ಮಿತ್ರ 3 ವಿಕೆಟ್, ಹಿತೇಶ್ ಕುಮಾರ್ 2, ಯಸಿರ್ ಖಾನ್ 2 ವಿಕೆಟ್ ತನ್ನದಾಗಿಸಿಕೊಂಡರು.

ಮೊದಲ ದಿನದ ಅಂತ್ಯಕ್ಕೆ 11 ಓವರ್‌ನಲ್ಲಿ 2 ವಿಕೆಟ್ ನಷ್ಟಕ್ಕೆ 21 ರನ್ ಕಲೆ ಹಾಕಿದ್ದ ಕರ್ನಾಟಕ ತಂಡ ಪಂದ್ಯದ ಎರಡನೇ ದಿನವಾದ ಇಂದು ಆಟ ಮುಂದುವರಿಸಿತು. ತಂಡದ ಮೊತ್ತ 14.3 ಓವರ್‌ನಲ್ಲಿ 43 ರನ್ ಆಗಿದ್ದಾಗ ಮಾಧವ್ ದಾರ್ವಾಡಕರ್ 11 ರನ್ ಗಳಿಸಿ ಇಲ್ಲದ ರನ್ ಕದಿಯಲು ಹೋಗಿ ರನೌಟ್ ಆದರು. ಸಮಿತ್ ದ್ರಾವಿಡ್ ಜೊತೆ ಧ್ರುವ ಪ್ರಭಾಕರ್ ಇನ್ನಿಂಗ್ಸ್ ಕಟ್ಟುವ ಪ್ರಯತ್ನ ಮಾಡಿದರು. ಈ ವೇಳೆ 10 ರನ್ ಗಳಿಸಿದ್ದ ಧ್ರುವ ಪ್ರಭಾಕರ್ ಯಾಸಿರ್ ಖಾನ್ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆದರು. ಆಗ ತಂಡದ ಮೊತ್ತ 17.5 ಓವರ್‌ನಲ್ಲಿ 4 ವಿಕೆಟ್ ನಷ್ಟಕ್ಕೆ 55 ರನ್ ಆಗಿತ್ತು.

ಆರನೇ ವಿಕೆಟ್ ಜೊತೆಯಾಟದಲ್ಲಿ 52 ರನ್ ಗಳಿಸಿದ್ದ ಸಮಿತ್ ದ್ರಾವಿಡ್ ಹಾಗೂ ಕೆ.ಪಿ.ಕಾರ್ತಿಕೇಯ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 27 ರನ್ ಗಳಿಸಿದ್ದ ಸಮಿತ್ ದ್ರಾವಿಡ್ ಶುಭಂ ಮಿತ್ರ ಬೌಲಿಂಗ್‌ನಲ್ಲಿ ಆಕ್ಷಯ್ ದುಬೆಗೆ ಕ್ಯಾಚ್ ನೀಡಿ ಔಟಾದರು. ಆ ನಂತರ ನಾಯಕ ಧೀರಜ್‌ಗೌಡ 14 ರನ್ ಗಳಿಸಿದ್ದಾಗ ಔಟಾದರು. ಈ ವೇಳೆ 41.2 ಓವರ್‌ನಲ್ಲಿ ಪ್ರಮುಖ 6 ವಿಕೆಟ್ ಕಳೆದುಕೊಂಡು 135 ರನ್ ಗಳಿಸಿತ್ತು. ಈ ವೇಳೆ 6 ಬೌಂಡರಿಯೊಂದಿಗೆ 49 ರನ್ ಗಳಿಸಿದ್ದ ಕೆ.ಪಿ.ಕಾರ್ತಿಕೇಯ ಶುಭಂ ಮಿತ್ರ ಬೌಲಿಂಗ್‌ನಲ್ಲಿ ಬೌಲ್ಡ್ ಆಗುವ ಮೂಲಕ ಅರ್ಧ ಶತಕದಿಂದ ವಂಚಿತರಾಗಿ ಪೆವಿಲಿಯನ್ ಸೇರಿದರು. 143 ರನ್‌ಗೆ 7 ವಿಕೆಟ್ ಕಳೆದುಕೊಂಡಿದ್ದ ಕರ್ನಾಟಕ ತಂಡದ ಪರ ಹಾರ್ದಿಕ್ ರಾಜ್ ಏಕಾಂಗಿಯಾಗಿ ಹೋರಾಟ ಮಾಡಿದರು. 119 ಎಸೆತ ಎದುರಿಸಿದ ಹಾರ್ದಿಕ್ ರಾಜ್ 8 ಬೌಂಡರಿ, 1 ಸಿಕ್ಸರ್ ಸಿಡಿಸಿ ಅಜೇಯ 67 ರನ್ ಗಳಿಸಿ ಕರ್ನಾಟಕ ತಂಡವನ್ನು 200ರ ಗಡಿ ದಾಟಿಸಿದರು. 9ನೇ ಕ್ರಮಾಂಕದ ಆಟಗಾರ ನಿಶ್ಚಿತ್ ಎನ್. ಪೈ ಯಾವುದೇ ರನ್ ಗಳಿಸದೆ ಔಟಾದರೆ, 10ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಬೌಲರ್ ಎನ್.ಸಮರ್ಥ್ 9 ರನ್ ಹಾಗೂ 11ನೇ ಕ್ರಮಾಂಕದ ಆಟಗಾರ ಎಸ್.ಇಶಾನ್ 18 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. 10ನೇ ವಿಕೆಟ್ ಜೊತೆಯಾಟದಲ್ಲಿ 70 ರನ್ ಜೊತೆಯಾಟ ಬಂದಿದ್ದರಿಂದ ಕರ್ನಾಟಕ ಅಂತಿಮವಾಗಿ 234 ರನ್ ಗಳಿಸುವ ಮೂಲಕ ಉತ್ತರಪ್ರದೇಶದ ಮೊದಲ ಇನ್ನಿಂಗ್ಸ್‌ನಲ್ಲಿ 5 ರನ್ ಹಿನ್ನಡೆ ಅನುಭವಿಸಿತು.



ಸಂಕ್ಷಿಪ್ತ ಸ್ಕೋರ್

ಉತ್ತರ ಪ್ರದೇಶ ಮೊದಲ ಇನ್ನಿಂಗ್ಸ್ 77 ಓವರ್‌ನಲ್ಲಿ 239ಕ್ಕೆ ಆಲೌಟ್, ಎರಡನೇ ಇನ್ನಿಂಗ್ಸ್‌ನಲ್ಲಿ ದಿನದ ಅಂತ್ಯಕ್ಕೆ 23 ಓವರ್‌ನಲ್ಲಿ 3 ವಿಕೆಟ್ ನಷ್ಟಕ್ಕೆ 47 ರನ್ (ಮುನ್ನಡೆ 52 ರನ್) ಕರ್ನಾಟಕ ಮೊದಲ ಇನ್ನಿಂಗ್ಸ್‌ನಲ್ಲಿ 78 ಓವರ್‌ನಲ್ಲಿ 234 ರನ್‌ಗೆ ಆಲೌಟ್

ಉತ್ತರ ಪ್ರದೇಶ ಪರ ಬೌಲರ್‌ಗಳಾದ ಹಿತೇಶ್ ಕುಮಾರ್ 13 ಓವರ್‌ನಲ್ಲಿ 42 ರನ್ ನೀಡಿ 2 ವಿಕೆಟ್ ಪಡೆದರೆ, ಯಾಸಿರ್ ಖಾನ್ 14 ಓವರ್‌ನಲ್ಲಿ 45 ರನ್ ನೀಡಿ 2 ವಿಕೆಟ್, ಶುಭಂ ಮಿತ್ರ 25 ಓವರ್‌ನಲ್ಲಿ 48 ರನ್ನಿತ್ತು 3 ವಿಕೆಟ್ ಕಬಳಿಸಿದರು. ಆದಿತ್ಯ ಕುಮಾರ್ ಸಿಂಗ್ 16 ಓವರ್‌ನಲ್ಲಿ 58 ರನ್ ನೀಡಿ 1, ಆರುಶ್ ಗೋಯಲ್ 6 ಓವರ್‌ನಲ್ಲಿ 20 ರನ್‌ಗೆ 1, ಯಶು ಪ್ರಧಾನ್ 3 ಓವರ್‌ನಲ್ಲಿ 8 ರನ್, ಕಾವ್ಯ ಟಿಯೋಟಿಯ 1 ಓವರ್‌ನಲ್ಲಿ 6 ರನ್ ನೀಡಿದರು.

ಉತ್ತರ ಪ್ರದೇಶದ ಎರಡನೇ ಇನ್ನಿಂಗ್ಸ್: ಮೊದಲ ಇನ್ನಿಂಗ್ಸ್‌ನಲ್ಲಿ ಆತಿಥೇಯ ಕರ್ನಾಟಕದ ವಿರುದ್ಧ 5 ರನ್‌ಗಳ ಮುನ್ನಡೆ ಸಾಧಿಸಿದ ಉತ್ತರ ಪ್ರದೇಶ ಎರಡನೇ ಇನ್ನಿಂಗ್ಸ್ ಆರಂಭಿಸಿತು. ಇನ್ನಿಂಗ್ಸ್‌ನ ಮೊದಲ ಎಸೆತದಲ್ಲಿಯೇ ಉತ್ತರ ಪ್ರದೇಶ ಆರಂಭಿಕ ಆಟಗಾರ ಮನವ್ ಸಿಂಧು ಯಾವುದೇ ರನ್ ಗಳಿಸದೆ ಎನ್.ಸಮರ್ಥ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಬಳಿಕ ಆರಂಭಿಕ ಆಟಗಾರ ಇನ್ಜಮಾಮ್ ಹುಸೈನ್ ಜೊತೆ ನಾಯಕ ಯಶು ಪ್ರಧಾನ್ ಆಟ ಮುಂದುವರೆಸುವ ಪ್ರಯತ್ನ ಮಾಡಿದರು. ಆದರೆ, ಇನ್ನಿಂಗ್ಸ್‌ನ 4ನೇ ಓವರ್‌ನಲ್ಲಿ ಬೌಲಿಂಗ್ ಮಾಡಲು ಬಂದ ಎನ್.ಸಮರ್ಥ್ ತನ್ನದೇ ಬೌಲಿಂಗ್‌ನಲ್ಲಿ ಹಿಡಿದ ಉತ್ತಮ ಕ್ಯಾಚ್‌ಗೆ 4 ರನ್ ಗಳಿಸಿದ್ದ ಯಶು ಪ್ರಧಾನ್ ಬಲಿಯಾದರು. 4 ರನ್ ಗಳಿಸುವಷ್ಟರಲ್ಲಿ ಎರಡು ವಿಕೆಟ್ ಕಳೆದುಕೊಂಡಿದ್ದ ಉತ್ತರ ಪ್ರದೇಶಕ್ಕೆ 6ನೇ ಓವರ್ ಬೌಲಿಂಗ್ ಮಾಡಲು ಬಂದ ಎನ್. ಸಮರ್ಥ್ ಮತ್ತೆ ಆಘಾತವನ್ನುಂಟು ಮಾಡಿದರು. ತಂಡದ ಮೊತ್ತ 6.4 ಓವರ್‌ನಲ್ಲಿ 17 ರನ್ ಆಗಿದ್ದಾಗ 6 ರನ್ ಗಳಿಸಿದ್ದ ಆರಂಭಿಕ ಆಟಗಾರ ಇನ್ಜಮಾಮ್ ಹುಸೈನ್ ಪ್ರಕರ್ ಚತುರ್ವೇದಿಗೆ ಕ್ಯಾಚ್ ನೀಡಿ ನಿರ್ಗಮಿಸಿದರು.

ಅಲ್ಪ ಮೊತ್ತಕ್ಕೆ ಪ್ರಮುಖ 3 ವಿಕೆಟ್ ಕಳೆದುಕೊಂಡಿದ್ದ ಉತ್ತರ ಪ್ರದೇಶಕ್ಕೆ ಕಾವ್ಯ ಟಿಯೋಟಿಯ 61 ಎಸೆತ ಎದುರಿಸಿ 2 ಬೌಂಡರಿಯೊಂದಿಗೆ ಅಜೇಯ 26 ರನ್, ಸುಶಾಂತ್ 45 ಎಸೆತದಲ್ಲಿ ಅಜೇಯ 8ರನ್ ಗಳಿಸಿ ಕ್ರೀಸ್ ಕಾಯ್ದುಕೊಂಡಿದ್ದಾರೆ. ದಿನದ ಅಂತ್ಯಕ್ಕೆ ಉತ್ತರ ಪ್ರದೇಶ 23 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 47 ರನ್ ಗಳಿಸಿದೆ. ಮೊದಲ ಇನ್ನಿಂಗ್ಸ್‌ನ 5 ರನ್ ಮುನ್ನಡೆಯೊಂದಿಗೆ ಉತ್ತರ ಪ್ರದೇಶ ಎರಡನೇ ದಿನದ ಅಂತ್ಯಕ್ಕೆ 52 ರನ್ ಮುನ್ನಡೆ ಕಾಯ್ದುಕೊಂಡಿದೆ.

ಕರ್ನಾಟಕದ ಪರ ಎನ್.ಸಮರ್ಥ್ 6 ಓವರ್‌ನಲ್ಲಿ 16 ರನ್‌ಗೆ 3 ವಿಕೆಟ್ ಕಬಳಿಸಿದ್ದಾರೆ. ಉಳಿದಂತೆ ಎಸ್.ಇಶಾನ್ 3 ಓವರ್‌ನಲ್ಲಿ 7 ರನ್, ಹಾರ್ದಿಕ್ ರಾಜ್ 7 ಓವರ್‌ನಲ್ಲಿ 10 ರನ್, ಧೀರಜ್‌ಗೌಡ 3 ಓವರ್‌ನಲ್ಲಿ 1ರನ್, ಧ್ರುವ್ ಪ್ರಭಾಕರ್ 3 ಓವರ್‌ನಲ್ಲಿ 5ರನ್ ಹಾಗೂ ಕೆ.ಪಿ.ಕಾರ್ತಿಕೇಯ 1 ಓವರ್‌ನಲ್ಲಿ 5 ರನ್ ನೀಡಿದ್ದಾರೆ.

ಅರ್ಜುನನ ಸಾವಿನ ಸಂಬಂಧ ತನಿಖೆ ; ತಪ್ಪಿತಸ್ಥರಿಗೆ ಶಿಕ್ಷೆಗೆ ಆಗ್ರಹಿಸಿ ಮೈಸೂರು ಕನ್ನಡ ವೇದಿಕೆ ಪ್ರತಿಭಟನೆ



ಮೈಸೂರು, ಡಿ.9(ಜಿಎ)–ದಸರಾ ಆನೆ ಅರ್ಜುನನ ಸಾವಿನ ಬಗ್ಗೆ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಅರಮನೆ ಬಳಿ ಇರುವ ರಾಜ್‌ಕುಮಾರ್ ಉದ್ಯಾನವನದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು ದಸರಾ ಮಹೋತ್ಸವದಲ್ಲಿ 8 ವರ್ಷಗಳ ಕಾಲ ಯಶಸ್ವಿಯಾಗಿ ಚಿನ್ನದ ಅಂಬಾರಿ ಹೊತ್ತು ನಾಡಿನ ಜನತೆಯ ಮನಗೆದ್ದಿದ್ದ ಅರ್ಜುನನ ಆಕಸ್ಮಿಕ ಸಾವು ದಿಗ್ಭ್ರಮೆ ಮೂಡಿಸಿದೆ. ಶಕ್ತಿ, ಸಾಮರ್ಥ್ಯ, ಗಾಂಭೀರ್ಯತೆಗೆ ಹೆಸರುವಾಸಿಯಾಗಿದ್ದ ಅರ್ಜುನನ ಸಾವಿಗೆ ಅರಣ್ಯ ಇಲಾಖೆಯ ನಿರ್ಲಕ್ಷ್ಯವೇ ಕಾರಣ ಎಂದು ಕಿಡಿಕಾರಿದರು.

ಅರ್ಜುನನ ಪಾತ್ರ ಕೇವಲ ದಸರಾಗೆ ಮಾತ್ರ ಸೀಮಿತವಾಗಿರಲಿಲ್ಲ. ಕಾಡಿನ ಅಂಚಿನ ಪ್ರದೇಶಗಳಲ್ಲಿ ಹುಲಿ, ಕಾಡಾನೆ ಸೆರೆಗೂ ಬಳಸಿಕೊಳ್ಳಲಾಗುತ್ತಿತ್ತು. ಇಲಾಖೆಯ ಕೆಲಸವನ್ನು ಅತ್ಯಂತ ನಿಷ್ಠೆ ಹಾಗೂ ಪ್ರಾಮಾಣಿಕವಾಗಿ ನಿಭಾಯಿಸಿ, ಇಲಾಖೆಯ ವಿಶ್ವಾಸಕ್ಕೆ ಪಾತ್ರನಾಗಿದ್ದ. ದುರಂತವೆಂದರೆ ಇದಕ್ಕೆ ತದ್ವಿರುದ್ಧವಾಗಿ ಅರಣ್ಯ ಇಲಾಖೆಯೇ ಅರ್ಜುನನ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಂಡು ಅರ್ಜುನನ ಸುರಕ್ಷತೆಯ ಬಗ್ಗೆ ನಿಗಾವಹಿಸದೆ ಆತನ ದಾರುಣ ಸಾವಿಗೆ ಕಾರಣವಾಗಿರುವುದು ದೊಡ್ಡ ದುರಂತ.

ರಾಜ್ಯದ ಅರಣ್ಯ ಇಲಾಖೆ ಒಂದು ಕಾಲದಲ್ಲಿ ಆನೆ ಹಿಡಿದು ಪಳಗಿಸುವುದರಲ್ಲಿ ದೇಶಕ್ಕೇ ಹೆಸರುವಾಸಿಯಾಗಿತ್ತು. ನುರಿತ ಸಾಕಾನೆಗಳ, ಮಾವುತರು, ಕಾವಾಡಿಗಳು ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಕಾಡಾನೆ ಹಿಡಿದು ಪಳಗಿಸಿದ ನಿದರ್ಶನಗಳಿವೆ. ಆದರೆ ಇತ್ತೀಚೆಗೆ ಅರಣ್ಯ ಇಲಾಖೆಯಲ್ಲಿ ಅನುಭವಿ ವೈದ್ಯರ ಕೊರತೆಯಿಂದ ಇಂತಹ ದುರ್ಘಟನೆಗಳು ನಡೆಯುತ್ತಿವೆ. ಅರ್ಜುನನ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಅವನ ಸಾವಿಗೆ ಕಾರಣರಾದವರು ಯಾರೇ ಆಗಿದ್ದರೂ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಬಾಲಕೃಷ್ಣ, ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ ಪ್ಯಾಲೇಸ್ ಬಾಬು, ಗೋಪಿ, ಅರವಿಂದ್, ಕಾವೇರಮ್ಮ ಮಾಲಿನಿ, ಪುಷ್ಪಲತಾ, ಹರೀಶ್, ಸ್ವಾಮಿ ಗೈಡ್, ಮಹದೇವಸ್ವಾಮಿ, ಸುನೀಲ್, ಶಿವಣ್ಣ ನಾಯಕ, ರಾಜೇಶ್, ಗೋವಿಂದರಾಜು, ಮದನ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಡಿ.12, 13 ಮೈಸೂರಲ್ಲಿ ಫ್ಯಾಷನ್ ಸಂಭ್ರಮ

ಮೈಸೂರು, ಡಿ.9–ಫ್ಯಾಷನಿಸ್ಟಾ ಗ್ರೂಪ್ ಆಫ್ ಎಕ್ಸಿಬಿಷನ್ ವತಿಯಿಂದ ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಡಿ.12 ಮತ್ತು 13ರಂದು ಬೆಳಗ್ಗೆ 11ರಿಂದ ರಾತ್ರಿ 9ರವರೆಗೆ ಫ್ಯಾಷನಿಸ್ಟಾ ಪ್ರದರ್ಶನದ 4ನೇ ಆವೃತ್ತಿ ಏರ್ಪಡಿಸಲಾಗಿದೆ. ದಿಯಾ ಫೌಂಡೇಷನ್ ಸಂಸ್ಥಾಪಕ ಟ್ರಸ್ಟಿ ಶ್ರೀಮತಿ ನಮ್ರತಾ ಶೆಣೈ, ಜುನೂ ಅಬ್ಲು ವಾಲಿಯಾ, ಸುಕೃತ ಇನ್ಫೋಟೆಕ್ ನಿರ್ದೇಶಕಿ ಸುಮಾ ಕೃಷ್ಣ, ಪಾಕಶಾಲೆ ಉದ್ಯಮಿ ರತಿ ವಿಕ್ರಮ್, ಪಲ್ಲವಿ ಆದರ್ಶ ಎ.ಶಂಕರ ಶೆಟ್ಟಿ ಅಂಡ್ ಸನ್ಸ್, ಚಿತ್ರನಟ ಪವನ್ ಶಂಕರ್ ಉಪಸ್ಥಿತಿಯಲ್ಲಿ ಫ್ಯಾಷನಿಸ್ಟ್‌ಗಳು ಈ ಫ್ಯಾಷನ್ ಸಂಭ್ರಮವನ್ನು ಉದ್ಘಾಟಿಸಲಿದ್ದಾರೆ.

ಸಾಫ್ಟ್‌ವೇರ್ ಇಂಜಿನಿಯರ್ ಮೇಲೆ ಹಲ್ಲೆ ನಡೆಸಿ 65 ಗ್ರಾಂ. ಚಿನ್ನದ ಸರ ಸುಲಿಗೆ

ಚಾಮರಾಜನಗರ, ಡಿ.9–ಚಾಮರಾಜನಗರ ತಾಲೂಕಿನಲ್ಲಿ ಫಾರಂಹೌಸ್ ಹೊಂದಿರುವ ಸಾಫ್ಟ್‌ವೇರ್ ಇಂಜಿನಿಯರ್ ಮೇಲೆ ಹಲ್ಲೆ ನಡೆಸಿ 65 ಗ್ರಾಂ ತೂಕದ ಚಿನ್ನದ ಸರ ದರೋಡೆ ಮಾಡಿರುವ ಘಟನೆ ಚಾಮರಾಜನಗರ–ಕಾಳನಹುಂಡಿ ಮುಖ್ಯ ರಸ್ತೆಯ ಮಣಚನಹಳ್ಳಿ ಬಳಿ ನಡೆದಿದೆ.

ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ವಿಶ್ವನಾಥ್(48) ಸರ ಕಳೆದುಕೊಂಡವರಾಗಿದ್ದು, ಕೃಷಿಯಲ್ಲಿ ಆಸಕ್ತಿ ಹೊಂದಿರುವ ಇವರು ಮಣಚನಹಳ್ಳಿ ಬಳಿ ಫಾರಂಹೌಸ್ ಹೊಂದಿದ್ದಾರೆ. ಡಿ.6ರಂದು ಸಂಜೆ ಇವರು ತಮ್ಮ ಫಾರಂಹೌಸ್ ಬಳಿ ಕುದುರೆ ಸವಾರಿ ಮಾಡುತ್ತಿದ್ದಾಗ ಹಠಾತ್ತನೆ ಪೊದೆಯೊಂದರಿಂದ ಪ್ರತ್ಯಕ್ಷನಾದ ಖದೀಮ ಇವರ ಕುದುರೆಯನ್ನು ಹಿಡಿದುಕೊಂಡು ಅವಾಚ್ಯ ಪದಗಳಿಂದ ನಿಂದಿಸಲಾರಂಭಿಸಿದ್ದಾನೆ. ಕೆಲವೇ ನಿಮಿಷಗಳಲ್ಲಿ ಒಬ್ಬೊಬ್ಬರಾಗಿ ಮತ್ತೆ ಮೂರು ಮಂದಿ ಪೊದೆಯಿಂದ ಹೊರ ಬಂದು ಇವರ ಮೇಲೆ ಹಲ್ಲೆ ನಡೆಸಿ ಅವರ ಕುತ್ತಿಗೆಯಲ್ಲಿದ್ದ 65 ಗ್ರಾಂ ತೂಕದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ವಿಶ್ವಾನಾಥ್ ನೀಡಿದ ದೂರಿನನ್ವಯ ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 394ರಡಿ (ದರೋಡೆ) ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರೆಸಿದ್ದಾರೆ.

ಕಮಿಷನ್ ಆಸೆಗೆ ಬಿದ್ದು 5.50 ಲಕ್ಷ ಕಳೆದುಕೊಂಡ ಯುವಕ

ಮಂಡ್ಯ, ಡಿ.9–ಹೋಟೆಲ್‌ಗಳಿಗೆ 5 ಸ್ಟಾರ್ ರೇಟಿಂಗ್ ನೀಡಿದರೆ ದೊಡ್ಡ ಮೊತ್ತದ ಕಮಿಷನ್ ಪಡೆಯಬಹುದು ಎಂದು ನಂಬಿಸಿ ಯುವಕನಿಗೆ ಆನ್‌ಲೈನ್ ಮೂಲಕ 5.50 ಲಕ್ಷ ರೂ. ವಂಚಿಸಲಾಗಿದೆ.

ಮಂಡ್ಯ ನಗರದ ಸಿ.ಎಲ್.ಕಿರಣ್(28) ವಂಚನೆಗೊಳಗಾದವರಾಗಿದ್ದು, ಇವರ ಟೆಲಿಗ್ರಾಂ ಆ್ಯಪ್‌ಗೆ ಕಂಪನಿಯೊಂದರ ಹೆಸರಿನಲ್ಲಿ ಪಾರ್ಟ್‌ಟೈಮ್ ಜಾಬ್ ಬಗ್ಗೆ ಮಾಹಿತಿ ಬಂದಿದೆ. ನಂತರ ಇವರೊಂದಿಗೆ ಸಂವಹನ ನಡೆಸಿದ ವಂಚಕರು, ಆ್ಯಪ್‌ನಲ್ಲಿ ತೋರಿಸಿರುವ ಹೋಟೆಲ್‌ಗಳಿಗೆ 5 ಸ್ಟಾರ್ ರೇಟಿಂಗ್ ನೀಡಿದರೆ ದೊಡ್ಡ ಮೊತ್ತದ ಕಮಿಷನ್ ದೊರೆಯುತ್ತದೆ ಎಂದು ಆಮಿಷ ವೊಡ್ಡಿದ್ದಾರೆ. ಮೊದಲಿಗೆ ಕಿರಣ್ ಖಾತೆಗೆ 2 ಸಾವಿರ ರೂ. ಜಮೆ ಮಾಡಿದ ವಂಚಕರು, 10 ಸಾವಿರ ರೂ. ಡೆಪಾಸಿಟ್ ಮಾಡಿ ಟಾಸ್ಕ್ ಕಂಪ್ಲೀಟ್ ಮಾಡುವಂತೆ ತಿಳಿಸಿದ್ದಾರೆ. ಅದರಂತೆ ಅವರು 10 ಸಾವಿರ ರೂ. ಡೆಪಾಸಿಟ್ ಮಾಡಿದಾಗ ಅವರ ಖಾತೆಗೆ ಕಮಿಷನ್ ಸೇರಿ 14 ಸಾವಿರ ರೂ.ಗಳನ್ನು ಜಮೆ ಮಾಡುವ ಮೂಲಕ ನಂಬಿಸಲಾಗಿದೆ. ನಂತರ ಹಂತ ಹಂತವಾಗಿ 5.50 ಲಕ್ಷ ರೂ.ಗಳನ್ನು ಡೆಪಾಸಿಟ್ ಮಾಡಿಸಿಕೊಂಡು ವಂಚಿಸಲಾಗಿದೆ. ಈ ಸಂಬಂಧ ಮಂಡ್ಯ ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಲ್ಲಿ ನ್ಯಾಯಾಲಯದ ಕಲಾಪಗಳಿಂದ ದೂರ ಉಳಿದ ವಕೀಲರು; ನಡೆಯದ ರಾಷ್ಟ್ರೀಯ ಲೋಕ್ ಅದಾಲತ್

ನ್ಯಾಯಾಧೀಶರು, ಸಿಬ್ಬಂದಿ ಉಪಸ್ಥಿತಿ; ಕಕ್ಷಿದಾರರು ಹಾಜರಾದರೂ ವಕೀಲರಿಲ್ಲದೆ ರಾಜೀ ಪ್ರಕ್ರಿಯೆ ಮುಂದೂಡಿಕೆ

ಮೈಸೂರು, ಡಿ.9(ಬಿಎಲ್‌ಯು)– ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗೆ ಆಗ್ರಹಿಸಿ ನ್ಯಾಯಾಲಯದ ಕಲಾಪಗಳಿಂದ ವಕೀಲರು ದೂರ ಉಳಿದ ಹಿನ್ನೆಲೆಯಲ್ಲಿ ಇಂದು ಉದ್ದೇಶಿತ 4ನೇ ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿಲ್ಲ.

ಕಲ್ಬುರ್ಗಿಯಲ್ಲಿ ವಕೀಲರೊಬ್ಬರ ಹತ್ಯೆ, ಚಿಕ್ಕಮಗಳೂರಿನಲ್ಲಿ ವಕೀಲರ ಮೇಲೆ ತೀವ್ರ ಹಲ್ಲೆ ಪ್ರಕರಣದ ಹಿನ್ನೆಲೆಯಲ್ಲಿ ನ್ಯಾಯವಾದಿಗಳಿಗೆ ರಕ್ಷಣೆ ದೊರಕಿಸುವ ನಿಟ್ಟಿನಲ್ಲಿ ವಕೀಲರ ಸಂರಕ್ಷಣಾ ಕಾಯ್ದೆ ಜಾರಿ ಮಾಡುವಂತೆ ಆಗ್ರಹಿಸಿ ಮೈಸೂರು ವಕೀಲರ ಸಂಘ ಎರಡು ದಿನದಿಂದ ನ್ಯಾಯಾಲಯದ ಕಾರ್ಯಕಲಾಪಗಳಿಂದ ದೂರ ಉಳಿದಿದೆ.

ಈ ಬಾರಿಯ ವಿಧಾನಸಭಾ ಅಧಿವೇಶನದಲ್ಲಿ ವಕೀಲರ ಸಂರಕ್ಷಣಾ ಕಾಯ್ದೆ ಮಂಡಿಸಿ ಅನುಮೋದನೆ ಪಡೆದ ನಂತರ ಜಾರಿ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದರು. ಆದರೆ ವಕೀಲರ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿದ್ದರೂ ಸರ್ಕಾರ ನಮ್ಮ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂದು ವಕೀಲರು ಈ ವೇಳೆ ಆಕ್ರೋಶ ವ್ಯಕ್ತಪಡಿಸಿದರು.

ಈ ಕಾರಣದಿಂದ ವಕೀಲರು ಇಂದು ಕೂಡ ನ್ಯಾಯಾಲಯದ ಕಾರ್ಯ ಕಲಾಪಗಳಿಂದ ದೂರ ಉಳಿದಿದ್ದರು. ಹಾಗಾಗಿ ಇಂದು ಉದ್ದೇಶಿಸಿದ್ದ 4ನೇ ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿಲ್ಲ. ಮೈಸೂರಿನ ಮಳಲವಾಡಿ ನ್ಯಾಯಾಲಯ ಹಾಗೂ ಕೃಷ್ಣರಾಜ ಬುಲೆವಾರ್ಡ್ ರಸ್ತೆಯ ನ್ಯಾಯಾಲಯಗಳಲ್ಲಿ ನಡೆಯಬೇಕಿದ್ದ ಲೋಕ್ ಅದಾಲತ್‌ನಲ್ಲಿ ನ್ಯಾಯಾಧೀಶರು ಹಾಜರಿದ್ದರು. ಕಕ್ಷಿದಾರರು ಕೂಡ ಉಪಸ್ಥಿತರಿದ್ದರು. ಜೊತೆಗೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಎಂದಿನಂತೆ ಕರ್ತವ್ಯಕ್ಕೆ ಹಾಜರಾಗಿದ್ದರು.

ಆದರೆ ವಕೀಲರು ಕಲಾಪದಿಂದ ದೂರ ಉಳಿದಿದ್ದರು. ಬಹಳಷ್ಟು ವಕೀಲರು ನ್ಯಾಯಾಲಯದ ಆವರಣದಲ್ಲಿದ್ದರೂ ಲೋಕ್ ಅದಾಲತ್‌ನಲ್ಲಿ ಭಾಗವಹಿಸಲಿಲ್ಲ. ಇದರಿಂದ ಇಂದು 4ನೇ ರಾಷ್ಟ್ರೀಯ ಲೋಕ್ ಅದಾಲತ್ ನಡೆಯಲಿಲ್ಲ.

ಕೌಟುಂಬಿಕ ನ್ಯಾಯಾಲಯ ಸೇರಿದಂತೆ ಹಲವು ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಿರುವ ಕಕ್ಷಿದಾರರು ಲೋಕ್ ಅದಾಲತ್‌ನಲ್ಲಿ ರಾಜೀ ಮಾಡಿಕೊಳ್ಳಲು ಸಿದ್ಧರಿದ್ದರು. ಇಂದು ನ್ಯಾಯಾಲಯದಲ್ಲಿ ಸಾಕಷ್ಟು ಮಂದಿ ಹಾಜರಿದ್ದರು. ನ್ಯಾಯಾಧೀಶರು ಉಪಸ್ಥಿತರಿದ್ದರೂ, ನ್ಯಾಯವಾದಿಗಳು ಹಾಜರಿರದ ಕಾರಣ, ಲೋಕ್ ಅದಾಲತ್ ನಡೆಯಲಿಲ್ಲ.



ಬೆಳಗಾವಿ ಅಧಿವೇಶನದಲ್ಲೇ ಕಾಯ್ದೆ ಮಂಡನೆ; ಸಿಎಂ ಭರವಸೆ

ವಕೀಲರ ಸಂರಕ್ಷಣಾ ಕಾಯ್ದೆಯನ್ನು ಬೆಳಗಾವಿಯ ಅಧಿವೇಶನದಲ್ಲಿ ಮಂಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಮೈಸೂರು ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ ತಿಳಿಸಿದರು.

ವಕೀಲರ ಸಂರಕ್ಷಣಾ ಕಾಯ್ದೆ ಜಾರಿ ಸಂಬಂಧ ಇಂದು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದೆವು. ಕಾಯ್ದೆ ಬಗ್ಗೆ ಅಭಿಪ್ರಾಯ ನೀಡುವಂತೆ ಕಾನೂನು ಇಲಾಖೆಗೆ ಸೂಚನೆ ನೀಡಿದ್ದಾರೆ. ಕಾನೂನು ಇಲಾಖೆಯ ಅಭಿಪ್ರಾಯ ಬಂದ ನಂತರ ಗೃಹ ಸಚಿವರು ಹಾಗೂ ಕಾನೂನು ಸಚಿವರ ಜೊತೆ ಚರ್ಚೆ ಮಾಡುತ್ತೇನೆ ಎಂದು ಭರವಸೆ ನೀಡಿದ್ದಾರೆ ಎಂದರು.

ನಾಳೆ ಗೃಹ ಸಚಿವರು ಹಾಗೂ ಕಾನೂನು ಸಚಿವರನ್ನು ಭೇಟಿ ಮಾಡುತ್ತೇವೆ. ಅವರಿಂದ ಯಾವ ಪ್ರತಿಕ್ರಿಯೆ ಬರುತ್ತದೆ ಎಂಬುದನ್ನು ತಿಳಿದುಕೊಳ್ಳುತ್ತೇವೆ. ತರುವಾಯ ಸೋಮವಾರದಿಂದ ನ್ಯಾಯಾಲಯದ ಕಲಾಪಗಳಲ್ಲಿ ಭಾಗವಹಿಸುವ ಬಗ್ಗೆ ತೀರ್ಮಾನ ಮಾಡುತ್ತೇವೆ ಎಂದು ಮಹದೇವಸ್ವಾಮಿ ತಿಳಿಸಿದರು.

■ಬಾಪುಲಿಂಗರಾಜೇ ಅರಸ್





ಮೈಸೂರಿನ ರಸ್ತೆಬದಿ ದಿವ್ಯ ಔಷಧಗಳು!!!

ಆರೋಗ್ಯ ಇಲಾಖೆಯ ಅಧಿಕಾರಿಗಳ ಕಾರ್ಯವೈಖರಿಗೆ ಹಿಡಿದ ಕನ್ನಡಿ...



ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಬಯಲಾದ ತರುವಾಯ ನಕಲಿ ವೈದ್ಯರ ಮಟ್ಟ ಹಾಕುವುದಾಗಿ ಆರೋಗ್ಯ ಇಲಾಖೆ ಘರ್ಜಿಸಿತು. ಆದರೆ ಮೈಸೂರಿನಲ್ಲಿ ನಾಯಿಕೊಡೆಗಳಂತೆ ತಲೆ ಎತ್ತಿರುವ ಟೆಂಟ್ ಔಷಧಾಲಯಗಳು ಆರೋಗ್ಯ ಇಲಾಖೆ ಎಚ್ಚರಿಕೆಗೆ ಕೇರ್ ಮಾಡದೆ ರಾಜಾರೋಷವಾಗಿ ದಂಧೆ ನಡೆಸುತ್ತಿದ್ದಾರೆ. ಲೈಂಗಿಕವಾಗಿ ಶಕ್ತಿ ವೃದ್ಧಿಸುವ ವಯಾಗ್ರ ಮಾದರಿಯ ಆಯುರ್ವೇದ ದಿವ್ಯ ಔಷಧಿ ನೀಡುವುದಾಗಿ ಅಮಾಯಕರಿಂದ ಸುಲಿಗೆ ಮಾಡುತ್ತಿದ್ದಾರೆ. ಹೆಣ್ಣು ಭ್ರೂಣ ಹತ್ಯೆ ಬಯಲಾದ ತರುವಾಯ ಆರೋಗ್ಯ ಇಲಾಖೆ ಎಚ್ಚೆತ್ತುಕೊಂಡಿದೆ. ಟಾಸ್ಕ್‌ಫೋರ್ಸ್ ರಚಿಸಿ ಸ್ಕ್ಯಾನಿಂಗ್ ಸೆಂಟರ್ ಹಾಗೂ ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದೆ. ಹಾಗೆಯೇ ನಕಲಿ ವೈದ್ಯರ ಪತ್ತೆ, ಇಂತಹವರ ಕ್ಲಿನಿಕ್‌ಗಳ ಮೇಲೆ ಕೂಡ ದಾಳಿ ಮಾಡುವುದಾಗಿ ಎಚ್ಚರಿಕೆ ನೀಡಿದೆ.

ಆದರೆ ಮೈಸೂರು ನಗರವೂ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕು, ಹೋಬಳಿಗಳಲ್ಲಿ ಟೆಂಟ್ ಹಾಕಿಕೊಂಡು ನಾನಾ ರೀತಿಯ ಔಷಧೋಪಚಾರ ನೀಡುವಂತಹ 'ಬೋಗಸ್ ವೈದ್ಯ'ರತ್ತ ನಮ್ಮ ಆರೋಗ್ಯ ಇಲಾಖೆ ಗಮನವನ್ನೇ ಹರಿಸುತ್ತಿಲ್ಲ.

ಅದರಲ್ಲೂ ಉತ್ತರ ಭಾರತದಿಂದ ಬಂದು, ರಸ್ತೆ ಪಕ್ಕದಲ್ಲಿ ಟೆಂಟ್ ಹಾಕಿಕೊಂಡು ನಾನಾ ಸಮಸ್ಯೆಗೆ ಔಷಧ ನೀಡುವ ದಂಧೆ ನಡೆಸುತ್ತಿದ್ದಾರೆ. ಸಂಚಾರಿ ವಾಹನಗಳಲ್ಲೇ ಕ್ಲಿನಿಕ್ ಮಾಡಿಕೊಂಡು, ಆಯುರ್ವೇದ ಔಷಧ ನೀಡಿ ರೋಗ ಗುಣಪಡಿಸುವುದಾಗಿ ಮೋಸ ಮಾಡುತ್ತಿದ್ದಾರೆ.

ನರ ದೌರ್ಬಲ್ಯತೆ, ಲೈಂಗಿಕವಾಗಿ ಶಕ್ತಿಹೀನತೆ, ಗುಪ್ತ ಸಮಸ್ಯೆ ಸೇರಿದಂತೆ ಹಲವು ಸಮಸ್ಯೆಗಳಿಗೆ ದಿವ್ಯ ಔಷಧ ನೀಡುವುದಾಗಿ ಪಂಡಿತರಂತೆ ಕಾಣುವವರು ನಂಬಿಸುತ್ತಿದ್ದಾರೆ. ಸಂಚಾರಿ ಕ್ಲಿನಿಕ್‌ಗಳಲ್ಲಿ ಬೋರ್ಡ್ ಹಾಕಿ, ಮೈಕ್‌ನಲ್ಲಿ ಪ್ರಚಾರ ಮಾಡುತ್ತಿದ್ದಾರೆ.

ಎಂಬಿಬಿಎಸ್ ಪದವಿ ಪಡೆದಿರುವ ವೈದ್ಯರ ಬಳಿ ಆಪ್ತಸಮಾಲೋಚನೆ ಮೂಲಕ ಲೈಂಗಿಕ ಸಮಸ್ಯೆಗಳನ್ನು ಹೇಳಿಕೊಳ್ಳಲು ಮುಜುಗರಪಡುವ ಬಹಳಷ್ಟು ಜನರು ಇಲ್ಲಿ ಬಂದು ಸಮಸ್ಯೆ ಹೇಳಿಕೊಳ್ಳುತ್ತಿದ್ದಾರೆ. ಇಂತಹ ದುರ್ಬಲ ಮನಸ್ಸಿನ ವ್ಯಕ್ತಿಗಳನ್ನೆ ಟಾರ್ಗೆಟ್ ಮಾಡಿಕೊಂಡಿರುವ ಇವರು ಆಯುರ್ವೇದ ಔಷಧದಿಂದ ನಿಮ್ಮ ಲೈಂಗಿಕ ಸಮಸ್ಯೆ ಪರಿಹಾರ ಮಾಡುವುದಾಗಿ ನಂಬಿಸುತ್ತಾರೆ.

ಹಿಮಾಲಯ ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿ ನಮ್ಮ ಪ್ರಾಚೀನ ಗ್ರಂಥಗಳ ಅನುಸಾರವಾಗಿ ಅರಳಿಯ ವನಮೂಲಿಕೆಗಳಿಂದ ಔಷಧಿ ತಯಾರಿಸಲಾಗಿದೆ. ದಿವ್ಯ ಔಷಧಿಗಳು, ತೈಲಗಳು, ಭಸ್ಮಗಳಿಂದ ಚಿಕಿತ್ಸೆ ನೀಡಲಾಗುತ್ತದೆ. ನಮ್ಮಲ್ಲಿ ಚಿಕಿತ್ಸೆ ಪಡೆದರೆ ಖಚಿತವಾಗಿ ರೋಗ ನಿವಾರಣೆಯಾಗುತ್ತದೆ. ನಿಮ್ಮ ಲೈಂಗಿಕ ಕ್ರಿಯೆಯ ಶಕ್ತಿ ವೃದ್ಧಿಯಾಗುತ್ತದೆ ಎಂದು ನಂಬಿಸುತ್ತಾರೆ.

ಲೈಂಗಿಕ ಕ್ರಿಯೆ ಶಕ್ತಿಹೀನ ಸಮಸ್ಯೆ ಎದುರಿಸುತ್ತಿರುವ ಜನರು ಇವರ ಬಳಿ ಹೆಚ್ಚಾಗಿ ಹೋಗುತ್ತಾರೆ. ನಾವು ನೀಡುವ ಔಷಧಿಯ ಪುಡಿ ಹಾಗೂ ತೈಲ ಬಳಸಿದರೆ ಲೈಂಗಿಕ ಶಕ್ತಿ ಹೆಚ್ಚಾಗುತ್ತದೆ. ವಯಾಗ್ರ ಮಾತ್ರೆಗಳನ್ನು ಪದೇ ಪದೆ ಬಳಸಬೇಕು. ಆದರೆ ನಾವು ನೀಡುವ ಔಷಧಿಯನ್ನು ಒಂದು ಬಾರಿ ಬಳಸಿದರೆ ಜೀವನ ಪೂರ್ತಿ ಬೇರೆ ಮಾತ್ರೆ ಬಳಸುವಂತಿಲ್ಲ ಎಂದು ನಂಬಿಸುತ್ತಿದ್ದಾರೆ. ಔಷಧ ನೀಡಲು ಸಾವಿರಾರು ರೂಪಾಯಿ ಸುಲಿಗೆ ಮಾಡುತ್ತಿದ್ದಾರೆ. ಆದರೆ, 85 ವರ್ಷ ಮೇಲ್ಪಟ್ಟವರಿಗೆ ಈ ಔಷಧಿ ನೀಡಲ್ಲ ಎನ್ನುತ್ತಾರೆ.

ಇವರು ಉತ್ತರ ಭಾರತದವರು. ನಮ್ಮ ವೈದ್ಯರು ಹಿಂದಿ ಕಲಿತಿರುವವರ ಸಮ್ಮುಖದಲ್ಲಿ ಸಲಹೆ ನೀಡುತ್ತಾರೆ. ಆದ ಕಾರಣ ಹಿಂದಿ ಕಲಿತವರನ್ನು ನಿಮ್ಮ ಜೊತೆ ಕರೆತನ್ನಿ ಎಂದು ಬೋರ್ಡ್ ಹಾಕಿದ್ದಾರೆ.

ಸಂಚಾರಿ ಕ್ಲಿನಿಕ್ ಒಳಗೆ ಹೊಕ್ಕು ನೋಡಿದರೆ ನೂರಾರು ಡಬ್ಬಿಗಳಲ್ಲಿರುವ ಔಷಧಿಗಳು, ತೈಲಗಳು ಕಾಣಸಿಗುತ್ತವೆ. ಯಾವ ರೋಗಕ್ಕೆ ಯಾವ ಔಷಧಿ, ತೈಲ ಎಂದು ಅಲ್ಲೆ ತೋರಿಸುತ್ತಾರೆ. ಒಂದು ಬಾರಿ ಇವರನ್ನು ಭೇಟಿ ಮಾಡಿದರೆ ಸಾಕು, ಇದೆಲ್ಲಾ ಹಣ ಕೀಳುವ ಗಿಮಿಕ್ ಎಂಬುದು ಮನವರಿಕೆ ಆಗುತ್ತದೆ. ಲೈಂಗಿಕವಾಗಿ ಶಕ್ತಿಹೀನತೆ ಇರುವವರು ಇವರು ನೀಡುವ ಔಷಧ ತೆಗೆದುಕೊಂಡರೆ ಖಚಿತವಾಗಿ ಅಡ್ಡ ಪರಿಣಾಮಗಳಾಗುತ್ತವೆ. ಬಹಳಷ್ಟು ಜನರು ಅಡ್ಡ ಪರಿಣಾಮ ಎದುರಿಸುತ್ತಿದ್ದಾರೆ. ಆದರೆ ಇದನ್ನು ಬಹಿರಂಗವಾಗಿ ಹೇಳಿಕೊಂಡರೆ ಮರ್ಯಾದೆ ಹೋಗುತ್ತದೆ ಎಂದು ಬಾಯಿ ಬಿಡುತ್ತಿಲ್ಲ.

ಮಹಿಳೆಯರು ಎದುರಿಸುವ ಹಲವು ಗುಪ್ತ ರೋಗಗಳಿಗೂ ಔಷಧ ನೀಡುವುದಾಗಿ ಹೇಳುತ್ತಾರೆ. ಯಾವುದೇ ರೀತಿಯ ಆರೋಗ್ಯ ಸಮಸ್ಯೆ ಹೇಳಿಕೊಂಡು ಹೋದರೂ ಅವರು ಔಷಧ ಕೊಡುತ್ತಾರೆ. ಆಪರೇಷನ್ ಇಲ್ಲದೆ ರೋಗ ಗುಣಪಡಿಸುವುದಾಗಿಯೂ ನಂಬಿಸುತ್ತಾರೆ.

ಆದರೆ ಇವರಿಂದ ಪಡೆದ ಔಷಧದಿಂದ ಆರೋಗ್ಯದಲ್ಲಿ ಏನಾದರೂ ಸಮಸ್ಯೆ ಎದುರಾದರೆ ಕೇಳಲು ಜಾಗದಲ್ಲಿ ಅವರಿರುವುದಿಲ್ಲ. ಟೆಂಟ್ ಇರಲ್ಲ, ಸಂಚಾರಿ ಕ್ಲಿನಿಕ್ ಕೂಡ ಇರುವುದಿಲ್ಲ. ಮತ್ತೆಲ್ಲೋ ಟೆಂಟ್ ಹಾಕಿಕೊಂಡು ದಂಧೆ ಮುಂದುವರೆಸುತ್ತಾರೆ.

ಜನರ ಆರೋಗ್ಯದ ಜೊತೆ ಚೆಲ್ಲಾಟವಾಡುತ್ತಿರುವ ಇವರ ವಿರುದ್ಧ ಆರೋಗ್ಯ ಇಲಾಖೆ ಯಾವ ರೀತಿಯ ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

ಮಕ್ಕಳ ಚಿತ್ರಕಥೆ

'ಮನೆಗೆ ಬಂದವರು ಯಾರು..?.....ಮನೆಗೆ ಬಂದವರು ಯಾರು..?'


–ಹೆಚ್.ಜಿ.ಎನ್.ಪ್ರಸಾದ್, ಮೊ:9845376199




ಒಬ್ಬ ಯುವ ತಂದೆಯು ತನ್ನ ಪುಟ್ಟ ಮಗನನ್ನು ಎತ್ತಿಕೊಂಡು ನಿಂತಿದ್ದನು. ಎಲ್ಲಿಂದಲೋ ಹಾರಿಬಂದ ಕಾಗೆ ಅವರೆದುರಿಗೆ ಮನೆಯ ಚಾವಣಿಯ ಮೇಲೆ ಕುಳಿತಿತು. ಮಗ ಪ್ರಶ್ನಿಸಿದ, "ಇದು ಏನು...?". ಅದಕ್ಕೆ ತಂದೆ "ಇದು ಕಾಗೆ..!!!" ಎಂದ. ಮಗನು ಮತ್ತೆ ಮತ್ತೆ ಪ್ರಶ್ನೆ ಮಾಡುತ್ತಿದ್ದನು..."ಇದು ಏನು...?" ತಂದೆಯು ಪುನಃ ಪುನಃ ಉತ್ತರ ಕೊಡುತ್ತಿದ್ದನು..."ಇದು ಕಾಗೆ..!!!".




ಮಗ ಬೆಳೆದು ದೊಡ್ಡವನಾದನು. ತಂದೆಯು ಮುದುಕನಾದನು. ಒಂದು ದಿನ ತಂದೆಯು ಕುರ್ಚಿಯ ಮೇಲೆ ಕುಳಿತ್ತಿದ್ದನು. ಅವನ ಮಗನನ್ನು ನೋಡಲು ಯಾರೋ ಬಂದರು. ತಂದೆಯು ಕೇಳಿದನು,"ಯಾರು ಬಂದಿದ್ದಾರೆ...?".




ಮಗನು ಮನೆಗೆ ಬಂದಿದ್ದವರ ಹೆಸರು ಹೇಳಿದನು. ಸ್ವಲ್ಪ ಸಮಯದ ಬಳಿಕ ಮತ್ಯಾರೋ ಮನೆಗೆ ಬಂದರು. ತಂದೆಯು ಮತ್ತೆ "ಮನೆಗೆ ಬಂದವರು ಯಾರು.." ಎಂದು ಕೇಳಿದನು.



ಈ ಸಾರಿ ಮಗನು ಸಿಡುಕುತ್ತಾ..."ನೀವು ಏಕೆ ಸುಮ್ಮನೆ ಕುಳಿತಿರುವುದಿಲ್ಲಾ..? ಯಾರಾದರೂ ಬರಲಿ–ಹೋಗಲಿ ನಿಮಗೇನು...? ಯಾರು ಬಂದರು..? ಯಾರು ಬಂದರು..? ಎಂದು ಒಂದೇ ಸಮನೆ ಏಕೆ ವಟಗುಟ್ಟುತ್ತೀರಿ...?" ಎಂದ.



ತಂದೆಯು ದೀರ್ಘವಾದ ಉಸಿರು ಬಿಟ್ಟು ತಲೆಯ ಮೇಲೆ ಕೈ ಹೊತ್ತು ಕುಳಿತುಬಿಟ್ಟನು.



ಸ್ವಲ್ಪ ಸಮಯದ ನಂತರ ಅತ್ಯಂತ ದುಃಖದ ಸ್ವರದಲ್ಲಿ ಮಗನಿಗೆ ಹೇಳಿದನು "ನಾನು ಒಂದು ಸಾರಿ ಕೇಳಿದ್ದಕ್ಕೇ ಈಗ ನೀನು ಕೋಪಿಸಿಕೊಳ್ಳುತ್ತಿದ್ದೀಯಾ... ನೀನು ನೂರು ಸಾರಿ ಒಂದೇ ಮಾತು– "ಇದು ಏನು...?"."ಇದು ಏನು...?"ಎಂದು ಕೇಳಿದಾಗ ನಾನು ಸಿಡುಕದೆ ಇದು ಕಾಗೆ..!!! ಎಂದು ಉತ್ತರ ಕೊಡುತ್ತಿದ್ದೆ".

ತಂದೆ–ತಾಯಿಗಳು ನಿಮ್ಮನ್ನು ಎಷ್ಟು ಕಷ್ಟಪಟ್ಟು ಸಾಕಿ–ಸಲುಹಿದ್ದಾರೆಂಬುದನ್ನು, ನಿಮ್ಮನ್ನು ಎಷ್ಟು ಮಮತೆಯಿಂದ ಕಾಣುತ್ತಾರೆಂಬುದನ್ನು ನೀವು ಅರಿಯಬೇಕು. "ಮಾತಾ–ಪಿತರ ಸೇವೆಯೇ ಮಕ್ಕಳ ಕರ್ತವ್ಯ".



ವಾರಭವಿಷ್ಯ

10.12.2023 ರಿಂದ 16.12.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ವೃಶ್ಚಿಕ, ಚಂದ್ರ–ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಜ–ವೃಶ್ಚಿಕ, ಬುಧ–ಧನುಸ್ಸು, ಗುರು–ಮೇಷ, ಶುಕ್ರ–ತುಲಾ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ಹಣಕಾಸಿನ ಪರಿಸ್ಥಿತಿ ತೃಪ್ತಿಕರವಾಗಿರುತ್ತದೆ. ಚಂದ್ರಗ್ರಹ ನಿಮ್ಮಲ್ಲಿ ಹೊಸ ಉತ್ಸಾಹವನ್ನು ತುಂಬಲಿದ್ದಾನೆ. ಹೊಸ ಮನೆ, ನಿವೇಶನ ಕೊಳ್ಳುವಾಗ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸಿ ಮುಂದುವರೆಯಿರಿ. ಸ್ನೇಹಿತರೊಂದಿಗೆ ಸಣ್ಣ ವಿವಾದಗಳು ಉಂಟಾಗಬಹುದು. ಕೈಗೆತ್ತಿಕೊಂಡ ಕೆಲಸಗಳು ಮಂದಗತಿಯಲ್ಲಿ ಸಾಗುತ್ತವೆ. ನಿಮಗೆ ಅನಾರೋಗ್ಯ ಸಮಸ್ಯೆ ಕಾಡಬಹುದು.

ಶ್ರೀ ನೃಸಿಂಹ ಕರಾವಂಬನ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–6.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಸಮಾಜದಲ್ಲಿ ಪ್ರಮುಖ ವ್ಯಕ್ತಿಗಳೊಂದಿಗೆ ಹೊಸ ಪರಿಚಯದಿಂದ ಜಟಿಲ ಸಮಸ್ಯೆಗೆ ಪರಿಹಾರ ದೊರೆಯಲಿದೆ. ವ್ಯಾಪಾರ ವ್ಯವಹಾರಗಳನ್ನು ಎಚ್ಚರಿಕೆಯಿಂದ ಮಾಡಬೇಕು. ಅನ್ಯಥಾ ನಷ್ಟವನ್ನು ಅನುಭವಿಸಬೇಕಾದೀತು. ಉದ್ಯೋಗ ಸ್ಥಳದಲ್ಲಿ ಸಹಚರರಿಂದ ಕಿರಿಕಿರಿಗಳು ಉಂಟಾಗುತ್ತವೆ. ಕೈ ಸೇರಬೇಕಾದ ಹಣ ಸಮಯಕ್ಕೆ ಸರಿಯಾಗಿ ಬರದೆ ಬೇಸರ. ರಾತ್ರಿ ಪ್ರಯಾಣಗಳನ್ನು ತ್ಯಜಿಸಿ.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ–2.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಆಸ್ತಿ, ಪಾಸ್ತಿ ಹೊಂದುವ ನಿಮ್ಮ ಹಂಬಲಕ್ಕೆ ಗುರು ಬಲದ ರಕ್ಷೆ ಇದೆ. ಬ್ಯಾಂಕ್ ಸಾಲಕ್ಕೂ ಪ್ರಯತ್ನಿಸಬಹುದು. ಕೋರ್ಟು–ಕಚೇರಿ ಕೆಲಸಗಳಲ್ಲಿ ಯಶಸ್ಸು ದೊರಕುವುದು. ಮಕ್ಕಳ ಭವಿಷ್ಯ ಉಜ್ವಲವಾಗುವ ಸಂಭವವಿದೆ. ಮಹಿಳಾ ಮಣಿಯರು ಸುವರ್ಣಾಭರಣ ಖರೀದಿಸುವರು. ವಿವಾಹಯೋಗ್ಯರು ಮಧುಚಂದ್ರಕ್ಕೆ ತೆರಳಲು ಸಿದ್ಧತೆ ಮಾಡಿಕೊಳ್ಳಲಿ. ನಿಮ್ಮ ಸ್ವಾಸ್ಥ್ಯದ ಬಗ್ಗೆ ಅಲಕ್ಷ್ಯ ಬೇಡಿ.

ಶ್ರೀ ಸತ್ಯನಾರಾಯಣ ಸೇವೆ. ಶುಭ ಸಂಖ್ಯೆ–8.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದಾರಂಭಕ್ಕೆ ಹಣಕಾಸು ಸಮಸ್ಯೆ ಬಗೆಹರಿಯಲಿದೆ. ಹಿರಿಯರ ಅನುಭವೋಕ್ತಿ ನಿಮಗೆ ದಾರಿದೀಪವಾಗಲಿ. ಹಳೆ ಗೆಳೆಯರ ಭೇಟಿಯಿಂದ ಸಂತಸ. ಉದ್ಯೋಗದಲ್ಲಿ ನಿರಾಸಕ್ತಿ ತೋರುವುದರಿಂದ ಮೇಲಧಿಕಾರಿಗಳ ಆಗ್ರಹಕ್ಕೆ ಗುರಿಯಾಗುವಿರಿ. ರಾಜಕೀಯದಲ್ಲಿ ದೊರೆಯಲಿದ್ದ ಸ್ಥಾನಮಾನಗಳು ತಪ್ಪಿ ಹೋಗುತ್ತವೆ. ಗುಪ್ತ ಜನರಿಂದಲೂ ಕಿರುಕುಳವನ್ನು ಎದುರಿಸಬೇಕಾಗುತ್ತದೆ. ಜಾಗರೂಕತೆಯಿಂದ ವಾಹನ ಚಲಿಸಿ ಕ್ಷೇಮವಾಗಿ ಮನೆ ತಲುಪಿ.

ಶ್ರೀ ತ್ರಿಪುರಸುಂದರೀ ದರ್ಶನ. ಶುಭ ಸಂಖ್ಯೆ–9.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಈ ವಾರದಲ್ಲಿ ಗೃಹ ನಿರ್ಮಾಣ ಕಾರ್ಯಗಳು ಪೂರ್ಣಗೊಳ್ಳುವ ಯೋಗವಿದೆ. ಗೆಳೆತಿಯಿಂದ ಸಹಾಯ, ಪ್ರೇಮ ವಿವಾಹಗಳು ಆಶಾದಾಯಕವಾಗಿದೆ. ಬಲ್ಲವರ ಮಾತು ಬೆಲ್ಲವನು ಮೆದ್ದಂತೆ ಸರ್ಕಾರಿ ನೌಕರರಿಗೆ ಪ್ರಮೋಶನ್ ಸಂಭವ. ಪತ್ನಿ–ಪುತ್ರರ ಸಹಾಯ ಸಹಕಾರಗಳು ಗೃಹದ ಏಳಿಗೆಗೆ ಪ್ರೇರಣೆಯಾಗುವುದು. ಹೊಸ ವಾಹನ ಖರೀದಿ ಯೋಗ. ಬೃಹತ್ ಉದ್ದಿಮೆದಾರರಿಗೆ ನೌಕರರ ಅಸಹಕಾರದಿಂದ ನಷ್ಟ ಸಂಭವ.

ಶ್ರೀ ಸೂರ್ಯ ಉಪಾಸನೆ. ಶುಭ ಸಂಖ್ಯೆ–3.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಉದ್ಯೋಗದಲ್ಲಿ ನಿಮ್ಮ ಕಠಿಣ ಪರಿಶ್ರಮಕ್ಕೆ ಉತ್ತಮ ಫಲಿತಾಂಶವನ್ನು ಪಡೆಯುವಿರಿ. ನ್ಯಾಯಾಲಯ ವಿಚಾರಗಳು ರಾಜೀ ಮಾರ್ಗದಲ್ಲಿ ಪರಿಸಮಾಪ್ತಿಯನ್ನು ಹೊಂದುವುದು. ಸಹೋದರರೊಂದಿಗೆ ಸ್ಥಿರಾಸ್ತಿ ವಿವಾದಗಳು ಉಂಟಾಗುತ್ತವೆ. ವಾದದ ಉತ್ತರಾರ್ಧದಲ್ಲಿ ದೀರ್ಘ ಕಾಲದಿಂದ ಬಾಕಿ ಉಳಿದಿರುವ ಕಾರ್ಯಗಳನ್ನು ಪೂರ್ಣಗೊಳಿಸುವಿರಿ. ಹೊಸ ಕೈಗಾರಿಕಾ ಉದ್ಯಮ ಸ್ಥಾಪನೆಗೆ ಪ್ರೇರಣೆ ಆಗುವುದು.

ಶ್ರೀ ಅಷ್ಟಾಕ್ಷರೀ ಮಂತ್ರ ಜಪಿಸಿ. ಶುಭ ಸಂಖ್ಯೆ–1.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಕಾಯಕವೇ ಕೈಲಾಸ ಗುರುಬಲದ ರಕ್ಷೆಯಿಂದ ದುಡಿಯುವ ಕೈಗಳು ಮಜಬೂತು ಆಗಲಿದೆ. ಧನವೃದ್ಧಿಯೊಂದಿಗೆ, ಜ್ಞಾನವೃದ್ಧಿಯೂ ಆಗಲಿದೆ. ಸಾಮಾಜಿಕವಾಗಿ, ವೈಯಕ್ತಿಕವಾಗಿ ಅನುಕೂಲ ಪರಿಸ್ಥಿತಿ ಇದೆ. ಅದನ್ನು ಎನ್‌ಕ್ಯಾಷ್ ಮಾಡಿಕೊಳ್ಳಿ. ಪ್ರಿಯಜನರ ಸಾಂಗತ್ಯದಲ್ಲಿ ಸಮಯ ಕಳೆಯುವುದು. ಅನ್ಯರ ಬಲವಂತಕ್ಕೆ ಮಾಡಿದ ಕೆಲಸದಿಂದ ಅಪಖ್ಯಾತಿಗೆ ಒಳಗಾಗುವಿರಿ.

ಶ್ರೀಪಾರ್ವತಿದೇವೀ ಉಪಾಸನೆ. ಶುಭ ಸಂಖ್ಯೆ–4.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ಕನಸು ಕಾಣುವುದು ತಪ್ಪಲ್ಲ. ಕಷ್ಟ ಪಡದೇ ಯಾವುದೂ ದೊರಕದು. ಗ್ರಹಚಾರ ವಿರುದ್ಧವಿದ್ದಾಗ ಪ್ರತಿಫಲದ ನಿರೀಕ್ಷೆ ತಪ್ಪಾದೀತು. ನಿಮ್ಮ ಕಾರ್ಯತತ್ಪರತೆ ದ್ವಿಗುಣವಾಗಲಿ. ಸಾಲ ತರುವುದು, ಕೊಡುವುದು ಎರಡನ್ನೂ ನಿರ್ಬಂಧಿಸಿ, ಸದ್ಯದ ಪರಿಸ್ಥಿತಿಯಲ್ಲಿ ಹಾಸಿಗೆ ಇದ್ದಷ್ಟು ಕಾಲು ಚಾಚು ಎಂಬ ನಾಣ್ಣುಡಿ ನಿಮಗೆ ಅನ್ವರ್ಥವಾಗಲಿ. ವಾರಾಂತ್ಯಕ್ಕೆ ಶುಭ ವಾರ್ತೆ ಬರುವುದು. ಮನಸ್ಸಿನ ಚಂಚಲತೆ ನಿವಾರಣೆ ಆಗುವುದು.

ಶ್ರೀ ವಿನಾಯಕ ಪೂಜೆ. ಶುಭ ಸಂಖ್ಯೆ–7.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಈ ವಾರದಲ್ಲಿ ಚಂದ್ರ ಸಂಚಾರ ಶುಭವಿದೆ. ಫ್ಯಾನ್ಸಿ ವಸ್ತು, ಅಲಂಕಾರಿಕ ವಸ್ತು ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಾಗುವುದು. ಪ್ರೀತಿ–ಪ್ರಣಯ ವಿಷಯಗಳು ವಿವಾಹ ಬಂಧನದಲ್ಲಿ ಅಂತ್ಯವಾಗುವುದು. ಗುರುಬಲವೂ ಇದೆ, ಮುಖ್ಯ ವಿಷಯಗಳನ್ನು ಮುಂದಕ್ಕೆ ತಳ್ಳಬೇಡಿ, ನಾಳೆ ಅನ್ನುವುದು ಹಾಳು. ಸ್ಪರ್ಧಾತ್ಮಕ ಪರೀಕ್ಷೆ ಬರೆದವರಿಗೆ ಶುಭ ವಾರ್ತೆ ಬರುವುದು. ಆರೋಗ್ಯ ಕಾಪಾಡಿಕೊಳ್ಳಿ.

ಶ್ರೀ ದತ್ತ ದರ್ಶನ. ಶುಭ ಸಂಖ್ಯೆ–5.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದಾರಂಭಕ್ಕೆ ಹಣಕಾಸಿನ ಪರಿಸ್ಥಿತಿ ಸುಧಾರಿಸುವುದು. ವೈಯಕ್ತಿಕ ವಿಚಾರಗಳು ಪ್ರಗತಿಯ ಹಾದಿಯಲ್ಲಿ ಸಾಗುವುದು. ಸ್ನೇಹಿತರೊಂದಿಗೆ ಭೋಜನ, ಮನೋರಂಜನಾ ಕೂಟಗಳು ನಡೆದು ಹೆಚ್ಚಿನ ಹಣ ವ್ಯಯವಾಗುವುದು. ಸ್ಥಿರಾಸ್ತಿ ಒಪ್ಪಂದಗಳನ್ನು ಮಾಡಿಕೊಳ್ಳುವಾಗ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸಿ ಮುಂದುವರೆಯಿರಿ. ಬೇಜವಾಬ್ದಾರಿ ವಾಹನ ಡ್ರೈವಿಂಗ್ ಕಂಟಕವಾಗಲಿದೆ.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–9.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಜನ್ಮಸ್ಥ ಶನಿದೇವನ ಪ್ರಭಾವದಿಂದ ಬಯಸಿದ ಕೆಲಸ ಕಾರ್ಯಗಳು ಮುಂದೆ ಸಾಗುತ್ತಿಲ್ಲ. ವ್ಯಾಪಾರದಲ್ಲಿ ಹಾಕಿದ ಬಂಡವಾಳಕ್ಕೆ ಸಂಚಕಾರವಾದೀತು. ಆಗುವುದನ್ನು ಬದಲಾಯಿಸಲು ಆಗದು. ಆದರೆ ಭಗವದನುಗ್ರಹದಿಂದ ಕಡಿಮೆ ಮಾಡಿಕೊಳ್ಳಬಹುದು. ನಿರಾಶರಾಗುವ ಅಗತ್ಯವಿಲ್ಲ. ವಾರದ ಕಡೆಗೆ ಧನ–ಧಾನ್ಯ ಲಾಭ, ಇಷ್ಟ ಪ್ರಾಪ್ತಿ, ಮಿತ್ರ ಜನ ಸಂಪರ್ಕದಿಂದ ಆನಂದ. ಖರ್ಚುಗಳು ಹೆಚ್ಚಾದರೂ ವ್ಯಾಕುಲಪಡುವ ಅಗತ್ಯವಿಲ್ಲ.

ಶ್ರೀ ಶಿವಗಾಯತ್ರಿ ಜಪಿಸಿ. ಶುಭ ಸಂಖ್ಯೆ–2.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ನಿಮ್ಮ ನಿರಂತರ ಪರಿಶ್ರಮ ಫಲ ನೀಡುವ ಸಮಯ ಬಂದಿದೆ. ಹಿಂದಾಗಿದ್ದಕ್ಕೆ ಚಿಂತಿಸುತ್ತಾ ಕೂರಬೇಡಿ. ಮುಂದಾಗಬೇಕಾಗಿರುವ ಸಾಧನೆಯತ್ತ ನೋಡಿ. ಲೋಕೋಪಕಾರಿಗಳಾಗಿ ಸಮಾಜದಲ್ಲಿ ಪ್ರಶಂಸೆಗೆ ಪಾತ್ರರಾಗುವಿರಿ. ಬಯಸಿದ ಸಿರಿಸಂಪದಗಳನ್ನು ಹೊಂದುವಿರಿ. ವಿವಾಹಾದಿ ಶುಭ ಕಾರ್ಯಗಳು ಜರುಗುವಿಕೆ. ವಾರದ ಕಡೆಗೆ ಶಿರೋವೇದನೆ, ಚಂಚಲತೆ ಕಾಡುವುದು.

ಶ್ರೀ ಗುರು ಗಾಯತ್ರಿ ಪಠಿಸಿ. ಶುಭ ಸಂಖ್ಯೆ–4.

ಮೈಸೂರು ಮಿತ್ರ ಭಾನುವಾರ 10 ಡಿಸೆಂಬರ್ 2023

ಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ವೈಭವದ ಲಕ್ಷದಿಪೋತ್ಸವ




ತಿ.ನರಸೀಪುರ, ಡಿ.9– ಕಾಶಿಗಿಂತ ಗುಲಗಂಜಿ ಗಾತ್ರವೆನಿಸಿರುವ ಕಾವೇರಿ ಕಪಿಲ ನದಿಯ ದಡದಲ್ಲಿರುವ ಶ್ರೀ ಗುಂಜಾ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಲಕ್ಷ ದೀಪೋತ್ಸವ ವಿಜೃಂಭಣೆಯಿಂದ ನೆರವೇರಿತು.

ಶ್ರೀ ಗುಂಜಾ ನರಸಿಂಹ ಸ್ವಾಮಿ ಸೇವಾ ಸಮಿತಿಯವರು ಕಾರ್ತಿಕ ಮಾಸದ ಕೊನೆಯ ವಾರವಾದ ಶನಿವಾರ ಲಕ್ಷ ದೀಪೋತ್ಸವ ನಡೆಯಲಿದೆ ಎಂದು ಕಳೆದ ಎರಡು ದಿನಗಳಿಂದಲೂ ಪಟ್ಟಣದಲ್ಲಿ ಪ್ರಚಾರ ಕೈಗೊಂಡಿದ್ದರು. ಕಳೆದ 12 ವರ್ಷಗಳಿಂದ ಆಚರಿಸಿಕೊಂಡು ಬರುತ್ತಿರುವ ಸೇವಾ ಸಮಿತಿಯವರು ಕಳೆದ ಬಾರಿಗಿಂತಲೂ ಈ ಬಾರಿ ವಿದ್ಯುತ್ ದೀಪಾಲಂಕಾರಗಳಿಂದ ಕಂಗೊಳಿಸುತ್ತಿರುವುದನ್ನು ನೋಡಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೀಪಗಳನ್ನು ಹಚ್ಚಿ ಭಗವಂತನಲ್ಲಿ ಪ್ರಾರ್ಥಿಸಿದರು.

ಬೆಳಗ್ಗೆಯಿಂದ ಶ್ರೀ ಗುಂಜಾ ನರಸಿಂಹ ಸ್ವಾಮಿಯ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡಿಸಿ ನಂತರ ಹೋಮ–ಹವನವನ್ನು ನೆರವೇರಿಸಲಾಯಿತು. ಭಕ್ತಾದಿಗಳು ಎಣ್ಣೆ ಮತ್ತು ದೀಪಗಳನ್ನು ತಂದು ಶ್ರೀ ಗುಂಜಾನರಸಿಂಹ ಸ್ವಾಮಿಗೆ ಹಚ್ಚುವ ಮೂಲಕ ಭಗವಂತನ ಕೃಪೆಗೆ ಪಾತ್ರರಾಗಿದ್ದಾರೆ. ಬರುವ ಭಕ್ತಾದಿಗಳಿಗೆ ಸೇವಾ ಸಮಿತಿ ವತಿಯಿಂದ ಪ್ರಸಾದ ವಿನಿಯೋಗ ಮಾಡಲಾಯಿತು.

ಲೀಲಾವತಿ ನಿಧನದಿಂದ ಕಲಾಕ್ಷೇತ್ರ ಬಡವಾಗಿದೆ

ಹುಣಸೂರು, ಡಿ.9– ಕನ್ನಡ ಚಿತ್ರರಂಗದ ಹೆಸರಾಂತ ಹಿರಿಯ ನಟಿ ಲೀಲಾವತಿ ಅವರ ಅಗಲಿಕೆಯಿಂದ ಕಲಾ ಕ್ಷೇತ್ರ ಬಡವಾಗಿದೆ ಎಂದು ರಂಗಕರ್ಮಿ, ನಾಡ ಹಬ್ಬಗಳ ಸಮಿತಿಯ ಸದಸ್ಯರಾದ ಎಸ್. ಜಯರಾಮು ಶ್ರದ್ಧಾಂಜಲಿ ತಿಳಿಸಿದ್ದಾರೆ. ಡಾ.ರಾಜಕುಮಾರ್, ಕಲ್ಯಾಣಕುಮಾರ್, ಉದಯ್ ಕುಮಾರ್ ಸೇರಿದಂತೆ ಕನ್ನಡ, ತಮಿಳು, ತೆಲುಗು, ಮಲಯಾಳಂ ಚಿತ್ರಗಳ ಮೇರು ನಟರ ಜೊತೆ ಅಭಿನಯಿಸಿ ತಮ್ಮ ಅಭಿನಯ ಶ್ರೀಮಂತಿಕೆಯನ್ನು ತೋರಿ ಪ್ರೇಕ್ಷಕರ ಹೃದಯವನ್ನು ಗೆದ್ದಿದ್ದಾರೆ ಎಂದು ತಿಳಿಸಿದ್ದಾರೆ ಇವರ ಅಗಲಿಕೆ ನಮ್ಮ ಚಿತ್ರರಂಗಕ್ಕೆ ಅತ್ಯಂತ ತುಂಬಲಾರದ ನಷ್ಟ ಉಂಟಾಗಿದೆ. ಇವರನ್ನು ಸದಾ ಸ್ಮರಿಸುತ್ತೇವೆ. ಭಗವಂತ ಇವರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲಿ. ಇವರ ಅಗಲಿಕೆಯಿಂದ ಕನ್ನಡ ಚಿತ್ರರಂಗ ಇಂದು ಬಡವಾಗಿದೆ ಎಂದು ಅವರು ಕಂಬನಿ ಮಿಡಿದಿದ್ದಾರೆ.

ಇಂದಿನಿಂದ ಬೇಲದಕುಪ್ಪೆ ಮಾದಪ್ಪನ ಜಾತ್ರೆ

● ಅಧಿಕಾರಿಗಳಿಂದ ಸಿದ್ಧತೆ ಪರಿಶೀಲನೆ ● ಎತ್ತಿನಗಾಡಿ, ದ್ವಿಚಕ್ರವಾಹನಗಳಿಗೆ ಪ್ರವೇಶವಿಲ್ಲ

ಸರಗೂರು, ಡಿ.9– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿರುವ ಬೇಲದ ಕುಪ್ಪೆ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ನಾಳೆ(ಡಿ.10)ಯಿಂದ ಕಾರ್ತಿಕ ಮಾಸದ ಜಾತ್ರಾ ಮಹೋತ್ಸವ ನಡೆಯಲಿದ್ದು, ಅರಣ್ಯದ ಗಡಿ ಭಾಗದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ್, ಸಬ್ ಇನ್ಸ್‌ಪೆಕ್ಟರ್ ನಂದೀಶ್ ಕುಮಾರ್ ಅವರುಗಳು ಸಿದ್ಧತೆ ಕುರಿತು ಪರಿಶೀಲನೆ ನಡೆಸಿದರು.

ನಾಳೆ (ಭಾನುವಾರ) ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳು ನಡೆಯಲಿವೆ. ಡಿ.11ರಂದು ದೇವಸ್ಥಾನದ ಸಮೀಪವಿರುವ ಕೆರೆಯಲ್ಲಿ ವಿವಿಧ ಪೂಜೆಗಳನ್ನು ಸಲ್ಲಿಸಿ ಹಾಲರವಿಯೊಂದಿಗೆ ದೇವರನ್ನು ದೇವಾಲಯದಲ್ಲಿ ಮೆರವಣಿಗೆಯಲ್ಲಿ ಕರೆದೊಯ್ಯಲಾಗುವುದು. ರಾತ್ರಿ ಎಣ್ಣೆ ಮಜ್ಜನ ಮತ್ತು ಪ್ರಸಾದ ವಿನಿಯೋಗವಿರುತ್ತದೆ. ಕೊಂಡೋತ್ಸವ ಕೂಡ ನಡೆಯಲಿದೆ. ಡಿ.12ರಂದು ರಥೋತ್ಸವ ಜರುಗಲಿದೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಅಧಿಕಾರಿಗಳು ಸಿದ್ಧತೆ ಪರಿಶೀಲಿಸಿ, ಬಿಗಿ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದರು.



ಜಾತ್ರಾ ಮಹೋತ್ಸವಕ್ಕೆ ಈ ವರ್ಷವೂ ಕೂಡ ಎತ್ತಿನ ಗಾಡಿ ಮತ್ತು ಖಾಸಗಿ ವಾಹನಗಳಿಗೆ ಪ್ರವೇಶ ಇರುವುದಿಲ್ಲ. ಹರಳಹಳ್ಳಿ ಗೇಟ್ ಚೈನ್ ಗೇಟ್ ಬಳಿ ವಾಹನಗಳನ್ನು ನಿಲ್ಲಿಸಿ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಹೋಗಿ ಬರುವ ವ್ಯವಸ್ಥೆ ಕಲ್ಪಿಸಲಾಗಿದೆ. ಎತ್ತಿನ ಗಾಡಿಗಳಿಗೆ ಜಾತ್ರೆ ಮಾಳದಿಂದ 500 ಮೀಟರ್ ದೂರದಲ್ಲಿ ಪಾರ್ಕಿಂಗ್ ವ್ಯವಸ್ಥೆ, ನೀರು ಮತ್ತು ರಾಸುಗಳಿಗೆ ಹುಲ್ಲಿನ ವ್ಯವಸ್ಥೆ ಮಾಡಲಾಗಿದೆ. ಜನರಿಗೆ ಜಾತ್ರೆ ಮಾಳವನ್ನು ಕಲ್ಪಿಸಿ ಅಂಗಡಿ ಮುಂಗಟ್ಟುಗಳ ವ್ಯವಸ್ಥೆ ಮಾಡಲಾಗಿದೆ. ಪಾರ್ಕಿಂಗ್ ವ್ಯವಸ್ಥೆ, ಮುಡಿಸೇವೆ ಹಾಗೂ ಶೌಚಾಲಯದ ವ್ಯವಸ್ಥೆಯನ್ನು ಹಳಲಹಳ್ಳಿ ಚೈನ್ ಗೇಟ್ ಬಳಿಯೇ ಸುವ್ಯವಸ್ಥಿತವಾಗಿ ಮಾಡಲಾಗಿದೆ. ಅರಣ್ಯದ ಒಳಗೆ ಕೆಎಸ್‌ಆರ್‌ಟಿಸಿ ಮತ್ತು ಅಗತ್ಯ ಸೇವೆಯ ವಾಹನಗಳನ್ನು ಮಾತ್ರ ಬಿಡಲು ಆದೇಶಿಸಲಾಗಿದೆ. ಈ ಬಗ್ಗೆ ಭಕ್ತಾದಿಗಳು ಮತ್ತು ಸಾರ್ವಜನಿಕರು, ಸಂಘ ಸಂಸ್ಥೆಗಳು ಸಹಕರಿಸಬೇಕಾಗಿ ಜಿಲ್ಲಾಧಿಕಾರಿಗಳು ಕೋರಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಜಪಾನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅನಿಮಲ್ (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮರೀಚಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಸ್‌ಟ್ರಾ (ತೆ)	4 ಪ್ರದರ್ಶನಗಳು
ರಾಜಕಮಲ್	
ಕಂಜೂರಿಂಗ್ ಕಣ್ಣಪ್ಪನ್ (ತ)	4 ಪ್ರದರ್ಶನಗಳು
ಸಂಗಂ	
ಮರೀಚಿ (ಕ) –2 ಪ್ರದರ್ಶನಗಳು, ಖಿಂಗಂ (ತ)	2 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜಪಾನ್ (ತ)	4 ಪ್ರದರ್ಶನಗಳು
ಪ್ರಭಾ	
ಪಾಲಿಟಿಕ್ಸ್ ಕಲ್ಯಾಣ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಶುಗರ್ ಫ್ಯಾಕ್ಟರಿ (ಕ): ಮ.1.25ಕ್ಕೆ, ಸಂ.4.15ಕ್ಕೆ, ನೆಪೋಲಿಯನ್ (ಇಂ): ರಾ.7ಕ್ಕೆ, ರಾ.10.05ಕ್ಕೆ
ಸ್ಕ್ರೀನ್ 2	ಬ್ಯಾಡ್ ಮ್ಯಾನರ್ಸ್ (ಕ): ಬೆ.10.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಕಾಥಲ್ ದಿ ಕೋರ್ (ಮ): ರಾ.9.55ಕ್ಕೆ.
ಸ್ಕ್ರೀನ್ 3	ಕಾಥಲ್ ದಿ ಕೋರ್ (ಮ): ಬೆ.10.45ಕ್ಕೆ, ಫೆರ್ರಿ (ಹಿಂ): ಮ.1.05ಕ್ಕೆ, ವಿಶ್ (3ಡಿ) (ಇಂ): ಮ.3.20ಕ್ಕೆ, ಸಂ.5.25ಕ್ಕೆ, ಸ್ವಾತಿ ಮುತ್ತಿನ ಮಳೆ ಹನಿಯೇ (ಕ): ರಾ.7.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ರಾ.9.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಮ.1.30ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.15ಕ್ಕೆ, ಮ.2.20ಕ್ಕೆ, ಸಂ.6.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.9.45ಕ್ಕೆ, ಮ.1.50ಕ್ಕೆ, ಸಂ.5.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.9.25ಕ್ಕೆ, ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.3.55ಕ್ಕೆ.
ಸ್ಕ್ರೀನ್ 4	ಅನಿಮಲ್ (ಹಿಂ): ಬೆ.8.05ಕ್ಕೆ, ಮ.12.10ಕ್ಕೆ, ಅರ್ಧಂ ಬರ್ಧ ಪ್ರೇಮ ಕಥೆ (ಕ): ಸಂ.4.15ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ರಾ.7.10ಕ್ಕೆ, ಪಾರ್ಕಿಂಗ್ (ತ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ಸಂ.4.10ಕ್ಕೆ, ರಾಜಯೋಗ (ಕ): ಮ.1.05ಕ್ಕೆ, ಸಂ.6.15ಕ್ಕೆ, ಟಗರುಪಲ್ಯ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, ಟೈಗರ್ 3 (ಹಿಂ): ಸಂ.4.20ಕ್ಕೆ.
ಸ್ಕ್ರೀನ್ 3	ಟೈಗರ್ 3(ಹಿಂ): ಬೆ.11ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಟಗರುಪಲ್ಯ (ಕ): ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, ಟೈಗರ್ 3 (ಹಿಂ): ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್** (ಹಿಂ): ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜೆಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹೆಣ್ಣು ಭ್ರೂಣ ಹತ್ಯೆ ತಡೆಗೆ ಜನರ ಸಹಕಾರ ಅಗತ್ಯ

ಭ್ರೂಣಲಿಂಗ ಪತ್ತೆ, ಹತ್ಯೆ, ಬಾಲ್ಯವಿವಾಹ ಕುರಿತು ಜನಪದ, ಬೀದಿ ನಾಟಕಗಳ ಮೂಲಕ ಜಾಗೃತಿ



ಹೆಚ್.ಡಿ.ಕೋಟೆ, ಡಿ.9– ಪ್ರಸ್ತುತ ದಿನಗಳಲ್ಲಿ ಹೆಣ್ಣು ಭ್ರೂಣ ಹತ್ಯೆಯಂತಹ ಅಮಾನವೀಯ ಘಟನೆಗಳು ಹೆಚ್ಚಾಗುತ್ತಿದ್ದು, ಇದರ ಕಡಿವಾಣಕ್ಕೆ ಪ್ರತಿಯೊಬ್ಬರ ಸಹಕಾರ ಮುಖ್ಯ ಎಂದು ತಹಸಿಲ್ದಾರ್ ಶ್ರೀನಿವಾಸ್ ಮನವಿ ಮಾಡಿದರು.

ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಮತ್ತು ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಹಾಗೂ ಮಹಾ ಬೆಳಕು ಕಲಾ ತಂಡದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಭ್ರೂಣಲಿಂಗ ಪತ್ತೆ, ಹೆಣ್ಣು ಭ್ರೂಣ ಹತ್ಯೆ, ಬಾಲ್ಯವಿವಾಹದ ದುಷ್ಪರಿಣಾಮಗಳ ಕುರಿತು ಜನಪದ ಮತ್ತು ಬೀದಿ ನಾಟಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭ್ರೂಣ ಹತ್ಯೆ ಕಾನೂನಿಗೆ ವಿರುದ್ಧವಾದದ್ದು ಆದ್ದರಿಂದ ಮಾನವೀಯ ಗುಣಗಳನ್ನು ಅಳವಡಿಸಿಕೊಂಡು ಪ್ರತಿಯೊಬ್ಬರೂ ಜೀವನ ನಡೆಸಬೇಕು ಎಂದರು.

ತಾಲೂಕು ಆರೋಗ್ಯಾಧಿಕಾರಿ ಡಾ: ರವಿಕುಮಾರ್ ಮಾತನಾಡಿ, ನಮ್ಮ ತಾಲೂಕಿನಲ್ಲಿ ಆಯ್ದ 11 ಗ್ರಾಮಗಳಲ್ಲಿ ಮಹಾಬೆಳಕು ರಂಗಭೂಮಿ ಕಲಾವಿದರು ಭ್ರೂಣಲಿಂಗ ಪತ್ತೆ, ಭ್ರೂಣಹತ್ಯೆ, ತಾಯಿ–ಮಗುವಿನ ಆರೋಗ್ಯ, ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ, ಆಶಾಕಿರಣ, ಬಾಲ್ಯ ವಿವಾಹ ಇನ್ನೂ ಮುಂತಾದ ವಿಚಾರಗಳ ಕುರಿತು ಜಾಗೃತಿಯನ್ನು ಮೂಡಿಸುವ ಬೀದಿ ನಾಟಕ ಪ್ರದರ್ಶಿಸಲಿದ್ದಾರೆ ಎಂದರು.

ಜಿಲ್ಲಾ ಸರ್ವೇ ಶಿಕ್ಷಣಾಧಿಕಾರಿಗಳಾದ ಡಾ:ಮಹದೇವ ಪ್ರಸಾದ್, ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಸೋಮಣ್ಣ, ಮಹಾಬೆಳಕು ಅಧ್ಯಕ್ಷ ಕಾತ್ಯಾಯಿನಿ ಯಶೋ ಮಿತ್ರ ಆರೋಗ್ಯ ಇಲಾಖೆ ಸಿಬ್ಬಂದಿ ಚಂದ್ರಶೇಖರ, ನಾಗೇಂದ್ರ, ರವಿರಾಜ್, ಸರಳ, ಲಕ್ಷ್ಮಿ ಭಟ್, ರೇಖಾ, ಪುಷ್ಪ, ನಾಗಮ್ಮ, ಕಲಾವಿದರುಗಳಾದ ಅನುಸೂಯ ಬನ್ನೂರು, ಕೊಡಿಯಾಲ ಬಂದೇಶ, ಚೆಲುವಸ್ವಾಮಿ ಕುರುಬೂರು, ಶಂಕರ್ ಬನ್ನೂರು, ತ್ಯಾಗರಾಜು ದೇವರಹಳ್ಳಿ ಇತರರು ಹಾಜರಿದ್ದರು.

ಶ್ರೀ ಮುತ್ತುರಾಯಸ್ವಾಮಿಯ ವೈಭವದ ಜಾತ್ರೆ




ಪಿರಿಯಾಪಟ್ಟಣ, ಡಿ.9– ತಾಲೂಕಿನ ಆನೆಚೌಕೂರು ರಸ್ತೆಯಲ್ಲಿರುವ ಶ್ರೀ ಮುತ್ತುರಾಯಸ್ವಾಮಿ ದೇವಸ್ಥಾನದ 30ನೇ ವರ್ಷದ ಜಾತ್ರಾ ಮಹೋತ್ಸವವು ಶನಿವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಡಗರ ಸಂಭ್ರಮದಿಂದ ನೆರವೇರಿತು.

ಬೆಳಗ್ಗೆ 5.30 ರಿಂದ 6.30ರವರೆಗೆ ಸ್ವಾಮಿಗೆ ಹೊಳೆಮಜ್ಜನ ಸೇವೆ ಮತ್ತು ಅಭಿಷೇಕ, ಗಣಪತಿ ಹೋಮ, ನವಗ್ರಹ ಪೂಜೆ ನೆರವೇರಿತು ಮತ್ತು ಮಧ್ಯಾಹ್ನ 11.30 ಗಂಟೆಯಿಂದ ತೀರ್ಥ ಪ್ರಸಾದ ವಿನಿಯೋಗ, ನಂತರ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ನಡೆಯಿತು. ಬೂದಿತಿಟ್ಟು ಲಕ್ಷ್ಮಿಪುರ ಅಪಟೂರು ಚೌತಿ ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರು ಹಾಗೂ ತಾಲೂಕಿನ ಸಾವಿರಾರು ಭಕ್ತಾದಿಗಳು ಆಗಮಿಸಿ ಈ ಜಾತ್ರಾ ಮಹೋತ್ಸವಕ್ಕೆ ಸಾಕ್ಷಿಯಾದರು. ಈ ಸಂದರ್ಭದಲ್ಲಿ ಮುತ್ತುರಾಯಸ್ವಾಮಿ ಚಾರಿಟೆಬಲ್ ಟ್ರಸ್ಟ್‌ನ ಆಡಳಿತ ಮಂಡಳಿಯ ಪಟೇಲ್ ಶ್ರೀನಿವಾಸ್, ಮುತ್ತುರಾಜ್, ಅಪ್ಪಟೂರು ರಾಮಚಂದ್ರ, ಪಾಪಣ್ಣ ಗೌಡ, ಕೃಷ್ಣೇಗೌಡ, ಸುರೇಶ್, ರಮೇಶ್ ನವೀನ್, ಸುರೇಶ್, ಅರವಿಂದ್, ಆನಂದ್, ಪ್ರದೀಪ್, ಪ್ರವೀಣ್, ಚಿಮ್ಮಿ ಸೇರಿದಂತೆ ಸಾವಿರಾರು ಭಕ್ತರು ಹಾಜರಿದ್ದರು.

ಡಿ.24ರಂದು ಕಾಳಿಹುಂಡಿ ಡೇರಿಗೆ ಚುನಾವಣೆ

ತಿ. ನರಸೀಪುರ, ಡಿ.9– ತಾಲೂಕಿನ ಕಾಳಿಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರ ಚುನಾವಣೆ ಡಿ.24 ರಂದು ನಡೆಯಲಿದ್ದು, ಸಂಘದ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಲು ಡಿ.10 ರಿಂದ 16 ರವರೆಗೆ ಅವಕಾಶ ಕಲ್ಪಿಸಲಾಗಿದೆ. ಸದರಿ ಚುನಾವಣೆ ಪ್ರಕ್ರಿಯೆಗೆ ಅರ್ಹ ಮತದಾರರು ಭಾಗವಹಿಸುವಂತೆ ಮನವಿ ಮಾಡಲಾಗಿದ್ದು ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಣಾಧಿಕಾರಿ ಕೃಷ್ಣ ಸಿ. ಮತ್ತು ರಿಟರ್ನಿಂಗ್ ಆಫೀಸರ್ ರಮೇಶ್ ಭೇಟಿ ಮಾಡಬಹುದು ಎಂದು ತಿಳಿಸಿದ್ದಾರೆ.



ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನಡೆದ ರಾಜ್ಯ ಜನಜಾಗೃತಿ ಪದಾಧಿಕಾರಿಗಳ ಸಹಮಿಲನ ಹಾಗೂ ಮನಮುಕ್ತರ ಕುಟುಂಬೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಹೆಚ್.ಡಿ.ಕೋಟೆ ಜನಜಾಗೃತಿ ವೇದಿಕೆ, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಅಭಿನಂದಿಸಲಾಯಿತು. ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಪ್ರಭುಸ್ವಾಮಿ, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪ್ರಾದೇಶಿಕ ನಿರ್ದೇಶಕ ಜಯರಾಮ ನೆಲ್ಲಿತಾಂಯ, ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ, ಸಿ.ಎನ್.ನಾಗಣ್ಣ, ಹೊನ್ನನಾಯಕ, ಕನ್ನಡ ಪ್ರಮೋದ, ಕಿರಸಗೂರು ಶಂಕರ್, ಕಮಲ, ಯೋಗೇಶ್, ಪ್ರಸಾದ್ ಇದ್ದರು.

ಡಿ.27, 20ನೇ ವಾರ್ಡಿಗೆ ಉಪಚುನಾವಣೆ

ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ ಗೆಲುವು ಖಚಿತ

ಪೂರ್ವಭಾವಿ ಸಭೆಯಲ್ಲಿ ಶಾಸಕ ದರ್ಶನ್ ವಿಶ್ವಾಸ



ನಂಜನಗೂಡು, ಡಿ.9– ನಾನು ಶಾಸಕನಾದ ನಂತರ ನನ್ನ ಕ್ಷೇತ್ರದಲ್ಲಿ ನಡೆಯುತ್ತಿರುವ ನಗರಸಭೆಯ 20 ನೇ ವಾರ್ಡ್‌ನ ಮರುಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದ್ದೇನೆ. ನಮ್ಮ ಅಭ್ಯರ್ಥಿ ಗೆಲುವು ಖಚಿತ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ನಗರಸಭೆಯ 20ನೇ ವಾರ್ಡ್ ಉಪಚುನಾವಣೆ ಹಿನ್ನೆಲೆಯಲ್ಲಿ ಶನಿವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಇದೆ ತಿಂಗಳು 27 ರಂದು ನಗರಸಭೆಯ ವಾರ್ಡ್‌ಗೆ ಉಪ ಚುನಾವಣೆ ನಡೆಯಲಿದ್ದು, ಕಾರ್ಯಕರ್ತರು ಪಕ್ಷದ ಅಭ್ಯರ್ಥಿಯ ಗೆಲುವಿಗೆ ಶ್ರಮಿಸಬೇಕು. ರಾಜ್ಯದ ಜನತೆ ಪಕ್ಷದ 135 ಶಾಸಕರನ್ನು ಗೆಲ್ಲಿಸುವ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ಅಭೂತಪೂರ್ವ ಬೆಂಬಲ ನೀಡಿದ್ದಾರೆ, ಪಕ್ಷ ಚುನಾವಣೆ ಸಮಯದಲ್ಲಿ ಜನರಿಗೆ ನೀಡಿದ ಗ್ಯಾರಂಟಿಗಳನ್ನು ಈಡೇರಿಸಿದೆ, ಪಕ್ಷದ ಕಾರ್ಯಕ್ರಮಗಳನ್ನು ಜನರ ಮನೆ–ಮನೆಗೆ ತಲುಪಿಸಿ, ಪಕ್ಷದ ಅಭ್ಯರ್ಥಿಯ ಪರವಾಗಿ ಮತಯಾಚನೆ ಮಾಡಬೇಕು. 20ನೇ ವಾರ್ಡ್‌ನಲ್ಲಿ ಎರಡು ಬಾರಿ ಬಿಜೆಪಿ ಅಭ್ಯರ್ಥಿಗಳು ಜಯಗಳಿಸಿದ್ದಾರೆ. ಇಂತಹ ಸಂದರ್ಭದಲ್ಲಿ ನಾವು ಈ ಚುನಾವಣೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಅಭ್ಯರ್ಥಿ ಯಾರೇ ಆದರೂ ಅವರನ್ನು ಗೆಲ್ಲಿಸಿಕೊಂಡು ಬರುವುದು ನಮ್ಮ ಜವಾಬ್ದಾರಿ ಎಂದು ಹೇಳಿದರು.

ಸಭೆಯಲ್ಲಿ ಕಾಂಗ್ರೆಸ್ ಮುಖಂಡ ಕಳಲೆ ಕೇಶವಮೂರ್ತಿ, ಸಿ.ಎಂ.ಶಂಕರ್, ದೊರೆಸ್ವಾಮಿ, ನಗರಸಭೆ ಸದಸ್ಯರಾದ ಗಾಯಿತ್ರಿ ಮೋಹನ್, ಮಹೇಶ್, ಗಂಗಾಧರ್ ಪಾಲ್ಗೊಂಡಿದ್ದರು.

ರಸ್ತೆ ಅಪಘಾತದಲ್ಲಿ ಗಾಯಗೊಂಡ ಶಾಲಾ ಮಕ್ಕಳ ಆರೋಗ್ಯ ವಿಚಾರಿಸಿದ ಮಾಜಿ ಶಾಸಕ ಹರ್ಷವರ್ಧನ್



ಮಲ್ಲುಂಡಿ, ಡಿ.9– ಶುಕ್ರವಾರ ಟಾಟಾ ಏಸ್ ಪಲ್ಟಿಯಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶಾಲೆ ಮಕ್ಕಳನ್ನು ಭೇಟಿಯಾಗಿ ಮಾಜಿ ಶಾಸಕ ಬಿ.ಹರ್ಷವರ್ಧನ್ ಆರೋಗ್ಯ ವಿಚಾರಿಸಿ ಆತ್ಮಸ್ಥೈರ್ಯ ತುಂಬಿದರು.

ಬಳಿಕ ಮಾತನಾಡಿದ ಅವರು, ಸರ್ಕಾರ ಬಿಟ್ಟಿ ಭಾಗ್ಯಗಳನ್ನು ಜಾರಿಗೆ ತಂದು ಜನರ ಪ್ರಾಣದ ಜೊತೆ ಚೆಲ್ಲಾಟವಾಡುತ್ತಿದೆ. ಕಾಡಂಚಿನ ಗ್ರಾಮಗಳಲ್ಲಿ ಶಾಲಾ ಮಕ್ಕಳಿಗೆ ಶಾಲೆಗೆ ತೆರಳಲು ಬಸ್ ಸೌಲಭ್ಯವಿಲ್ಲದೆ ಈ ಖಾಸಗಿ ವಾಹನಗಳಲ್ಲಿ ತೆರಳುವ ಪರಿಸ್ಥಿತಿ ಉಂಟಾಗಿದೆ. ಇದಕ್ಕೆಲ್ಲ ಶಕ್ತಿ ಯೋಜನೆ ಕಾರಣವಾಗಿದೆ. ಇತ್ತೀಚಿನ ದಿನಗಳಲ್ಲಿ ಸರ್ಕಾರ ಶಕ್ತಿ ಯೋಜನೆಯನ್ನು ಜಾರಿಗೆ ತಂದು ಬಸ್ಸಿನಲ್ಲಿ ಮಹಿಳೆಯರ ಪ್ರಯಾಣ ಹೆಚ್ಚಾಗಿದೆ. ಆದ್ದರಿಂದ ಶಾಲೆ ಮಕ್ಕಳಿಗೆ ಬಸ್ಸಿನ ಸೌಲಭ್ಯಗಳು ಇಲ್ಲದೆ ಖಾಸಗಿ ವಾಹನದಲ್ಲಿ ತೆರಳುತ್ತಿದ್ದಾರೆ ಎಂದರು.

ಕಾಡಂಚಿನ ಗ್ರಾಮಗಳಲ್ಲಿ ಒಂದೆಡೆ ಹುಲಿ–ಚಿರತೆಗಳ ಭಯವಿದೆ. ಆದರೂ ಬಳ್ಳೂರಹುಂಡಿ ಗ್ರಾಮದಿಂದ ಹೆಡಿಯಾಲ ಗ್ರಾಮಕ್ಕೆ ಮಕ್ಕಳು ನಡೆದು ಶಾಲೆಗೆ ತೆರಳಬೇಕಾಗಿರುವುದು ಕಷ್ಟಕರ ವಿಷಯವಾಗಿದೆ. ಸರ್ಕಾರ ಮೊದಲು ಶಾಲಾ ಮಕ್ಕಳಿಗೆ ಬಸ್ಸಿನ ಸೌಲಭ್ಯ ದೊರಕಿಸಿಕೊಡಬೇಕು. ಗಾಯಗೊಂಡ ಮಕ್ಕಳಿಗೆ ಸರ್ಕಾರ ಉನ್ನತ ಚಿಕಿತ್ಸೆ ಕೊಡಬೇಕು ಎಂದು ಒತ್ತಾಯಿಸಿದರು. ಸ್ಥಳದಲ್ಲೇ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ಅಧಿಕಾರಿಗಳಿಗೆ ಕರೆ ಮಾಡಿ ಗ್ರಾಮೀಣ ಭಾಗಗಳಿಗೆ ಹೆಚ್ಚಿನ ಬಸ್ಸಿನ ಸೌಲಭ್ಯ ಒದಗಿಸಿ ಎಂದು ತಿಳಿಸಿದರು.

ಪುನರ್ವಸತಿಗೆ ಆಗ್ರಹಿಸಿ ಆದಿವಾಸಿ ಕುಟುಂಬಗಳ ಪ್ರತಿಭಟನೆ



ಹುಣಸೂರು, ಡಿ.9– 3418 ಆದಿವಾಸಿ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸುವಂತೆ ರಾಜ್ಯ ಹೈಕೋರ್ಟ್ ಆದೇಶ ನೀಡಿ, ಹತ್ತು ವರ್ಷವಾದರೂ ಜಾರಿಗೊಳಿಸದೆ ಇರುವುದನ್ನು ಖಂಡಿಸಿ ಬುಡಕಟ್ಟು ಕೃಷಿಕರ ಸಂಘ, ಆದಿವಾಸಿ ಗಿರಿಜನ ಮಹಿಳಾ ಸಂಘ ಹಾಗೂ ದಲಿತ ಚಳುವಳಿ ನವ ನಿರ್ಮಾಣ ವೇದಿಕೆ ಪುನರ್ವಸತಿ ಸಿಗದೆ ಕಷ್ಟದಲ್ಲಿರುವ ಕುಟುಂಬಗಳ ಜೊತೆ ಸೇರಿ ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಡಾ. ರಾಜೇಂದ್ರ ಅವರಿಗೆ ಮನವಿ ಸಲ್ಲಿಸಿವೆ.

ಮನವಿಯ ಪ್ರತಿಯನ್ನು ತಾಲೂಕು ಶಾಸಕರಾದ ಜಿ.ಡಿ.ಹರೀಶ್‌ಗೌಡರಿಗೂ ಸಲ್ಲಿಸಿ ಚಳಿಗಾಲದ ಅಧಿವೇಶನದಲ್ಲಿ ಇದನ್ನು ಸದನದಲ್ಲಿ ಚರ್ಚಿಸಿ ಸರ್ಕಾರದ ಗಮನ ಸೆಳೆಯಬೇಕೆಂದು ವಿನಂತಿಸಿವೆ. ಜಿಲ್ಲಾ ಬುಡಕಟ್ಟು ಕಲ್ಯಾಣ ಇಲಾಖೆಯ ಗಿರಿಜನ ಉಪಯೋಜನೆಯ ಜಿಲ್ಲಾಧಿಕಾರಿ ಗಳಾದ ಮುನಿರಾಜ್‌ರವರಿಗೂ ಸಲ್ಲಿಸಿ ಕೂಡಲೇ ಬುಡಕಟ್ಟು ಇಲಾಖೆಯ ಸಚಿವರು ಹಾಗೂ ಪ್ರಧಾನ ಕಾರ್ಯದರ್ಶಿ ಗಳಿಗೆ ಆದಿವಾಸಿ ಕುಟುಂಬಗಳ ಪರವಾಗಿ ಮನವರಿಕೆ ಮಾಡಿಕೊಡಬೇಕೆಂದು ವಿನಂತಿ ಮಾಡಿವೆ.

ಸತ್ಯಾಗ್ರಹದಲ್ಲಿ ದಲಿತ ಚಳುವಳಿ ನವ ನಿರ್ಮಾಣ ವೇದಿಕೆಯ ಹರಿಹರ ಆನಂದಸ್ವಾಮಿ, ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಪಿ.ಕೆ.ರಾಮು, ಕಾರ್ಯದರ್ಶಿ ಜಯಪ್ಪ, ಕಾನೂನು ಸೇವಾ ಪ್ರಾಧಿಕಾರದ ಮಾಜಿ ಸದಸ್ಯ ಬಿ.ಎಸ್.ವಿಠಲ್, ಗಿರಿಜನ ಮಹಿಳಾ ಸಂಘದ ಗಿರಿಜಾ ಮತ್ತು ಲಕ್ಷ್ಮಿ, ಡೀಡ್ ಸಂಸ್ಥೆಯ ಸಂಯೋಜಕರಾದ ಪ್ರಕಾಶ್, ನಿರ್ದೇಶಕರಾದ ಡಾ.ಎಸ್.ಶ್ರೀಕಾಂತ್, ಪಿರಿಯಾಪಟ್ಟಣದ ಬಸಪ್ಪ, ಈರಯ್ಯ, ಟಿ.ನರಸಿಪುರದ ಡಾ. ಚಂದ್ರಶೇಖರ್, ಮೈಸೂರಿನ ಪುಟ್ಟನಂಜಯ್ಯ, ಭಂಗವಾದಿ ನಾರಾಯಣಪ್ಪ ಮುಂತಾದವರು ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಮಾತನಾಡಿದರು.

ಅರಣ್ಯ ಹಕ್ಕಿನ ಕಾಯ್ದೆಯ ಅನ್ವಯ ಆದಿವಾಸಿಗಳಿಗೆ ಅರಣ್ಯ ಭೂಮಿ ಹಕ್ಕು, ನೆಲಸುಗಳ ಮೇಲಿನ ಹಕ್ಕು ನೀಡಬೇಕು. ಕಾನೂನುಬಾಹಿರವಾಗಿ ತಿರಸ್ಕರಿಸಿರುವ ಪ್ರಸ್ತಾವಗಳನ್ನು ಪುನರ್ ಪರಿಗಣಿಸಿ ಹಕ್ಕು ಪತ್ರ ನೀಡಬೇಕು. ಆಶ್ರಮ ಶಾಲೆಗಳು ಹಾಗೂ ಸರ್ಕಾರಿ ಶಾಲೆಗಳಲ್ಲಿ ಆದಿವಾಸಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು. ಗುಣಮಟ್ಟದ ಅಂಗನವಾಡಿ ಕೇಂದ್ರಗಳನ್ನು ತೆರೆಯಬೇಕು. ಆದಿವಾಸಿ ಪ್ರದೇಶಗಳನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಿ, ಆದಿವಾಸಿ ಪಂಚಾಯಿತಿ ಕಾಯ್ದೆಯ ಅನ್ವಯ ಆದಿವಾಸಿಗಳಿಗಾಗಿ ಪ್ರತ್ಯೇಕ ಪಂಚಾಯಿತಿ ರೂಪಿಸಬೇಕು ಎಂದು ಆಗ್ರಹಿಸಲಾಯಿತು.

ವೆಂಕಟರಮಣ ಶೆಟ್ಟಿ ನಿಧನ



ಪಿರಿಯಾಪಟ್ಟಣ, ಡಿ.9– ತಾಲೂಕಿನ ಭುವನಹಳ್ಳಿ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷರಾದ ವೆಂಕಟರಮಣ ಶೆಟ್ಟಿ ಅವರು ಶನಿವಾರ ಸಂಜೆ ನಿಧನರಾಗಿದ್ದಾರೆ. ದಿವಂಗತರು ಪತ್ನಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಹಲವಾರು ಗಣ್ಯರು ಸಂತಾಪ ಸೂಚಿಸಿದ್ದಾರೆ. ಸಂಘದ ಅಧ್ಯಕ್ಷ ಹರೀಶ್, ಮಾಜಿ ಅಧ್ಯಕ್ಷ ಲೋಕೇಶ್, ಮಲ್ಲೇಶ್, ಕುಮಾರ, ನಿರ್ದೇಶಕರಾದ ಜಯಣ್ಣ, ಬೀರಪ್ಪ, ಬಿ.ವಿ.ಗಿರೀಶ್, ನಿವೃತ್ತ ಶಿಕ್ಷಕ ಸಣ್ಣಸ್ವಾಮಿಗೌಡ, ಗ್ರಾಮ ಪಂಚಾಯತಿ ಅಧ್ಯಕ್ಷ ದೇವರಾಜ್, ಗ್ರಾಮದ ಯಜಮಾನರಾದ ಈಶ್ವರ್, ಮುಖಂಡರಾದ ನಾಗೇಂದ್ರ, ರಾಜೇಗೌಡ, ಸಂಘದ ಸದಸ್ಯರು, ಮಾಜಿ ಅಧ್ಯಕ್ಷರು ಮತ್ತು ಸದಸ್ಯರು, ಕಾರ್ಯದರ್ಶಿ ಸತೀಶ್, ಸಿಬ್ಬಂದಿಗಳು ಸದಸ್ಯರು ಸಂತಾಪ ಸೂಚಿಸಿದ್ದಾರೆ.

ಮೈಸೂರು ಸೇರಿದಂತೆ ನೆರೆ ಜಿಲ್ಲೆಗಳಲ್ಲಿ

ಡಿ.13ರವರೆಗೆ ಸಾಧಾರಣ ಮಳೆ ಸಾಧ್ಯತೆ

ಮೈಸೂರು,ಡಿ.9(ಪಿಎಂ)– ಭಾರತೀಯ ಹವಾಮಾನ ಇಲಾಖೆಯ ವರದಿಯಂತೆ ಡಿ.13ರವರೆಗೆ ಮೈಸೂರು, ಮಂಡ್ಯ, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ನಾಗನಹಳ್ಳಿಯ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ.

ಸದರಿ ನಾಲ್ಕು ಜಿಲ್ಲೆಗಳಲ್ಲಿ ಡಿ.9ರಿಂದ 13ರವರೆಗೆ ಮೋಡ ಕವಿದ ವಾತಾವರಣದೊಂದಿಗೆ ತುಂತುರುವಿನಿಂದ ಕೂಡಿದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಮೈಸೂರು ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 28.3–31 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 19–20 ಡಿಗ್ರಿ ಸೆಲ್ಸಿಯಸ್ ದಾಖಲಾಗಬಹುದು. ಬೆಳಗಿನ ಗಾಳಿಯ ತೇವಾಂಶ ಶೇ.94–97ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.60–68ರವರೆಗೆ ಮತ್ತು ಗಾಳಿಯು ಗಂಟೆಗೆ 8ರಿಂದ 10 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

ಕೊಡಗು ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 27–28 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 17–18 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ.92–96ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.53–78ರವರೆಗೆ ಮತ್ತು ಗಾಳಿಯು ಗಂಟೆಗೆ 4ರಿಂದ 6 ಕಿಲೋಮೀಟರ್ ವೇಗದಲ್ಲಿ ಬೀಸಬಹುದೆಂದು ಅಂದಾಜಿಸಲಾಗಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 30–31.2 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 14.9–17.1 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ.94–97ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.58–64ರವರೆಗೆ ಮತ್ತು ಗಾಳಿಯು ಗಂಟೆಗೆ 7ರಿಂದ 8 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆ ಇದೆ. ಮಂಡ್ಯ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 29–30.6 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 17.4–19.1 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ.94–97ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.51–67ರವರೆಗೆ ಮತ್ತು ಗಾಳಿಯು ಗಂಟೆಗೆ 11ರಿಂದ 12 ಕಿಲೋಮೀಟರ್ ವೇಗದಲ್ಲಿ ಬೀಸುವ ಸಂಭವವಿದೆ.

ಸದರಿ ನಾಲ್ಕೂ ಜಿಲ್ಲೆಗಳಲ್ಲಿ ತುಂತುರುವಿನಿಂದ ಕೂಡಿದ ಸಾಧಾರಣ ಮಳೆಯಾಗುವ ಸಾಧ್ಯತೆ ಕಾರಣ ರೈತರು ಭತ್ತ, ರಾಗಿ ಹಾಗೂ ಇತರೆ ಬೆಳೆಗಳ ಕಟಾವು ಮತ್ತು ಒಕ್ಕಣೆ ಕೆಲಸ ಕಾರ್ಯಗಳನ್ನು ಮುಂದಿನ 3ರಿಂದ 4 ದಿನಗಳವರೆಗೆ ಮುಂದೂಡುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಇಂದಿರಾ ಕ್ಯಾಂಟೀನ್‌ನಲ್ಲಿ ಮುದ್ದೆ, ಚಪಾತಿ ಭಾಗ್ಯ!



ಬೆಂಗಳೂರು, ಡಿ.9– ಹೊಸ ವರ್ಷಕ್ಕೆ ಸಿಲಿಕಾನ್ ಸಿಟಿ ಬೆಂಗಳೂರಿನ ಇಂದಿರಾ ಕ್ಯಾಂಟೀನ್‌ಗಳಲ್ಲಿ ಮಧ್ಯಾಹ್ನ ಮತ್ತು ರಾತ್ರಿ ಊಟಕ್ಕೆ ಮುದ್ದೆ ಮತ್ತು ಚಪಾತಿ ಭಾಗ್ಯ ಸಿಗಲಿದೆ.

ಹಿರಿಯ ನಾಗರಿಕರ ಬೇಡಿಕೆಯ ಮೇರೆಗೆ ಇಂದಿರಾ ಕ್ಯಾಂಟೀನ್ ಮೆನು ಬದಲಾಯಿಸಲು ಬಿಬಿಎಂಪಿ ಮುಂದಾಗಿದ್ದು, ಇದಕ್ಕೆ ಸರ್ಕಾರ ಕೂಡ ಗ್ರೀನ್ ಸಿಗ್ನಲ್ ನೀಡಿದೆ ಎಂದು ತಿಳಿದುಬಂದಿದೆ.

ಈವರೆಗೆ ಮಧ್ಯಾಹ್ನ ಮತ್ತು ರಾತ್ರಿ ಕೇವಲ ರೈಸ್ ಬಾತ್ ಅಥವಾ ಅನ್ನ, ಸಾಂಬರ್, ಮೊಸರನ್ನ ಮಾತ್ರ ವಿತರಣೆ ಮಾಡಲಾಗುತ್ತಿತ್ತು. ಹಿರಿಯ ನಾಗರಿಕರು, ಸಕ್ಕರೆ ಕಾಯಿಲೆ ಇರುವವರು ಸೇರಿದಂತೆ ಮೊದಲಾದವರು ಕೇವಲ ರೈಸ್ ಪದಾರ್ಥದ ಊಟ ಬೇಡ, ಮುದ್ದೆ, ಚಪಾತಿ ನೀಡುವಂತೆ ಬೇಡಿಕೆ ಇತ್ತು ಇದೀಗ ಇಂದಿರಾ ಕ್ಯಾಂಟೀನ್‌ಗಳಲ್ಲಿ ಊಟ ಮಾಡುವವರಿಗೆ ಮುದ್ದೆ ಭಾಗ್ಯ ನೀಡುವುದಕ್ಕೆ ಬಿಬಿಎಂಪಿ ಸಿದ್ಧತೆ ಮಾಡಲಾಗುತ್ತಿದೆ ಸಂಕ್ರಾಂತಿ ವೇಳೆಗೆ ಇಂದಿರಾ ಕ್ಯಾಂಟೀನ್‌ನಲ್ಲಿ ಮುದ್ದೆ ದೊರೆಯುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಸಮರ್ಪಕ ನಿರ್ವಹಣೆ ಕೊರತೆ, ಕಳಪೆ ಆಹಾರ ಪೂರೈಕೆ ಸೇರಿದಂತೆ ಮೊದಲಾದ ಕಾರಣದಿಂದ ಇಂದಿರಾ ಕ್ಯಾಂಟೀನ್‌ಗಳು ತಮ್ಮ ಕಳೆ ಕಳೆದುಕೊಂಡಿದ್ದವು. ಗ್ರಾಹಕರ ಸಂಖ್ಯೆಯಲ್ಲಿಯೂ ಇಳಿಕೆಯಾಗಿತ್ತು.

ಇದೀಗ ಮಧ್ಯಾಹ್ನ ಮತ್ತು ರಾತ್ರಿ ಊಟಕ್ಕೆ ಮುದ್ದೆ ಮತ್ತು ಚಪಾತಿ ನೀಡುವುದಕ್ಕೆ ತೀರ್ಮಾನಿಸಲಾಗಿದ್ದು, ಇದರಿಂದ ಇಂದಿರಾ ಕ್ಯಾಂಟೀನ್‌ಗಳಲ್ಲಿ ಮತ್ತೆ ಗ್ರಾಹಕರನ್ನು ಆಕರ್ಷಣೆಗೊಳಗಾಗುವಂತೆ ಮಾಡಲಿದೆ.

ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಅವರು ಮಾತನಾಡಿ, ಮಧ್ಯಾಹ್ನ ಮತ್ತು ರಾತ್ರಿ ಊಟಕ್ಕೆ ಚಪಾತಿ ಆರಂಭಿಸುವಂತೆ ಹಲವು ಬೇಡಿಕೆ ಇಟ್ಟಿದ್ದರು. ಹೀಗಾಗಿ ಜನವರಿ 26ರ ವೇಳೆಗೆ ಮೆನುವಿನಲ್ಲಿ ಇವುಗಳ ಸೇರ್ಪಡೆಗೊಳಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಇದಕ್ಕೆ ಸಾರ್ವಜನಿಕರು ಹೆಚ್ಚುವರಿ ವೆಚ್ಚ ಮಾಡಬೇಕಿಲ್ಲ. ಇಂದಿರಾ ಕ್ಯಾಂಟೀನ್ ಗ್ರಾಹಕರ ಸಂಖ್ಯೆಯಲ್ಲಿ ಗೋಲ್ ಮಾಲ್ ಮಾಡಲಾಗುತ್ತಿದೆ. ಸುಳ್ಳು ಲೆಕ್ಕ ನೀಡಿ ರಿಯಾಯಿತಿ ಹಣ ಲೂಟಿ ಮಾಡಲಾಗುತ್ತಿದೆ ಎಂಬ ಆರೋಪಗಳು ಕೇಳಿ ಬಂದಿದ್ದವು. ಹೀಗಾಗಿ, ಪ್ರತಿಯೊಂದನ್ನು ಡಿಜಿಟಲೀಕರಣದ ಮೂಲಕ ಪಾರದರ್ಶಕ ವ್ಯವಸ್ಥೆ ಮಾಡಲು ನಿರ್ಧರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಗರದ ಯಾವುದೇ ಇಂದಿರಾ ಕ್ಯಾಂಟೀನ್‌ಗೆ ಗ್ರಾಹಕ ತೆರಳಿ ಊಟ ಅಥವಾ ಉಪಹಾರದ ಕೂಪನ್ ಪಡೆದರೆ ಆ ಮಾಹಿತಿ ಕೇಂದ್ರ ಕಚೇರಿಗೆ ತಲುಪುವಂತೆ ತಂತ್ರಜ್ಞಾನ ಅಭಿವೃದ್ಧಿ ಪಡಿಸಲಾಗಿದೆ. ಇನ್ನು ಸ್ವಚ್ಛತೆ ಸೇರಿದಂತೆ ಇನ್ನಿತರೆ ಕಾರ್ಯಗಳಿಗೆ ಪ್ರತ್ಯೇಕವಾಗಿ ಆ್ಯಪ್ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಕನಿಷ್ಠ ಪಿಂಚಣಿ ನಿಗದಿಗೆ ಒತ್ತಾಯಿಸಿ ಪಿಎಫ್ ಆಯುಕ್ತರಿಗೆ ಮನವಿ

ಮೈಸೂರು, ಡಿ. 9– ಪಿಎಫ್ ಸಂಸ್ಥೆಗೆ ಒಳಪಡುವ ಇಪಿಎಸ್ 95ರಲ್ಲಿ ದೇಶಾದ್ಯಂತ 75 ಲಕ್ಷಕ್ಕೂ ಅಧಿಕ ನಿವೃತ್ತ ನೌಕರರಿದ್ದು, ಕಳೆದ ಹಲವು ವರ್ಷಗಳಿಂದ ಕೇಂದ್ರ ಸರ್ಕಾರ ಮತ್ತು ಇಪಿಎಫ್‌ಗೆ ಪತಿ, ಪತ್ನಿಯರಿಗೆ ಕನಿಷ್ಠ ಪಿಂಚಣಿ ನೀಡಿ ಎಂದು ಮನವಿ ಸಲ್ಲಿಸುತ್ತಿದ್ದರೂ ನಮ್ಮ ಬೇಡಿಕೆ ಕನಸಾಗಿಯೇ ಇದೆ ಎಂದು ಇಪಿಎಸ್ 95, ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ದೂರಿದರು.

ಕಾರ್ಮಿಕ ಭವಿಷ್ಯ ನಿಧಿಯಿಂದ ನಮಗೆ ಕೇವಲ 500 ರೂ.ಗಳಿಂದ 2 ಸಾವಿರ ಮಾಸಿಕ ಪಿಂಚಣಿ ಬರುತ್ತಿದ್ದು, ಜೀವನ ನಿರ್ವಹಣೆ ಕಷ್ಟವಾಗಿದೆ. ಔಷಧಿ ಮಾತ್ರೆಗೂ ಹಣವಿಲ್ಲದೆ ಪ್ರತಿದಿನ ನೂರಾರು ನಿವೃತ್ತರು ಅಸು ನೀಗುತ್ತಿದ್ದಾರೆ. ಆದರೆ ಸರ್ಕಾರಿ ಸೇವೆಯಿಂದ ನಿವೃತ್ತರಾದ ನೌಕರರು ಮಾಸಿಕ ಪಿಂಚಣಿ ಕನಿಷ್ಠ 15 ಸಾವಿರ ರೂ.ನಿಂದ 1 ಲಕ್ಷದವರೆಗೆ ಪಡೆಯುತ್ತಿದ್ದಾರೆ

ಇಪಿಎಸ್ 95 ನಿವೃತ್ತ ನೌಕರರ ಅನೇಕ ಸಂಘಟನೆಗಳು ಅವಿರತ ಹೋರಾಟ, ಪ್ರತಿಭಟನೆ, ರಸ್ತೆ ರೋಕೋ ಚಳವಳಿ ನಡೆಸುತ್ತಾ ಬಂದಿವೆ. ದೇಶದ ಅನೇಕ ಲೋಕಸಭಾ ಸದಸ್ಯರಿಗೆ, ಮಂತ್ರಿಗಳಿಗೆ ನಮ್ಮ ಮನವಿ ಸಲ್ಲಿಸಿದ್ದರೂ, ನಮಗೆ ಇದುವರೆಗೂ ನ್ಯಾಯ ದೊರಕಿಲ್ಲ ಎಂದು ಅವರು ಆರೋಪಿಸಿದರು.

ನಮ್ಮ ಸಮಸ್ಯೆಗಳ ಬಗ್ಗೆ ರಾಜ್ಯದ ಯಾವ ಲೋಕಸಭಾ ಸದಸ್ಯರು, ಲೋಕಸಭೆಯಲ್ಲಿ ಈ ವಿಷಯ ಕುರಿತು ಚಕಾರವೆತ್ತಿಲ್ಲ. ಕೂಡಲೇ ಸರ್ಕಾರ ಕನಿಷ್ಠ ಮಾಸಿಕ ಪಿಂಚಣಿಯನ್ನು 9 ಸಾವಿರ ರೂ. ಮತ್ತು ಡಿಎ ಸೇರಿಸಬೇಕು. ಇಪಿಎಸ್‌ನಿಂದ ಹೊರಗಿರುವ ಇಪಿಎಫ್ ನಿವೃತ್ತ ನೌಕರರಿಗೆ ಮಾಸಿಕ ಪಿಂಚಣಿಯನ್ನು 5 ಸಾವಿರ ರೂ., ಸ್ಥಗಿತಗೊಂಡಿರುವ ರೈಲು ಪ್ರಯಾಣ ರಿಯಾಯಿತಿಯನ್ನು ಪುನರ್ ಅನುಷ್ಠಾನಗೊಳಿಸಬೇಕು. ಉಚಿತ ವೈದ್ಯಕೀಯ ಚಿಕಿತ್ಸೆ ಸೌಲಭ್ಯ ಒದಗಿಸಬೇಕು. ನಿಧನರಾದ ಪತಿ, ಪತ್ನಿಯರಿಗೆ ಶೇ. 100 ರಷ್ಟು ಪಿಂಚಣಿ ನೀಡಬೇಕು ಎಂದು ಅವರು ಕೋರಿದರು. ಸಂಘದ ಅಧ್ಯಕ್ಷ ಜಿ. ಸ್ವಾಮಿಶೆಟ್ಟಿ, ಪ್ರಧಾನ ಕಾರ್ಯದರ್ಶಿ ಆರ್.ಜಿ. ಮೋಹನ ಕೃಷ್ಣ ಮತ್ತಿತರರು ಇದ್ದರು.

ವಿಪ್ರ ಮಹಿಳಾ ಸಮ್ಮೇಳನದ ಪೂರ್ವಭಾವಿ ಸಭೆ

ಮೈಸೂರು, ಡಿ. 9 – ಜ. 6 ಮತ್ತು 7 ರಂದು ಬೆಂಗಳೂರಿನ ಶ್ರೀ ಶೃಂಗೇರಿ ಶಂಕರ ಮಠದ ಆವರಣದಲ್ಲಿ ನಡೆಯಲಿರುವ ರಾಜ್ಯ ಮಟ್ಟದ 3ನೇ ವಿಪ್ರ ಮಹಿಳಾ ಸಮ್ಮೇಳನದ ಪೂರ್ವಭಾವಿಯಾಗಿ ಮೈಸೂರಿನಲ್ಲಿ ಡಿ. 23 ರಂದು ಜಿಲ್ಲಾ ಮಟ್ಟದ ಸ್ಪರ್ಧೆಯನ್ನು ಶ್ರೀರಾಂಪುರ 2ನೇ ಹಂತದಲ್ಲಿರುವ ಸಂಧ್ಯಾ ಸುರಕ್ಷಾ ಟ್ರಸ್ಟ್ ಶಾಕಂಬರಿ ಧಾರ್ಮಿಕ ಶ್ರದ್ಧಾ ಕೇಂದ್ರದಲ್ಲಿ ಬೆಳಗ್ಗೆ 8 ರಿಂದ ಸಂಜೆ 4 ರವರೆಗೆ ಏರ್ಪಡಿಸಲಾಗಿದೆ. ಭಾಗವಹಿಸುವವರು ಡಿ. 19 ರೊಳಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಕೋರಲಾಗಿದೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರಾದ ಮೈಸೂರು ಸಿಟಿ, ಲೋಕನಾಯಕನಗರ ಹೆಬ್ಬಾಳ್ ಮನೆ.ನಂ.128, ಯರಲ್ಲಿ ವಾಸವಾಗಿರುವ ವೀರಭದ್ರಯ್ಯನವರ ಮಗನಾದ ಸುಮಾರು 46 ವರ್ಷದ ಶ್ರೀ ಹೆಚ್.ವಿ. ಬಸವರಾಜು, ಇರ್ಯಾದೆಯ ಮೇರೆಗೆ, ಏನೆಂದರೆ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ದಟ್ಟಗಳ್ಳಿ 3ನೇ ಹಂತ, 8ನೇ ಎ ಮುಖ್ಯ ರಸ್ತೆ, ಮೊದಲನೇ ಬ್ಲಾಕ್, ಮನೆ.ನಂ.5209, ರಲ್ಲಿ ವಾಸವಾಗಿರುವ ಜಿ. ಗಂಗಾಧರ ಅವರ ಮಗ ಶ್ರೀ ಪಿ. ರವಿಶಂಕರ್ ರವರಿಗೂ ಹಾಗೂ ನನ್ನ ಕಕ್ಷಿದಾರರಿಗೂ ಕೆಳಕಂಡ ಸ್ವತ್ತನ್ನು ಮಾರಾಟ ಮಾಡುವ ಸಂಬಂಧ ದಿನಾಂಕ 27/10/2021 ರಂದು ಲಿಖಿತ ಒಡಂಬಡಿಕೆಯಾಗಿದ್ದು, ಸದರಿ ಸ್ವತ್ತನ್ನು ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು ಆ ಸಂಬಂಧ ಕ್ರಯದ ಕರಾರಿಗೆ ಸಂಬಂಧಪಟ್ಟಂತೆ ನನ್ನ ಕಕ್ಷಿದಾರರು ಈಗಾಗಲೇ ಪಿ. ರವಿಶಂಕರ್ ಅವರಿಗೆ ದಿನಾಂಕ 7/12/2023 ರಂದು ವಕೀಲರ ಮೂಲಕ ಕ್ರಯ ಪತ್ರ ಬರೆದುಕೊಡುವಂತೆ ನೋಟೀಸ್ ಅನ್ನು ಜಾರಿ ಗೊಳಿಸಿದ್ದು, ತಪ್ಪಿದಲ್ಲಿ ನನ್ನ ಕಕ್ಷಿದಾರರು ನ್ಯಾಯಾಲಯದಲ್ಲಿ ಸೂಕ್ತ ದಾವೆ ಹೂಡಲು ಸಿದ್ಧರಿದ್ದು, ಆದರೆ ಈ ಸಂಬಂಧ ಕೆಲವು ವ್ಯಕ್ತಿಗಳು ಷೆಡ್ಯೂಲ್ ಸ್ವತ್ತು ಮಾರಾಟಕ್ಕಿದೆ ಎಂದು ಸದರಿ ಷೆಡ್ಯೂಲ್ ಸ್ವತ್ತಿನ ಹತ್ತಿರ ಬಂದು ವಿಚಾರಿಸುತ್ತಿದ್ದು ಆ ಬಗ್ಗೆ ನನ್ನ ಕಕ್ಷಿದಾರರ ಗಮನಕ್ಕೆ ಬಂದಿದ್ದು ಯಾರೂ ಸದರಿ ಸ್ವತ್ತಿನ ಸಂಬಂಧ ಯಾವುದೇ ರೀತಿಯ ಕ್ರಯದ ಕರಾರು ಇನ್ನಿತರೆ ಯಾವುದೇ ರೀತಿಯ ವ್ಯವಹಾರ ಮಾಡಬಾರದೆಂದು ನನ್ನ ಕಕ್ಷಿದಾರರು ಈ ನೋಟೀಸ್ ಅನ್ನು ಸಾರ್ವಜನಿಕರಿಗೆ ಪ್ರಕಟಣೆ ಮೂಲಕ ಜಾರಿ ಮಾಡುತ್ತಿದ್ದು ಹಾಗೊಂದು ವೇಳೆ ಈ ನೋಟೀಸ್ ನೀಡಿದ್ದಾಗ್ಯೂ ಯಾರಾದರೂ ಕ್ರಯ ಇನ್ನಿತರೆ ಯಾವುದೇ ವ್ಯವಹಾರಗಳಿಗೆ ಭಾಗಿಯಾದರೆ ಅದು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಹಾಗೂ ಮುಂದೆ ನನ್ನ ಕಕ್ಷಿದಾರರು ಹೂಡುವ ದಾವೆಯಲ್ಲಿ ಅಂತಹವರನ್ನು ಪಕ್ಷಗಾರರನ್ನಾಗಿ ಮಾಡುತ್ತಾರೆ ಎಂದು ಮತ್ತು ಅದಕ್ಕೆ ತಗಲುವ ಖರ್ಚು ವೆಚ್ಚಗಳಿಗೆ ಅಂತಹವರು ಬದ್ಧರಾಗುತ್ತಾರೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು: ಮೈಸೂರು ನಗರದ ದಟ್ಟಗಳ್ಳಿ 3ನೇ ಹಂತ ಬಡಾವಣೆ 5209 ಸಂಖ್ಯೆಯನ್ನು ಹೊಂದಿರುವ ಪೂರ್ವದಿಂದ ಪಶ್ಚಿಮಕ್ಕೆ 24 ಮೀಟರ್ ಉತ್ತರದಿಂದ ದಕ್ಷಿಣಕ್ಕೆ 16 ಮೀಟರ್‌ಗಳ ಅಳತೆಯ ಒಟ್ಟು 360 ಚದರ ಮೀಟರ್ ಉಳ್ಳ ನಿವೇಶನದಲ್ಲಿ ನಿರ್ಮಿಸಿರುವ ಮನೆಗೆ ಚೆಕ್ಕಬಂದಿ: ಪೂರ್ವಕ್ಕೆ : ನಿ.ಸಂ.5328, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ :ನಿ.ಸಂ.5207, ದಕ್ಷಿಣಕ್ಕೆ : ರಸ್ತೆ

ಕಕ್ಷಿದಾರರ ಪರ ವಕೀಲರು, ಸಹಿ/– ಶ್ರೀ ಪಾಲಕ್ಷ, ವಕೀಲರು, ನಂ. 645, ಮೊದಲನೇ ಮಹಡಿ, ನಾರಾಯಣ ಶಾಸ್ತ್ರಿ ರಸ್ತೆ, ಶಾಂತಲ ಚಿತ್ರ ಮಂದಿರ ಹತ್ತಿರ, ಮೈಸೂರು

ಸಹಿ/– ಕಕ್ಷಿದಾರರು 9448075718

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರಾದ ಮೈಸೂರು ಸಿಟಿ, ಲೋಕನಾಯಕನಗರ ಹೆಬ್ಬಾಳ್ ಮನೆ.ನಂ.123, ರಲ್ಲಿ ವಾಸವಾಗಿರುವ ವೀರಭದ್ರಯ್ಯನವರ ಮಗನಾದ ಸುಮಾರು 46 ವರ್ಷದ ಶ್ರೀ ಹೆಚ್.ವಿ. ಬಸವರಾಜು, ಇರ್ಯಾದೆಯ ಮೇರೆಗೆ, ಏನೆಂದರೆ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ದಟ್ಟಗಳ್ಳಿ 3ನೇ ಹಂತ, 8ನೇ ಎ ಮುಖ್ಯ ರಸ್ತೆ, ಮೊದಲನೇ ಬ್ಲಾಕ್, ಮನೆ.ನಂ. 5209, ರಲ್ಲಿ ವಾಸವಾಗಿರುವ ಜಿ. ಗಂಗಾಧರ ಅವರ ಮಗ ಶ್ರೀ ಪಿ. ರವಿಶಂಕರ್ ರವರಿಗೂ ಹಾಗೂ ನನ್ನ ಕಕ್ಷಿದಾರರಿಗೂ ಕೆಳಕಂಡ ಸ್ವತ್ತನ್ನು ಮಾರಾಟ ಮಾಡುವ ಸಂಬಂಧ ದಿನಾಂಕ 12/3/2021 ರಂದು ಲಿಖಿತ ಒಡಂಬಡಿಕೆಯಾಗಿದ್ದು, ಸದರಿ ಸ್ವತ್ತನ್ನು ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು ಆ ಸಂಬಂಧ ಕ್ರಯದ ಕರಾರಿಗೆ ಸಂಬಂಧಪಟ್ಟಂತೆ ನನ್ನ ಕಕ್ಷಿದಾರರು ಈಗಾಗಲೇ ಪಿ. ರವಿಶಂಕರ್ ಅವರಿಗೆ ದಿನಾಂಕ 7/12/2023 ರಂದು ವಕೀಲರ ಮೂಲಕ ಕ್ರಯ ಪತ್ರ ಬರೆದುಕೊಡುವಂತೆ ನೋಟೀಸ್ ಅನ್ನು ಜಾರಿ ಗೊಳಿಸಿದ್ದು, ತಪ್ಪಿದಲ್ಲಿ ನನ್ನ ಕಕ್ಷಿದಾರರು ನ್ಯಾಯಾಲಯದಲ್ಲಿ ಸೂಕ್ತ ದಾವೆ ಹೂಡಲು ಸಿದ್ಧರಿದ್ದು, ಆದರೆ ಈ ಸಂಬಂಧ ಕೆಲವು ವ್ಯಕ್ತಿಗಳು ಷೆಡ್ಯೂಲ್ ಸ್ವತ್ತು ಮಾರಾಟಕ್ಕಿದೆ ಎಂದು ಸದರಿ ಷೆಡ್ಯೂಲ್ ಸ್ವತ್ತಿನ ಹತ್ತಿರ ಬಂದು ವಿಚಾರಿಸುತ್ತಿದ್ದು ಆ ಬಗ್ಗೆ ನನ್ನ ಕಕ್ಷಿದಾರರ ಗಮನಕ್ಕೆ ಬಂದಿದ್ದು ಯಾರೂ ಸದರಿ ಸ್ವತ್ತಿನ ಸಂಬಂಧ ಯಾವುದೇ ರೀತಿಯ ಕ್ರಯದ ಕರಾರು ಇನ್ನಿತರೆ ಯಾವುದೇ ರೀತಿಯ ವ್ಯವಹಾರ ಮಾಡಬಾರದೆಂದು ನನ್ನ ಕಕ್ಷಿದಾರರು ಈ ನೋಟೀಸ್ ಅನ್ನು ಸಾರ್ವಜನಿಕರಿಗೆ ಪ್ರಕಟಣೆ ಮೂಲಕ ಜಾರಿ ಮಾಡುತ್ತಿದ್ದು ಹಾಗೊಂದು ವೇಳೆ ಈ ನೋಟೀಸ್ ನೀಡಿದ್ದಾಗ್ಯೂ ಯಾರಾದರೂ ಕ್ರಯ ಇನ್ನಿತರೆ ಯಾವುದೇ ವ್ಯವಹಾರಗಳಿಗೆ ಭಾಗಿಯಾದರೆ ಅದು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಹಾಗೂ ಮುಂದೆ ನನ್ನ ಕಕ್ಷಿದಾರರು ಹೂಡುವ ದಾವೆಯಲ್ಲಿ ಅಂತಹವರನ್ನು ಪಕ್ಷಗಾರರನ್ನಾಗಿ ಮಾಡುತ್ತಾರೆ ಎಂದು ಮತ್ತು ಅದಕ್ಕೆ ತಗಲುವ ಖರ್ಚು ವೆಚ್ಚಗಳಿಗೆ ಅಂತಹವರು ಬದ್ಧರಾಗುತ್ತಾರೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು: ಮೈಸೂರು ನಗರದ ದಟ್ಟಗಳ್ಳಿ 3ನೇ ಹಂತ ಬಡಾವಣೆ 5208 ಸಂಖ್ಯೆಯನ್ನು ಹೊಂದಿರುವ ಪೂರ್ವದಿಂದ ಪಶ್ಚಿಮಕ್ಕೆ 24 ಮೀಟರ್ ಉತ್ತರದಿಂದ ದಕ್ಷಿಣಕ್ಕೆ 15 ಮೀಟರ್‌ಗಳ ಅಳತೆಯ ಒಟ್ಟು 384 ಚದರ ಮೀಟರ್ ಉಳ್ಳ ನಿವೇಶನದಲ್ಲಿ ನಿರ್ಮಿಸಿರುವ ಮನೆಗೆ ಚೆಕ್ಕಬಂದಿ: ಪೂರ್ವಕ್ಕೆ : ನಿ.ಸು.5237, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ : ನಿ.ಸಂ.5210

ಕಕ್ಷಿದಾರರ ಪರ ವಕೀಲರು, ಸಹಿ/– ಶ್ರೀ ಪಾಲಕ್ಷ, ವಕೀಲರು, ನಂ. 645, ಮೊದಲನೇ ಮಹಡಿ, ನಾರಾಯಣ ಶಾಸ್ತ್ರಿ ರಸ್ತೆ, ಶಾಂತಲ ಚಿತ್ರ ಮಂದಿರ ಹತ್ತಿರ, ಮೈಸೂರು

ಸಹಿ/– ಕಕ್ಷಿದಾರರು